"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

10ನೇ ಮಾರ್ಚ್ 2021
ಮಂಗಳವಾರ

## ವಿಷಯಾನುಕ್ರಮಣಿಕೆ

**01. ಪ್ರಮಾಣ ವಚನ**

**02. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**921 – ಕಲ್ಯಾಣ ಕರ್ನಾಟಕ ಭಾಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಬಗ್ಗೆ.**
– ಡಾ: ಚಂದ್ರಶೇಖರ್ ಬಿ.ಪಾಟೀಲ್
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**992 – ಶಿವಮೊಗ್ಗ ಜಿಲ್ಲೆಯಲ್ಲಿನ ವಸತಿ ನಿಲಯಗಳ ಬಗ್ಗೆ**
– ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು)
(ಶ್ರೀ ಆರ್.ಪ್ರಸನ್ನಕುಮಾರ್‌ರವರ ಪರವಾಗಿ)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**994 – ಪ್ರಾಣಿಗಳಿಗಾಗಿ ಒದಗಿಸಿರುವ ಆಂಬುಲೆನ್ಸ್ ಬಗ್ಗೆ**
– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**1025 – ಪಶುಸಂಗೋಪನೆ ಆಸ್ಪತ್ರೆ ಬಗ್ಗೆ**
– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**883 – ಕಲಬುರಗಿ ಜಿಲ್ಲೆ ಶಹಾಬಾದ ತಾಲ್ಲೂಕಿನ ಭಂಕೂರು ಗ್ರಾಮಕ್ಕೆ ರುದ್ರಭೂಮಿ ಬಗ್ಗೆ**
– ಡಾ:ತಳವಾರ್ ಸಾಬಣ್ಣ
– ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**912 – ಖಾಲಿಯಿರುವ ಪಶುವೈದ್ಯರು ಮತ್ತು ಇತರೆ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಬಗ್ಗೆ**
– ನಿರಾಣಿ ಹಣಮಂತ್ ರುದ್ರಪ್ಪ
– ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**1005 – ದಾವಣಗೆರೆ ವಿಶ್ವವಿದ್ಯಾನಿಲಯದ ಜಾಗವನ್ನು ಶೈಕ್ಷಣಿಕ ಉದ್ದೇಶಕ್ಕೆ ಬಿಟ್ಟು ಅನ್ಯ ಉದ್ದೇಶಗಳಿಗೆ ಮಂಜೂರು ಮಾಡಿರುವ ಬಗ್ಗೆ.**
- ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1035 – ಹಾಲಿನ ಬೆಲೆ ಹೆಚ್ಚಿಸುವ ಬಗ್ಗೆ**
- ಶ್ರೀ ಗೋವಿಂದ ರಾಜು
- ಶ್ರೀ ಪ್ರಭು ಬಿ.ಚವ್ಹಾಣ್(ಪಶುಸಂಗೋಪನಾ ಸಚಿವರು)

**(ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅನುಮತಿಸಲಾಯಿತು)**

**882 – ಚಾಲುಕ್ಯ ವೃತ್ತದಿಂದ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ರಸ್ತೆ ಕಲ್ಪಿಸುವ ಬಗ್ಗೆ**
- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಗೋವಿಂದ ಎಂ.ಕಾರಜೋಳ(ಉಪಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ)

**890 – ಕೊಡಗು ಜಿಲ್ಲೆಯ ಜಮ್ಮಾ ಬಾಣೆಯ ಪಹಣಿ ಬಗ್ಗೆ**
- ಶ್ರೀಮತಿ ಎಸ್.ವೀಣಾ ಅಚ್ಚಯ್ಯ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

**1017 – ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಅನುದಾನದ ಬಗ್ಗೆ**
- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**ತಡೆಹಿಡಿಯಲಾದ**

**ಪ್ರಶ್ನೆ 756 – ಅಕಾಲಿಕವಾಗಿ ಸುರಿದ ಆಲಿಕಲ್ಲು ಮಳೆಯಿಂದ ಆಗಿರುವ ಬೆಳೆ ನಷ್ಟದ ಬಗ್ಗೆ**
- ಶ್ರೀ ಎಂ.ಎ.ಗೋಪಾಲಸ್ವಾಮಿ
- ಶ್ರೀ ಆರ್.ಅಶೋಕ್(ಕಂದಾಯ ಸಚಿವರು)

## ಅ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**03. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) ಉಡುಪಿ ಜಿಲ್ಲೆಯ ನಾಗರಿಕರಿಗೆ ದುಷ್ಪರಿಣಾಮ ಬೀರುತ್ತಿರುವ ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆ.
- ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ 37 ಲಕ್ಷ ನಷ್ಟವಾಗಿರುವ ಕುರಿತು ಲೆಕ್ಕಪರಿಶೋಧಕರು ವರದಿ ಮಾಡಿರುವ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಯು.ಬಿ.ವೆಂಕಟೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಇ) ಬೆಂಗಳೂರು ಮತ್ತು ನಗರ ಪ್ರದೇಶಗಳಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆಯಾಗುತ್ತಿರುವ ಬಗ್ಗೆ.
– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಈ) ಥರ್ಮೋ ಎಲೆಕ್ಟ್ರಿಕ್ ತಂತ್ರಾಶವನ್ನು ಸರ್ಕಾರ ಅನುಷ್ಠಾನಗೊಳಿಸುವ ಬಗ್ಗೆ.
– ಶ್ರೀಮತಿ ಭಾರತಿ ಶೆಟ್ಟಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**04. ಪ್ರಕಟಣೆ**

**05. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಗಳಿಗೆ ಹದಿನೈದು ದಿನಗಳಲ್ಲಿ ಸರ್ಕಾರ ಉತ್ತರ ನೀಡದಿರುವ ಬಗ್ಗೆ.**
– ಶ್ರೀ ಪಿ.ಆರ್.ರಮೇಶ್
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**06. ಸಭೆಯ ಮುಂದಿಡಲಾದ ಕಾಗದ ಪತ್ರ**

**07. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ**

**ವಿಷಯ:–** ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸ, ಶಿರೊಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಕುರಿತು

– ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು)

**08. ಸದನದಲ್ಲಿ ಸಂಬಂಧಪಟ್ಟ ಸಚಿವರುಗಳು ಹಾಜರಿಲ್ಲದಿರುವ ಬಗ್ಗೆ.**
– ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**09. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ**
– ಶ್ರೀ ಅಡಗೂರ್ ಹೆಚ್. ವಿಶ್ವನಾಥ್
– ಶ್ರಿ ಗೋವಿಂದ ಎಂ.ಕಾರಜೋಳ (ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆ)

**10. ಪ್ರಕಟಣೆ**

**11. ಸದನದಲ್ಲಿ ಸಂಬಂಧಪಟ್ಟ ಸಚಿವರುಗಳು ಹಾಜರಿಲ್ಲದಿರುವ ಬಗ್ಗೆ.**

– ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

– – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(349) 10.03.2021 10.30 ವೈಎಲ್-ಆರ್‌ಎನ್**

**ಕರ್ನಾಟಕ ವಿಧಾನ ಪರಿಷತ್ತು**

**ಬುಧವಾರ, 10ನೇ ಮಾರ್ಚ್ 2021**

**ಸದನವು ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 37 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1.ಪ್ರಮಾಣ ವಚನ ಸ್ವೀಕಾರ

**ಸಭಾಪತಿಯವರು:-** ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ ಶ್ರೀ ತುಳಸಿ ಮುನಿರಾಜುಗೌಡರವರು ಪ್ರಮಾಣ ವಚನ ಸ್ವೀಕರಿಸಬೇಕೆಂದು ಹೇಳುತ್ತೇನೆ.

**ಶ್ರೀ ತುಳಸಿ ಮುನಿರಾಜುಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಸದಸ್ಯನಾಗಿ ನಿರ್ವಾಚನಾ ಹೊಂದಿದವನಾಗಿ, ವಿಧಿದ್ವಾರ ಸ್ಥಾಪಿತವಾದ ಭಾರತ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಸತ್ಯ, ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(350) 10.03.2021/10.40/ಎಸ್‌ಕೆ-ಆರ್‌ಎನ್

## 02. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1049**

**ಸಭಾಪತಿಯವರು:-** ಮಾನ್ಯ ಹರೀಶ್ ಕುಮಾರ್‌ರವರೇ ತಮ್ಮ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾವಣೆಯಾಗಿರುವುದರಿಂದ ಮುಂದಿನ ವಾರ ಉತ್ತರ ಸಿಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹದಿನೈದು ದಿನ ಕಾಲಾವಕಾಶವನ್ನು ಕೊಡಿ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಹದಿನೈದು ದಿವಸ ಕಾಲಾವಕಾಶವನ್ನು ಕೊಡಲಾಗುವುದಿಲ್ಲ. ಮುಂದಿನ ವಾರ ಉತ್ತರವನ್ನು ಕೊಡಿ. ಈ ರೀತಿಯ ಪ್ರಶ್ನೆಗಳಿಗೆ ಒಂದು ವಾರದಲ್ಲಿ ಉತ್ತರವನ್ನು ಒದಗಿಸಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 921**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಚಂದ್ರಶೇಖರ ಬಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದರೆ, ಹಣಕಾಸು ಸಂಸ್ಥೆಗಳಿಂದ ಹಣವನ್ನು ಪಡೆದಿರುತ್ತಾರೆ. ಸರಿಯಾದ ಸಮಯದಲ್ಲಿ ಮಳೆ ಬರದಿದ್ದ ಕಾರಣ ಮತ್ತು ಹೊಲದಲ್ಲಿ ಬೆಳೆ ಬಾರದ ಕಾರಣದಿಂದಾಗಿ ಹಾಗೂ ಸಂಸ್ಥೆಗೆ ಹಣವನ್ನು ಕಟ್ಟಲಾಗದ ಕಾರಣ, ರೈತರು ಎದೆ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

**ಸಭಾಪತಿಯವರು:-** ಖಾಸಗಿಯಲ್ಲಿ ರೈತರು ಸಾಲವನ್ನು ಪಡೆದುಕೊಳ್ಳುತ್ತಾರೆ. ಅದನ್ನು ಕಟ್ಟದೇ ಆಗದಿರುವ ಕಾರಣಕ್ಕಾಗಿ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದನ್ನು ತಡೆಯುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳುತ್ತದೆಯೇ ಎಂಬುದು ಮಾನ್ಯ ಸದಸ್ಯರ ಪ್ರಶ್ನೆಯಾಗಿದೆ.

**ಶ್ರೀ ಆರ್. ಅಶೋಕ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆ ಏನೆಂದರೆ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಲ ಬಾಧೆಗೆ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ? ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಲ ಬಾಧೆಯಿಂದ 366 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಂದರೆ, ಬಳ್ಳಾರಿ, ಬೀದರ್, ರಾಯಚೂರು, ಯಾದಗಿರಿ, ಗುಲ್ಬರ್ಗಾ, ಕೊಪ್ಪಳ ಒಟ್ಟು 366 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರಲ್ಲಿ 357 ಜನ ರೈತರಿಗೆ ಪರಿಹಾರದ ವಿತರಣೆಯನ್ನು ಮಾಡಿದ್ದೇವೆ. ಇನ್ನುಳಿದ 9 ಪ್ರಕರಣಗಳಲ್ಲಿ ಪರಿಹಾರದ ವಿತರಣೆ ಕೊಡಬೇಕಾಗಿದೆ. ಅದರಲ್ಲಿ ಎರಡು ಪ್ರಕರಣ ಅಂದರೆ ಇಬ್ಬರು ಹೆಂಡತಿ ಇರುವುದರಿಂದ ಅದು ಸಮಸ್ಯೆಯಾಗಿ ಉಳಿದಿದೆ. ಉಳಿದಂತಹ 6 ಜನ ರೈತರಿಗೆ ವಾರದೊಳಗೆ ಪರಿಹಾರ ವಿತರಣೆಯನ್ನು ಮಾಡಲಾಗುವುದು. ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಸರ್ಕಾರದಿಂದ ರೂ. 5,00,000/- ಗಳ ಪರಿಹಾರವನ್ನು ನೀಡಲಾಗುತ್ತಿದೆ. ಸಾಮಾಜಿ ಭದ್ರತಾ ಪಿಂಚಣಿ ಯೋಜನೆಯಡಿ ಮಾಸಿಕ ರೂ. 2000/-ಗಳ ಪಿಂಚಣೆ ನೀಡಲಾಗುತ್ತಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆರೋಗ್ಯ ಕಾರ್ಡ್ ನೀಡಲಾಗುತ್ತಿದೆ. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಸ್ನಾತಕೋತ್ತರ ಪದವಿಯ ಹಂತದವರೆಗೆ ಶಿಕ್ಷಣವನ್ನು ಮುಂದುವರಿಸಲು ಅನುವಾಗುವಂತೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಮತ್ತು ವಸತಿ ವೆಚ್ಚದ ಮರು ಪಾವತಿ ಮಾಡುವಂತೆ ಅನುಕೂಲ ಕಲ್ಪಿಸಲಾಗಿದೆ. ರಾಜ್ಯದಲ್ಲಿ ಈ ವರ್ಷ ಹಾವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡಿತವಾಗಿರುವಂತಹದ್ದು ಸುಮಾರು 478 ಪ್ರಕರಣಗಳಾಗಿದೆ. ಸುಮಾರು 9.54 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಣವೆ ನಷ್ಟವಾಗಿರುವಂತಹದ್ದು ಸುಮಾರು 1183 ಪ್ರಕರಣಗಳಾಗಿದೆ. ಸುಮಾರು 1.17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಬಣವೆಗೆ ಸುಮಾರು 20 ಸಾವಿರ ರೂಪಾಯಿಗಳು ಮತ್ತು ಆಕಸ್ಮಿಕ ಮರಣಕ್ಕೆ 2 ಲಕ್ಷ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ಪದೇ ಪದೇ ರೈತರು ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಡೆಗಟ್ಟಬೇಕು ಎನ್ನುವ ದೃಷ್ಟಿಯಿಂದ ಎಲ್ಲಾ ಸರ್ಕಾರಗಳು ನಿರಂತರವಾದ ಪ್ರಯತ್ನಗಳನ್ನು ಮಾಡುತ್ತಿದೆ. ನಾನು ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ, ರೈತರು ಆತ್ಮಸ್ಥೆರ್ಯ ಕಳೆದುಕೊಳ್ಳುವುದು ಬೇಡ. ಸರ್ಕಾರ ತಮ್ಮ ಜೊತೆಯಲ್ಲಿದೆ. ಸರ್ಕಾರದಿಂದ ರೈತರಿಗೆ ನ್ಯಾಯ ಸಿಗಬೇಕಾಗಿದೆ. ಬೆಳೆ ಪರಿಹಾರವಿರಬಹುದು. ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್ ಮುಖಾಂತರ ಬೆಳೆ ಪರಿಹಾರವನ್ನು ಕೊಡುತ್ತಿದ್ದೇವೆ. ಅದೊಂದೇ ಪರಿಹಾರವಲ್ಲ. ದಯವಿಟ್ಟು, ತಮ್ಮ ಜೊತೆ ಸರ್ಕಾರವಿದೆ ಎಂದು ನಾನು ರೈತಾಪಿ ಜನರಿಗೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಜಿಲ್ಲೆಗಳ ಹೆಸರುಗಳನ್ನು ತಾವು ಹೇಳಿದ್ದೀರಲ್ಲ. ಬಳ್ಳಾರಿ ವಿಜಯನಗರವಾಗಿದೆ. ಇನ್ನಷ್ಟು update ಮಾಡಿಕೊಳ್ಳಿ.

**ಸಭಾಪತಿಯವರು:–** ತಾವು ಬದಲಾವಣೆ ಮಾಡಿಕೊಳ್ಳಿ. ಮಾನ್ಯ ಪ್ರಸನ್ನ ಕುಮಾರ್‌ರವರ ಪರವಾಗಿ ಮಾನ್ಯ ನಾರಾಯಣಸ್ವಾಮಿಯವರೇ ಪ್ರಶ್ನೆಯನ್ನು ಕೇಳಿ.

**ಡಾ॥ ಚಂದ್ರಶೇಖರ ಬಿ.ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಗೆ ಇನ್ನೂ ಕೊಟ್ಟಿಲ್ಲ.

**ಸಭಾಪತಿಯವರು:–** ಅಯಿತು ತಾವು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 992**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣ ಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತರು)(ಶ್ರೀ ಆರ್. ಪ್ರಸನ್ನ ಕುಮಾರ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಪ್ರಶ್ನೆ ಏನೆಂದರೆ, ಶಿವಮೊಗ್ಗ ಜಿಲ್ಲೆಯಲ್ಲಿ ಹಿಂದುಳಿದ ವರ್ಗದ ಇಲಾಖೆಯಡಿಯಲ್ಲಿ ಬರುವ ವಸತಿ ನಿಲಯಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಸ್ವಂತ ಕಟ್ಟಡಗಳು ಹಾಗೂ ಬಾಡಿಗೆ ಕಟ್ಟಡಗಳನ್ನು ಹೊಂದಿರುವ ವಸತಿ ನಿಲಯಗಳೆಷ್ಟು ಎಂಬ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ 60 ಮೆಟ್ರಿಕ್-ಪೂರ್ವ ಹಾಗೂ 72 ಮೆಟ್ರಿಕ್-ನಂತರದ ಹೀಗೆ ಒಟ್ಟು 132 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ವಿದ್ಯಾರ್ಥಿ ನಿಲಯಗಳ ಪೈಕಿ 105 ವಿದ್ಯಾರ್ಥಿ ನಿಲಯಗಳು ಸ್ವಂತ/ಉಚಿತ ಕಟ್ಟಡಗಳಲ್ಲಿ ಹಾಗೂ 27 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದು ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಜಿಲ್ಲೆಯಲ್ಲಿ ಹಿಂದುಳಿದ ವರ್ಗಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳ ಸಂಖ್ಯೆ ಬಹಳಷ್ಟು ಇರುವುದರಿಂದ, ಬೇಡಿಕೆ ಕೂಡ ಇನ್ನೂ ಜಾಸ್ತಿಯಿದೆ. ದಯವಿಟ್ಟು, ಹೆಚ್ಚು ವಸತಿ ನಿಲಯಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದ ಗಮನವನ್ನು ಸೆಳೆದು, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಹೆಚ್ಚು ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಮಾನ್ಯ ಸಚಿವರು ಅವಕಾಶ ಮಾಡಿಕೊಡುವಂತಹದ್ದು ಮೊದಲನೇ ಪ್ರಸ್ತಾವನೆ.

ಎರಡನೆಯದಾಗಿ, ವಸತಿ ನಿಲಯಗಳಿಗೆ ಆಹಾರ ಧಾನ್ಯ ಸರಬರಾಜು ಮಾಡುವ ಸಂಸ್ಥೆ ಯಾವುದು; ಮತ್ತು ಆಹಾರ ಧಾನ್ಯ ಗುಣಮಟ್ಟದಾಗಿಯೇ; ಈ ಸಂಸ್ಥೆಯವರು ಎಷ್ಟು ವರ್ಷಗಳಿಂದ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಆಹಾರ ಧಾನ್ಯಗಳನ್ನು ಯಾರ್ಯಾರ ಸರಬರಾಜು ಮಾಡುತ್ತಾರೆಂದು ಮಾನ್ಯ ಸಚಿವರು ಉತ್ತರ ನೀಡಿದ್ದಾರೆ. ವಿದ್ಯಾರ್ಥಿ ನಿಲಯಗಳಿಗೆ ಸರಬರಾಜು ಮಾಡುವ ಆಹಾರ ಧಾನ್ಯಗಳು ಉತ್ತಮ ಗುಣಮಟ್ಟದ್ದಾಗಿರುತ್ತದೆ ಎಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ವಾಸ್ತವಿಕವಾಗಿ ಅಲ್ಲಿರುವ ವಿದ್ಯಾರ್ಥಿ ನಿಲಯಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಜೊತೆ ಮಾತನಾಡಿದಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಏನು ಊಟವನ್ನು ಕೊಡುತ್ತಿದ್ದಾರೋ, ಅದು ಬಹಳಷ್ಟು ಕಳಪೆ ಗುಣಮಟ್ಟದಾಗಿದೆ. ಊಟವನ್ನು ತಿನ್ನುವುದಕ್ಕೂ ಕೂಡ ಆಗುತ್ತಿಲ್ಲ ಎಂಬ ದೂರು ಸಾಕಷ್ಟು ವಿದ್ಯಾರ್ಥಿಗಳಿಂದ ಬರುತ್ತಿದೆ. ದಯವಿಟ್ಟು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಅಥವಾ ಇಲ್ಲವೇ? ಸರ್ಕಾರದ ಗಮನಕ್ಕೆ ಬಂದಿದ್ದರೆ, ಸಂಸ್ಥೆಯವರು ವಿದ್ಯಾರ್ಥಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿಲಯಗಳಿಗೆ ಆಹಾರ ಧಾನ್ಯಗಳು ಸರಬರಾಜು ಮಾಡುವುದಕ್ಕೆ ಇವರಿಗೆ ಏಕೆ continuous ಆಗಿ ಆದೇಶವನ್ನು ಕೊಡಬೇಕು? ಸರಬರಾಜು ಮಾಡುವವರನ್ನು ಏಕೆ ಬದಲಾವಣೆ ಮಾಡಬಾರದು? ಆ ವಿದ್ಯಾರ್ಥಿಗಳು ಬಡ ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ಸಾಕಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುವುದಕ್ಕೆ ಬಂದಂತಹವರು. ದಯವಿಟ್ಟು, ವಿದ್ಯಾರ್ಥಿಗಳಿಗೆ ಉತ್ತಮವಾದ ಪೌಷ್ಟಿಕಾಂಶವುಳ್ಳ ಊಟವನ್ನು ಕೊಡಬೇಕೆಂದು ಹೇಳುತ್ತಾ, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೆಚ್ಚುವರಿ ಪ್ರಶ್ನೆಯನ್ನು ಕೇಳಿದ್ದಾರೆ.

**(ಮುಂದು)**

**(351) 10.03.2021, 10.50, ಟಿಸಿಹೆಚ್-ಎಂಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಶಿವಮೊಗ್ಗದಲ್ಲಿರುವ ಬಾಡಿಗೆ ಕಟ್ಟಡ ಮತ್ತು ಸ್ವಂತ ಕಟ್ಟಡಗಳ ಬಗ್ಗೆ ಹೇಳಿದ ನಂತರ, ಇನ್ನೂ ಕೂಡ ಅನೇಕ ವಿದ್ಯಾರ್ಥಿಗಳು ವಸತಿ ನಿಲಯ ಸಿಗದೇ ಹೊರಗೆ ಇದ್ದಾರೆ. ನೀವು ಅವರಿಗೆ ಏನು ಮಾಡುತ್ತೀರಿ ಎನ್ನುವುದು ಅವರ ಪ್ರಶ್ನೆಯಾಗಿದೆ. ಈಗಾಗಲೇ ಇಷ್ಟು ವಿದ್ಯಾರ್ಥಿಗಳೂ ಹೊರಗೆ ಇದ್ದಾರೆ. ವಸತಿ ಶಿಕ್ಷಣಕ್ಕೆ ಅರ್ಜಿ ಹಾಕಿರತಕ್ಕಂಥವರು ಎಷ್ಟು ಜನ ಇದ್ದಾರೆ? ಅದರಲ್ಲಿ ವಿದ್ಯಾಸಿರಿಯನ್ನು ಎಷ್ಟು ಜನರಿಗೆ ಕೊಡಬಹುದು. ಇದನ್ನೆಲ್ಲಾ ಪಟ್ಟಿಯನ್ನು ನಾವು ಮಾಡುತ್ತಿದ್ದೇವೆ. ಅಗತ್ಯ ತುರ್ತಾಗಿ ಕೆಲವು ಬಾಡಿಗೆಗೆ ಕಟ್ಟಡಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ನಾವು ಈಗಾಗಲೇ ಶೇ.5 ಹೆಚ್ಚಿಗೆ ಮಾಡಿದ್ದೇವೆ. ಶೇ.80 ರಿಂದ ಶೇ.100 ಮಾಡಿದ್ದೇವೆ. ಮತ್ತೆ ನಾವು ಶೇ.100 ರಿಂದ ಶೇ.5 ಹೆಚ್ಚಿಗೆ ಮಾಡಿದ್ದೇವೆ. ಇದರಿಂದ ಸುಮಾರು 5000 ವಿದ್ಯಾರ್ಥಿಗಳಿಗೆ ಅವಕಾಶವಾಗುತ್ತದೆ. ಅದನ್ನೂ ಕೂಡ ಶೇ.25 ಕ್ಕೆ ಹೆಚ್ಚಿಗೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತೆ ಕೆಲವು ಕಡಿಮೆಯಾದರೆ, ಬಾಡಿಗೆ ಕಟ್ಟಡಗಳನ್ನಾದರೂ ತೆಗೆದುಕೊಂಡು ಆ ಮಕ್ಕಳಿಗೆ ವಸತಿ ಮಾಡುವಂಥದ್ದು ಆಗುತ್ತದೆ. ನಾವು ಅದರಲ್ಲೂ ಹೆಣ್ಣುಮಕ್ಕಳಿಗೆ ಹೆಚ್ಚಿಗೆ ಅವಕಾಶಗಳನ್ನು ಕೊಡುವಂಥದ್ದು ಮತ್ತು ಉಳಿದವರಿಗೆ ವಿದ್ಯಾಸಿರಿ ಕೊಡಬೇಕೆಂದು ಮಾಡುತ್ತಿದ್ದೇವೆ. ಇನ್ನು ಎರಡನೆಯದಾಗಿ, ಆಹಾರ ಸರಬರಾಜನ್ನು ಯಾವ ರೀತಿ ಮಾಡುತ್ತೀರಿ. ಅದು ಪಾರದರ್ಶಕವಾಗಿಲ್ಲ. ಹಾಗಾಗಿ, ಗುಣಮಟ್ಟದ ಕೊರತೆ ಇದೆಯೆಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಸುಮಾರು 10 ರಿಂದ 12 ಹಾಸ್ಟೆಲ್‌ಗಳಿಗೆ ಬೇರೆ ಬೇರೆ ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೆನು. ನಾನು ತಮ್ಮ ಮೂಲಕ ಮಾನ್ಯ ಸಭಾಪತಿಯವರಿಗೆ ವಿನಂತಿ ಮಾಡುವುದೇನೆಂದರೆ, ನಮ್ಮೆಲ್ಲಾ ಎಂ.ಎಲ್.ಸಿ. ಮತ್ತು ಎಂ.ಎಲ್.ಎ.ಗಳು ಅವರವರ ಕ್ಷೇತ್ರದ ವ್ಯಾಪ್ತಿಯಲ್ಲಿರತಕ್ಕಂಥ ಹಾಸ್ಟೆಲ್‌ಗಳಿಗೆ ಪ್ರವಾಸದ ಮಧ್ಯೆ ಅರ್ಧ ಗಂಟೆ ಹೋಗಿ ಅಲ್ಲಿರತಕ್ಕಂಥ ಮಕ್ಕಳನ್ನು ಮಾತನಾಡಿಸಿದರೆ, ಅಲ್ಲಿರುವಂಥ ಆಡಳಿತಾತ್ಮಕವಾದ ವ್ಯವಸ್ಥೆಗಳು ಮತ್ತು ಅಲ್ಲಿರುವಂಥ ಅಡುಗೆ ಮನೆ ಇವೆಲ್ಲವನ್ನೂ ನೋಡಿದಾಗ, ಒಂದಷ್ಟು ಜಾಗೃತಿ ಮೂಡುತ್ತದೆಂದು ನನಗೆ ಅನಿಸುತ್ತದೆ. ಅನೇಕ ಜನ ಶಾಸಕರುಗಳು ಈ ಪ್ರಯತ್ನವನ್ನು ಮಾಡುತ್ತಿದ್ದಾರೆ. ಮಾನ್ಯ ಸಭಾಪತಿಯವರೇ, ತನ್ಮೂಲಕ ನಾನು ಎಲ್ಲಾ ಎಂ.ಎಲ್.ಸಿ. ಮತ್ತು ಎಂ.ಎಲ್.ಎ.ಗಳಿಗೆ ವಿನಂತಿ ಮಾಡುತ್ತೇನೆ. ತಮ್ಮ ತಮ್ಮ ಕ್ಷೇತ್ರದಲ್ಲಿರುವ ಹಾಸ್ಟೆಲ್‌ಗಳಿಗೆ ಸೌಜನ್ಯದ ಭೇಟಿ ನೀಡುವಂಥ ಕೆಲಸಗಳನ್ನು ಮಾಡಬೇಕು. ಇದರಿಂದಾಗಿ ಆಡಳಿತ ಚುರುಕಾಗುತ್ತದೆ. ಅವರ ಮೂಲ ಪ್ರಶ್ನೆ ಇರುವುದೇನೆಂದರೆ, ಪಾರದರ್ಶಕವಾಗಿ ಟೆಂಡರ್ ಕರೆಯುತ್ತೀರಾ, ಸರಬರಾಜು ಆಗಿರುವಂಥ ಗುಣಮಟ್ಟದ ಆಹಾರಗಳು ಬರುತ್ತಿಲ್ಲ. ಉದಾಹರಣೆಗೆ ನಾವೇನು ಟೆಂಡರ್‌ನ್ನು ಕರೆದಿದ್ದೇವೆ ಅದೇ ಗುಣಮಟ್ಟದ ಆಹಾರ ಸರಬರಾಜು ಆಗುತ್ತಿಲ್ಲವೆಂದು ಹೇಳಿದ್ದಾರೆ. ನಾನು ಅದರ ಎಲ್ಲಾ ಮಾಹಿತಿಗಳನ್ನು ಪಡೆದುಕೊಳ್ಳುತ್ತಿದ್ದೇನೆ ಮತ್ತು ಬಹಳ ಕಟ್ಟುನಿಟ್ಟಾಗಿ ಈ ವಿಚಾರದಲ್ಲಿ ಯಾರಲ್ಲೂ ಕೂಡ ರಾಜಿ ಮಾಡಿಕೊಳ್ಳುತ್ತಿಲ್ಲ. ಇಲಾಖಾ ಮೇಲಾಧಿಕಾರಿಗಳಿಗೂ ಸಹ ಸೂಚನೆ ಕೊಡಲಾಗಿದೆ. Video conference ಮೂಲಕ ಜಿಲ್ಲಾ ಮಟ್ಟದ ಡಿ.ಇ.ಓಗಳನ್ನು ಕರೆದು ಮಾತನಾಡಿದ್ದೇನೆ. ನಾನು ಒಂದು ಜಿಲ್ಲೆಗೆ ಪ್ರವಾಸ ಮಾಡುವಾಗ ಮಾರ್ಗ ಮಧ್ಯೆ ಯಾವ್ಯಾವ ಹಾಸ್ಟೆಲ್‌ಗಳು ಇರುತ್ತವೆಯೋ ಅಲ್ಲಿಗೆ ಭೇಟಿ ಕೊಟ್ಟು ಆಹಾರದ ಪೂರೈಕೆ ಮತ್ತು ಗುಣಮಟ್ಟದ ವಿಚಾರದಲ್ಲಿ ರಾಜಿ ಮಾಡಿಕೊಳ್ಳುತ್ತಿಲ್ಲ. ಎಲ್ಲಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಖರೀದಿ ಸಮಿತಿ ಇರುತ್ತದೆ. ಜಿಲ್ಲಾಧಿಕಾರಿಗಳಿಗೂ ಕೂಡ ಸೂಚನೆ ಕೊಡಲಾಗಿದೆ. ಯಾವುದೇ ಕಾರಣಕ್ಕೂ ಆಹಾರದ ಪೂರೈಕೆಯಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತೇವೆ. ಅಂತಹದ್ದೇನಾದರೂ ತಪ್ಪು ನಡೆದಿದ್ದರೆ ಮೇಲ್ನೋಟಕ್ಕೆ ಗೊತ್ತಾದರೂ ಕೂಡ ತಕ್ಷಣವೇ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂಥ ಕೆಲಸಗಳನ್ನು ಮಾಡುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ (ಶ್ರೀ ಆರ್.ಪ್ರಸನ್ನಕುಮಾರ್‌ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸರಿಯಾದ ಜವಾಬ್ದಾರಿಯುತವಾದ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಹಾಸ್ಟೆಲ್‌ಗಳ ಒಂದು ಕೊಠಡಿಯಲ್ಲಿ ಇಷ್ಟು ಜನ ಇರಬೇಕೆಂದು ಕಾನೂನು ಇದೆ. ಆದರೆ, ಇವತ್ತಿನ ದಿವಸ ಒಂದೊಂದು ಕೊಠಡಿಯಲ್ಲಿ ಹೆಚ್ಚು ಮಕ್ಕಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಜೊತೆಗೆ ಆಹಾರ ಕುರಿತು ಮಾನ್ಯ ಸಚಿವರು, ಆಯಾ ಕ್ಷೇತ್ರ ಶಾಸಕರುಗಳೆಲ್ಲಾ ಹೋಗಿ ಭೇಟಿ ಮಾಡಬೇಕೆಂದು ಹೇಳಿದ್ದಾರೆ. ಆದರೆ ನಾವು ಈಗಾಗಲೇ ಆ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ಮಕ್ಕಳು ಊಟದ ವ್ಯವಸ್ಥೆಯಲ್ಲಿ ಬಹಳಷ್ಟು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅವರು ಆ ಊಟವನ್ನು ತಿನ್ನುವುದಕ್ಕೆ ಆಗದಿದ್ದರೂ ಕೂಡ ಅಲ್ಲಿನ ವಾರ್ಡನ್‌ಗಳು ಒತ್ತಾಯ ಪೂರ್ವಕವಾಗಿ ನೀವು ತಿನ್ನಲೇಬೇಕು ಎಂದು ಕಠಿಣವಾಗಿ ಅವರ ಮ್ಮೇಲೆ ನಡೆದುಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸತಕ್ಕಂಥ ಕೆಲಸ ಮಾನ್ಯ ಸಚಿವರಿಂದ ಪ್ರಾಮಾಣಿಕವಾಗಿ ಆಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೆಟ್ರಿಕ್ ಪೂರ್ವದಲ್ಲಿ ನಂತರದ ಮಕ್ಕಳಿಗೆ ತಿಂಗಳಿಗೆ 1600/- ರೂಪಾಯಿಗಳು ಖರ್ಚು ಮಾಡುತ್ತಿದ್ದೇವೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಮಕ್ಕಳಿಗೆ ಸರಿಯಾದ ಊಟವನ್ನು ಕೊಡುತ್ತಿಲ್ಲ, ಅದರ ಬಗ್ಗೆ ಏನು ಮಾಡುತ್ತೀರಿ ಹೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಸರಿಯಾದ ಆಹಾರ ಕೊಡುವುದಕ್ಕೆ ಬೇಕಾದಂಥ ಆದೇಶಗಳನ್ನು ಕೊಡುತ್ತೇನೆ. ಮಾನ್ಯ ಸದಸ್ಯರ ಸಹಕಾರದೊಳಗೇ ನಾವು ಇರುತ್ತೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದ್ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಕರೋನಾ ಬಂದಿರತಕ್ಕಂಥ ಈ ಒಂದು ಸಂದರ್ಭದಲ್ಲೂ ಕೂಡ ಆ ಮಕ್ಕಳಿಗೆ ಏನೇನು ತಲುಪಬೇಕಿತ್ತೋ ಅದು ತಲುಪುತ್ತಿಲ್ಲ. ಹಾಸ್ಟೆಲ್‌ಗಳಲ್ಲಿರತಕ್ಕಂಥ ವಾರ್ಡನ್‌ಗಳು ಮತ್ತು ಇತರರು ಅವರ ಮ್ಮೇಲೆ ಒತ್ತಾಯ ಪೂರ್ವಕವಾಗಿ ನೀವು ಇದನ್ನು ತಿನ್ನಲೇಬೇಕು ಎನ್ನತಕ್ಕಂಥ ಒತ್ತಾಯವನ್ನು ಮಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ವಿಶ್ವಾಸ ತುಂಬಿಸುತ್ತೇವೆ. ಆಹಾರ ಸರಬರಾಜು ಮಾಡುವುದಕ್ಕೆ ಪಾರದರ್ಶಕವಾದಂಥ ವ್ಯವಸ್ಥೆಗಳನ್ನು ಮಾಡಲಾಗುವುದು. ಅದನ್ನು ಪರಿಶೀಲಿಸುವುದಕ್ಕೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿ ಇದೆ. ಅವರು ಕೂಡ ಖುದ್ದಾಗಿ ನೋಡಬೇಕೆಂದು ಹೇಳುತ್ತೇನೆ. ರಾಜ್ಯದಾದ್ಯಂತ ಎಲ್ಲೇ ದೂರುಗಳು ಬಂದರೂ ಕೂಡ ಕಠಿಣವಾದಂಥ ಕ್ರಮವನ್ನು ಕೈಗೊಳ್ಳುತ್ತೇವೆ. ಯಾವ ಮಟ್ಟದ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆಹಾರವನ್ನು ಕೊಡಬೇಕಿರುತ್ತದೋ ಅದನ್ನು ಕೊಡಲೇಬೇಕು. ಅದರಲ್ಲಿ ರಾಜಿ ಮಾಡಿಕೊಳ್ಳದಿರುವಂಥ ಕೆಲಸಗಳನ್ನು ಮಾಡುತ್ತೇವೆ.

**ಸಭಾಪತಿಯವರು:–** ಶ್ರೀ ಪುಟ್ಟಣ್ಣನವರು ಗೈರುಹಾಜರಿಯಾಗಿರುತ್ತಾರೆ. ಶ್ರೀ ಪಿ.ಆರ್.ರಮೇಶ್ ರವರ ಪ್ರಶ್ನೆ ಸಂಖ್ಯೆ 1028ಕ್ಕೆ ಸರ್ಕಾರ ಕಾಲಾವಕಾಶ ಕೇಳಿದೆ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಸರ್ಕಾರ ಕಾಲಾವಕಾಶ ಕೇಳಲಿ. ಆದರೆ, ಈ ಸದನ ಅಲ್ಲಿಯವರೆಗೂ ನಡೆಯುತ್ತದೆಯೇ, ಇಲ್ಲವೋ ಎಂದು ನನಗೆ doubt ಆಗಿದೆ. ಮಾನ್ಯ ಸಚಿವರು ಮುಂದಿನ ಬುಧವಾರದಂದು ಉತ್ತರ ಕೊಡಲಾಗುವುದೆಂದು ಹೇಳಿದ್ದಾರೆ. ಈ ಸದನ ಅವೊತ್ತಿನವರೆಗೆ ಇರುತ್ತದೆಂದು guarantee ಕೊಟ್ಟರೆ, ಅವೊತ್ತೇ ಉತ್ತರ ಕೊಡಲಿ.

**ಸಭಾಪತಿಯವರು:–** ಸಭಾನಾಯಕರೇ, ನೀವು ಮಾನ್ಯ ಸದಸ್ಯರಾದ ಶ್ರೀ ಪಿ.ಆರ್.ರಮೇಶ್‌ರವರಿಗೆ ಮುಂದಿನವಾರ ಉತ್ತರ ಕೊಡಿಸಬೇಕು.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಿನ್ನೆಯವರೆಗೆ ಚುಕ್ಕೆಗುರ್ತಿನ ಪ್ರಶ್ನೆ ಇತ್ತು. ಇವತ್ತು ಚುಕ್ಕೆಗುರ್ತಿಲ್ಲದ ಪ್ರಶ್ನೆಯಾಗಿದೆ. ಈ ಚುಕ್ಕೆಗುರ್ತಿನ ಪ್ರಶ್ನೆ ಯಾವಾಗ change ಆಗುತ್ತದೆಂದು ಗೊತ್ತೇ ಆಗುವುದಿಲ್ಲ. ನಿನ್ನೆಯವರೆಗೆ ಚುಕ್ಕೆ ಗುರ್ತಿನ ಪ್ರಶ್ನೆಯಾಗಿತ್ತು. ಅದು ಇವತ್ತು ಬರುತ್ತದೆಂದರೆ, ಚುಕ್ಕೆಗುರ್ತಿಲ್ಲದ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಚುಕ್ಕೆಗುರ್ತಿಲ್ಲದ ಪ್ರಶ್ನೆ ಆಗಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪಿ.ಆರ್.ರಮೇಶ್‌ರವರು ಬಹಳ ಸೂಕ್ಷ್ಮವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ನಮ್ಮ ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. ನಾನು ಇವತ್ತು ಅದನ್ನು ಪರಿಶೀಲನೆ ಮಾಡುತ್ತೇನೆ. ಇನ್ನೂ ಹೆಚ್ಚಿನ ಮಾಹಿತಿಯೊಂದಿಗೆ ಉತ್ತರ ಕೊಡುತ್ತೇನೆಂದು ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ. ಮುಂದಿನ ಬುಧವಾರದಂದು ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.

**ಸಭಾಪತಿಯವರು:–** ಪಿ.ಆರ್.ರಮೇಶ್‌ರವರೇ, ನಾನು ಸರ್ಕಾರಕ್ಕೆ ಹೇಳಿದ್ದೇನೆ, ಸರ್ಕಾರದಿಂದ ನಿಮಗೆ ಉತ್ತರ ಕೊಡಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಗತ್ಯವಿದ್ದರೆ, ಮೊದಲೇ ಉತ್ತರ ಕೊಡಲಾಗುವುದು. ಸೋಮವಾರದಂದು . . .

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ನಾನು ಅವರಿಗೆ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೇನೆ. ನೀವು ಆದಷ್ಟು ಬೇಗ ಉತ್ತರ ಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ನಾನು ಮುಂದಿನ ವಾರ ಉತ್ತರ ಕೊಡುತ್ತೇನೆ. ಮಾನ್ಯ ಸದಸ್ಯರಿಗೆ ಅಗತ್ಯವಿದ್ದರೆ, ತಾವು ತಡೆಹಿಡಿಯಲಾದ ಪ್ರಶ್ನೆ ತಂದರೆ, ಉತ್ತರ ಕೊಡಲಾಗುವುದು.

**ಸಭಾಪತಿಯವರು:–** ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ.994**

**(ಉತ್ತರ ಲಗತ್ತಿಸಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪಶುಸಂಗೋಪನಾ ಇಲಾಖೆಯಲ್ಲಿ ಆಂಬುಲೆನ್ಸ್ ವ್ಯವಸ್ಥೆ ಇಲ್ಲ. ಆದರೆ, ಪಶುಸಂಜೀವಿನಿ ಸೇವೆಯನ್ನು ಸರ್ಕಾರ ನೀಡಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮನುಷ್ಯನಿಗೆ ಮಾತನಾಡಲು ಬರುತ್ತದೆ. ಆದರೆ ಪ್ರಾಣಿಗಳ ಮಾತು ನಮಗೆ ಅರ್ಥವಾಗುವುದಿಲ್ಲ. ಇವತ್ತಿನ ದಿವಸ ಮಧ್ಯಮ ವರ್ಗದವರು ಸಾಕಿದಂತಹ ಪ್ರಾಣಿಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಅವರು ಚಿಕಿತ್ಸೆ ಕೊಡಿಸುವುದಕ್ಕೆ ಆಗುತ್ತಿಲ್ಲ. ಮಾನ್ಯ ಸಚಿವರು ಉತ್ತರ ನೀಡಿರುವ ಜಿಲ್ಲಾವಾರು ವರದಿಯಲ್ಲಿ ಅನುಬಂಧ-1ರಲ್ಲಿ ಪಶು ಸಂಜೀವಿನಿ ವಾಹನದ ಮೂಲಕ ಚಿಕಿತ್ಸೆ ನೀಡಿದ ಜಿಲ್ಲಾವಾರು ಮಾಹಿತಿಯನ್ನು ಕೊಟ್ಟಿದ್ದಾರೆ. ಕೇವಲ 15 ಜಿಲ್ಲೆಗಳು ಮಾತ್ರ ಇದರ ಈ ಉಪಯೋಗವನ್ನು ಪಡೆದಿದೆ. ನಾನು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಪ್ರಶ್ನೆ ಕೇಳುವುದೇನೆಂದರೆ, ಗ್ರಾಮ ಪಂಚಾಯಿತಿ ಸದಸ್ಯರಿಗೆ ಇದರ ಬಗ್ಗೆ ತಿಳುವಳಿಕೆ ನೀಡುವುದಕ್ಕೆ ಸರ್ಕಾರದ ಕ್ರಮವೇನು? ಎರಡನೆಯದಾಗಿ, ಮಹಿಳೆಯರು ಡೈರಿಗಳಿಗೆ ಹಾಲನ್ನು ಹಾಕುತ್ತಾರೆ. ಇವತ್ತಿನ ದಿವಸ ಹಾಲು ಉತ್ಪಾದಕ ಸಂಘದ ಸದಸ್ಯರಿಗೆ ಈ ವ್ಯವಸ್ಥೆಯ ಬಗ್ಗೆ ಮಾಹಿತಿಯ ಕೊರತೆ ಇದೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರದ ಕ್ರಮವೇನು? ಸರ್ಕಾರ ಪಶು ಸಂಜೀವಿನಿ ವ್ಯವಸ್ಥೆಯನ್ನು ಸುಧಾರಿಸಲು ಪಶು ವೈದ್ಯಾಧಿಕಾರಿಗಳಿಂದ ಮಾಹಿತಿಗಳನ್ನು ಯಾವ ರೀತಿ ಪಡೆದುಕೊಳ್ಳುತ್ತದೆ; ಸಾಮೂಹಿಕ ಮಾಧ್ಯಮದಲ್ಲಿ ಇದರ ಬಗ್ಗೆ ಪ್ರಚಾರವನ್ನು ಕೈಗೊಳ್ಳುವುದಕ್ಕೆ ಸರ್ಕಾರ ಮಾಡಿದ ಕ್ರಮಗಳೇನು?

**ಶ್ರೀ ಪ್ರಭು ಬಿ. ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಮ್ಮ ಅಕ್ಕನವರಾದ ಶ್ರೀಮತಿ ಭಾರತಿ ಶೆಟ್ಟಿಯವರು ಕೇಳಿರುವಂತಹ ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರವನ್ನು ನೀಡಿದ್ದೇನೆ. ಮೊದಲು ನಮ್ಮ ರಾಜ್ಯದಲ್ಲಿ ಆಂಬುಲೆನ್ಸ್ ಇರಲಿಲ್ಲ. ಆದರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಕರ್ನಾಟಕದ ಇತಿಹಾಸದಲ್ಲಿ ಮೂಕ ಪ್ರಾಣಿಗಳಿಗೆ ರಕ್ಷಣೆಯಾಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಿ, ಪಶು ಸಂಜೀವಿನಿ ಯೋಜನೆಯಲ್ಲಿ with surgery facility, ಆಂಬುಲೆನ್ಸ್ ಅನ್ನು 15 ಜಿಲ್ಲೆಗಳಿಗೆ ಒದಗಿಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ 15 ಜಿಲ್ಲೆಗಳಿಗೆ ಒದಗಿಸಬೇಕು. ಸರ್ಕಾರದ ಮುಂದೆ ಅದರ ಪ್ರಸ್ತಾವನೆ ಇದೆ. ಅದನ್ನೂ ಕೂಡ ಶೀಘ್ರದಲ್ಲೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೆಯದಾಗಿ, ಆಂಬುಲೆನ್ಸ್‌ಗೆ 1962 ಎಂದು ನಂಬರ್ ಇದೆ. ಯಾವೊಬ್ಬ ರೈತರು ಆ ನಂಬರ್‌ಗೆ ಕರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದರೆ, ನಮ್ಮ ವೈದ್ಯರು with surgery, with scanning ಸಹಿತ ಅಲ್ಲಿಗೆ ಹೋಗಿ ಚಿಕಿತ್ಸೆ ನೀಡಿ ಬರುತ್ತಾರೆ. ನಾನು ಪ್ರತಿ ಜಿಲ್ಲೆಗೆ ಹೋಗಿ ಸಭೆ ಮಾಡಿ, ಮಾಧ್ಯಮಗಳ ಮೂಲಕ ಅದರ ಬಗ್ಗೆ ಪ್ರಚಾರ ಮಾಡಿದ್ದೇವೆ. ಆಮೇಲೆ ನಮ್ಮ ಎಲ್ಲಾ ವೈದ್ಯರು ಗ್ರಾಮ ಸಭೆಗಳಿಗೆ ಹೋಗಿ ಪ್ರಚಾರ ಮಾಡಿ ತಿಳಿಸಿದ್ದಾರೆ. ಈ ರೀತಿ ಪ್ರಚಾರ ಮಾಡುತ್ತಿದ್ದೇವೆ. ಈ ಆಂಬುಲೆನ್ಸ್ ಬಂದ ಮೇಲೆ ಬಹಳ ಒಳ್ಳೆಯ ರೀತಿಯಲ್ಲಿ ಪ್ರಾಣಿಗಳ ರಕ್ಷಣೆಯಾಗುತ್ತಿದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾಹಿತಿಯನ್ನು ನೀಡಬೇಕು. ಗ್ರಾಮ ಪಂಚಾಯಿತಿಯಲ್ಲಿ ಪಶುಸಂಜೀವಿನಿ ಸೇವೆಯ ಬಗ್ಗೆ ಯಾರಿಗೂ ಗೊತ್ತಿಲ್ಲ. ಇದು ನಿಮಗೂ ಗೊತ್ತಿದೆ. ತಾವು ಕೂಡ ಪ್ರಾಣಿಗಳನ್ನು ಸಾಕಿದ್ದೀರಿ. ಶ್ರೀಮಂತರು ಹೇಗಾದರೂ ಚಿಕಿತ್ಸೆ ಕೊಡಿಸಬಹುದು. ಆದರೆ, ಮಧ್ಯಮ ವರ್ಗದವರಿಗೆ ಬಹಳ ಕಷ್ಟವಾಗಿದೆ. ಯಾವ ಗ್ರಾಮಗಳಲ್ಲೂ ಸಹ ಈ ಸಂಜೀವಿನಿಯ ಬಗ್ಗೆ ಮಾಹಿತಿ ಇಲ್ಲ. ಇದಕ್ಕೆ ವ್ಯಾಪಕವಾದಂತಹ ಪ್ರಚಾರದ ಅವಶ್ಯಕತೆ ಇದೆ.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಸರ್ಕಾರದ ಇಲಾಖೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಅರಿವು ಮೂಡಿಸುವಂತಹ ಕಾರ್ಯಕ್ರಮ ಕೂಡ ಇದೆ. ಜಿಲ್ಲಾಧಿಕಾರಿಗಳ ಕಚೇರಿ, ಎ.ಸಿ. ಕಚೇರಿ ಮತ್ತು ತಹಶೀಲ್ದಾರ್‌ರವರ ಕಚೇರಿಗಳಲ್ಲಿ ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿ, ಈ ರೀತಿಯ ಅವಕಾಶವಿದೆ ಎನ್ನುವುದನ್ನು ರೈತರಿಗೆ ತಲುಪಿಸಲಾಗುತ್ತಿದೆ. ತಹಶೀಲ್ದಾರ್‌ರವರ ಮುಖಾಂತರ ಬೇರೆ ಬೇರೆ ಮಾಧ್ಯಮದ ಮುಖಾಂತರ ರೈತರಿಗೆ ಪ್ರಚಾರ ಮಾಡುತ್ತಿದ್ದು,....

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳುತ್ತಿರುವುದೇನೆಂದರೆ, ಯಾವ ಹಳ್ಳಿಗಳಲ್ಲೂ ಸಹ ಜನರಿಗೆ ಗೊತ್ತಾಗುವುದಿಲ್ಲ. ಬೋರ್ಡ್‌ಗಳನ್ನು ಜಿಲ್ಲಾಧಿಕಾರಿಗಳ ಕಚೇರಿ ಮತ್ತು ತಹಶೀಲ್ದಾರ್‌ರವರ ಕಚೇರಿಗಳಲ್ಲಿ ಹಾಕಿದರೆ ಅಲ್ಲಿ ಎಷ್ಟು ಜನರು ಹೋಗಿ ನೋಡುತ್ತಾರೆ? ಅದಕ್ಕೆ ಅವರು ಹಳ್ಳಿ ಹಳ್ಳಿಗಳಿಗೆ ಹೋಗಿ ಹೇಳಬೇಕು. ಈ ರೀತಿ ಮಾಡುವುದಕ್ಕೆ ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಗ್ರಾಮ ಪಂಚಾಯಿತಿ ಸದಸ್ಯರು ರೈತರ ಸಂಪರ್ಕದಲ್ಲಿರುತ್ತಾರೆ. ಗ್ರಾಮ ಪಂಚಾಯಿತಿ ಸದಸ್ಯರಿಗೆ ತಿಳುವಳಿಕೆ ನೀಡುವಂಥದ್ದು ಆಗಬೇಕು.

**ಶ್ರೀ ಪ್ರಭು ಬಿ. ಚವ್ಹಾಣ್:–** ಮಾನ್ಯ ಸಭಾಪತಿಯವರೇ, ನಮ್ಮ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮತ್ತು ಉಪ ನಿರ್ದೇಶಕರಿಗೆ ಗ್ರಾಮಸಭೆ ತೆಗೆದುಕೊಂಡಾಗ ಇದರ ಬಗ್ಗೆ ಹೇಳಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಗಳ ಮುಖಾಂತರ ಹೋದ ಮೇಲೆ, ನಮ್ಮ ಇಲಾಖೆ ಮುಖಾಂತರ ಗ್ರಾಮ ಸಭೆಗಳನ್ನು ಮಾಡಿ ಅದರ ಬಗ್ಗೆ ಅರಿವು ಮೂಡಿಸಬೇಕು. ಅಂದರೆ, medicine ಆಗಲಿ, ಪಶು ಸಂಜೀವಿನಿ ಸೇವೆಯಾಗಲೀ, ಈ ರೀತಿಯಾಗಿ ಬೇರೆ ಬೇರೆ ಮಾಹಿತಿಗಳನ್ನು ನೀಡಬೇಕೆಂದು ಈಗಾಗಲೇ ತಿಳಿಸಿದ್ದೇನೆ. ಅದರ ಕೆಲಸ ನಡೆಯುತ್ತಿದೆ

**ಸಭಾಪತಿಯವರು:–** ಓಕೆ, ಮಾನ್ಯ ಸುನೀಲ್ ವಲ್ಯಾಪುರ್‌ರವರು ಗೈರು ಹಾಜರಿಯಾಗಿದ್ದಾರೆ.

**(ಮುಂದು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(352)10.3.2021/11.00/ಎಂ.ಎಂ–ಎಂ.ಡಿ**

**ಪ್ರಶ್ನೆ ಸಂಖ್ಯೆ: 1025**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಶಶೀಲ್.ಜಿ.ನಮೋಶಿ:–** ಮಾನ್ಯ ಸಭಾಪತಿಯವರೇ, Veterinary Hospitals ಎಷ್ಟು ಸಂಖ್ಯೆಯಲ್ಲಿವೆ ಎಂದು ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ಬಗ್ಗೆ ಕೇಳುತ್ತಿದ್ದೇನೆ. 767 ಎಂದು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಮತ್ತು ಎಷ್ಟು ಹುದ್ದೆಗಳಿವೆ ಎಂದು ಕೇಳಿದ್ದೆ, ಅದಕ್ಕೆ 3349 ಮಂಜೂರಾದ ಹುದ್ದೆಗಳು ಮತ್ತು 809 ಖಾಲಿ ಹುದ್ದೆಗಳಿವೆ ಎಂದು ವಿವರವಾದ ಉತ್ತರ ಕೊಟ್ಟಿದ್ದಾರೆ. ಈ ಹುದ್ದೆಗಳನ್ನು ತುಂಬುತ್ತೀರಾ ಎಂದು ಕೇಳಿರುವುದಕ್ಕೆ 176 ಹುದ್ದೆಗಳನ್ನು ತುಂಬುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ ಎಂದು ವಿವರಗಳನ್ನು ಕೊಟ್ಟಿದ್ದಾರೆ. ನಾನು ಮಾನ್ಯ ಸಚಿವರನ್ನು ಕೇಳುವುದು ಇಷ್ಟೇ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಯಾವುದೇ ಹುದ್ದೆಗಳನ್ನು ತುಂಬಬೇಕಾದರೆ ನಿಮಗೆ ಆರ್ಥಿಕ ಇಲಾಖೆಯ ಅನುಮತಿ ಬೇಕಿಲ್ಲ, you will only have to inform them. ಅದರ ಅನುಮತಿ ಬೇಕು ಅಥವಾ ಅವರು ಸಹಮತ ಕೊಡಬೇಕು ಅಥವಾ clearance ಕೊಡಬೇಕೆನ್ನುವ ಅಗತ್ಯವಿಲ್ಲ. ಹೀಗಿದ್ದಾಗ ನಿಮ್ಮ ಇಲಾಖೆಯಿಂದ ಈ 809 ಹುದ್ದೆಗಳನ್ನು ತುಂಬುವುದಕ್ಕೆ ನಿಮಗಿರುವ ಕಷ್ಟವೇನು? ಏತಕ್ಕೆ ಪೂರ್ತಿ ಹುದ್ದೆಗಳನ್ನು ತುಂಬುವಂತಹ ಪ್ರಯತ್ನ ಮಾಡಿಲ್ಲ ಎಂಬುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಪಶು ಆಸ್ಪತ್ರೆಗಳು ಎಷ್ಟು ಸಂಖ್ಯೆಯಲ್ಲಿವೆ, are they sufficient ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ, ಬಹಳಷ್ಟು ಕಡೆಗಳಿಂದ ದೂರು ಬರುವುದೇನೆಂದರೆ, ಜಾನುವಾರುಗಳನ್ನು ಯಾರು ನೋಡಬೇಕು, ಯಾರು ಕೇಳಬೇಕು, ಒಟ್ಟಾರೆ ಆಸ್ಪತ್ರೆಗಳಿದ್ದರೂ ಕೂಡಾ ವ್ಯವಸ್ಥೆಗಳಿಲ್ಲ ಎನ್ನುವಂತಹ ಮಾತು ಬರುತ್ತಿದೆ. ಈ ನಿಟ್ಟಿನಲ್ಲಿ ನಿಮ್ಮ ಕಡೆಯಿಂದ ನಡೆಯುತ್ತಿರುವ ಕ್ರಮಗಳನ್ನು ಹೇಳಬೇಕು ಮತ್ತು ಉಳಿದಂತಹ ಹುದ್ದೆಗಳನ್ನು ತುಂಬುವುದಕ್ಕೆ ಏನೇನು ಕ್ರಮ ಕೈಗೊಳ್ಳುತ್ತಾರೆ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಭು.ಬಿ.ಚವ್ಹಾಣ್:–** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್.ಜಿ.ನಮೋಶಿಯವರು ಹಿರಿಯ ಸದಸ್ಯರು. ನಾವಿಬ್ಬರೂ ಸಹ ಕಲ್ಯಾಣ ಕರ್ನಾಟಕ ಭಾಗದಲ್ಲಿದ್ದೇವೆ. ಅವರು Finance Department ನ ಅನುಮತಿಯ ಜರೂರತ್ತು ಇಲ್ಲ ಎಂದು ಹೇಳಿದರು. ಆದರೆ ಜರೂರತ್ತು ಇದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಈಗಾಗಲೇ ಕಡತವು ಹೋಗಿದೆ, Recruitment ಅಥವಾ promotion ಯಾವುದೇ ಆಗಲೀ Finance Department ಕಡೆಯಿಂದ ಅನುಮತಿ ಬರಬೇಕು. ಆರ್ಥಿಕ ಇಲಾಖೆಯಲ್ಲಿ ಕಡತ ಇದೆ. ನಾನು ಅಲ್ಲಿಗೆ ಪದೇ ಪದೇ ಭೇಟಿ ಮಾಡಿದ್ದೇನೆ, ಅವರು ಕೋವಿಡ್ ಬಂದ ಮೇಲೆ ಆಗಿಲ್ಲ, ಮುಂದಿನ ಸಮಯದಲ್ಲಿ ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ 176 ಹುದ್ದೆಗಳನ್ನು ನೇಮಕಾತಿ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ, ಮುಂದಿನ ಸಮಯದಲ್ಲಿ ಹಣಕಾಸು ಇಲಾಖೆಯವರ ಜೊತೆ ಚರ್ಚೆ ಮಾಡಿ 176 ಹುದ್ದೆಗಳನ್ನು ತುಂಬುವ ಪ್ರಯತ್ನ ಮಾಡುತ್ತೇವೆ. ಬಹಳ ವರ್ಷಗಳಿಂದ ಶೇ.50 ರಷ್ಟು ಕೊರತೆ ಇದೆ. ಎಲ್ಲಾ ಕಡೆಯೂ ಕೊರತೆ ಇದೆ. ಅದಕ್ಕಾಗಿ ಈಗಲೂ ಕೂಡ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಅದರ ಬಗ್ಗೆ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡುತ್ತಿದ್ದೇವೆ. ಶೀಘ್ರದಲ್ಲಿಯೇ ನೇಮಕಾತಿ ಮಾಡುವ ಪ್ರಯತ್ನ ಮಾಡುತ್ತೇವೆ.

**ಶ್ರೀ ಶಶೀಲ್.ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಕೂಡ ಹೇಳಿದ್ದೇನೆ, ಮತ್ತೊಮ್ಮೆ ಈ ವಿಚಾರವನ್ನು ಎಲ್ಲರ ಗಮನಕ್ಕೆ ತರಬಯಸುತ್ತಿದ್ದೇನೆ. "Concurrence of the Finance Department shall be presumed for direct recruitment and promotions made under these orders", ಎಂದರೆ, ಬಹಳ ಸ್ಪಷ್ಟವಾಗಿ ಸಂವಿಧಾನದ ಅನುಚ್ಛೇದ 371ರಡಿಯಲ್ಲಿ ಯಾವುದೇ ಹುದ್ದೆಗಳಿಗೆ ನೀವು ಅನುಮತಿ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂದು ಬಹಳ ಸ್ಪಷ್ಟವಾಗಿ ತಿದ್ದುಪಡಿ ಅನುಚ್ಛೇದ 371ಜೆ ರಲ್ಲಿ ಹೇಳಿದಾಗ, ನಾನು ವಿನಂತಿ ಮಾಡುತ್ತೇನೆ, ಇಲ್ಲಿ ಎಲ್ಲಾ ಸಚಿವರೂ ಕುಳಿತಿದ್ದಾರೆ. ನಿಮ್ಮ ಇಲಾಖೆಗಳಲ್ಲಿ ಖಾಲಿ ಹುದ್ದೆಗಳನ್ನು ತುಂಬುವಂತಹ ಪ್ರಕ್ರಿಯೆಯನ್ನು ಮುಂದುವರೆಸಿ, ಆ ಭಾಗದಲ್ಲಿ ಯಾವುದೇ ಹುದ್ದೆಗಳನ್ನು ಖಾಲಿ ಇಡಬೇಕಾಗಿಲ್ಲ.

**ಸಭಾಪತಿಯವರು:-** ಮಾನ್ಯ ಪಶುಸಂಗೋಪನೆ ಸಚಿವರೇ ಹೇಳಿ.

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಶಶೀಲ್ ನಮೋಶಿಯವರು ಹೇಳುತ್ತಿದ್ದಾರೆ, ನಾವು ಮೂರು ಸಲ Finance Department ಗೆ ಹೋಗಿದ್ದೆವು. ತಾವು ಈಗ ಸಲಹೆ ಸೂಚನೆ ಕೊಟ್ಟಿರುವುದನ್ನು ನಾವು ಫಾಲೋ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿಯಿರುವ 176 ಹುದ್ದೆಗಳನ್ನು ತುಂಬಲು ಪ್ರಯತ್ನ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ **ಶಶೀಲ್.ಜಿ.ನಮೋಶಿ:-** ಮಾನ್ಯ ಸಚಿವರೇ, ಮೊದಲು ಈ ಕಾಯಿದೆಗೆ ಬಲ ತಂದುಕೊಡಬೇಕಾದರೆ ಮೊದಲು ನಿಮ್ಮ ಇಲಾಖೆಯಲ್ಲಿ ಈ ಹುದ್ದೆಗಳನ್ನು ತುಂಬುವಂತಹ ಕೆಲಸ ಮಾಡಿ. ದಯವಿಟ್ಟು ಬೇರೆ ಸಚಿವರು ಕೂಡ ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೋರುತ್ತೇನೆ.

ಶ್ರೀ **ಪ್ರಭು.ಬಿ.ಚವ್ಹಾಣ್:-** ಆಗಲಿ ಮಾಡಿಕೊಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 883**

**(ಉತ್ತರವನ್ನು ಲಗತ್ತಿಸಿದೆ)**

**ಡಾ: ತಳವಾರ್ ಸಾಬಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಆ ಗ್ರಾಮದ ಜನಸಂಖ್ಯೆ ಹೆಚ್ಚು ಕಡಿಮೆ 15,000 ಮುಟ್ಟಿದೆ. ನಾನು ಅದೇ ಗ್ರಾಮದಿಂದ ಬಂದವನಾಗಿರುವುದರಿಂದ ಅಲ್ಲಿ 0.33 ಗುಂಟೆಯಲ್ಲಿ ಒಂದು ರುದ್ರಭೂಮಿ ಇದೆ. ಆ ರುದ್ರಭೂಮಿಯಲ್ಲಿ ನಾವು ಶವಸಂಸ್ಕಾರ ಮಾಡಲು ಹೋದಾಗ ಅಲ್ಲಿ ಒಂದು ಶವದ ಅವಶೇಷಗಳನ್ನು, ಅಸ್ಥಿಪಂಜರವನ್ನು ತೆಗೆದು ಶವವನ್ನು ಹೂಳುವಂತಹ ಪರಿಸ್ಥಿತಿ ಸುಮಾರು ವರ್ಷಗಳಿಂದ ನಡೆಯುತ್ತಿದೆ. ಇದನ್ನು ಸ್ವತಃ ನಮ್ಮ ತಂದೆಯ ಶವಸಂಸ್ಕಾರದ ಸಂದರ್ಭದಲ್ಲಿ ನೋಡಿದ್ದೇನೆ. ಈ ವಿಷಯವನ್ನು ಹಲವಾರು ಸಲ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಸಹ ಆ ವಿಷಯವನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಂಡಿಲ್ಲ. ಜನಸಂಖ್ಯೆ ಬೆಳೆಯುತ್ತಿದೆ, ಆದರೆ ಈ ಸಮಸ್ಯೆಗೆ ಮಾತ್ರ ಇಲ್ಲಿಯವರೆಗೆ ಪರಿಹಾರ ಸಿಕ್ಕಿಲ್ಲ ಇದು ಮೊದಲನೆಯದು. ಎರಡನೆಯದಾಗಿ, ಗ್ರಾಮದಲ್ಲಿ ಶವಸಂಸ್ಕಾರ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ತಿಳಿದುಕೊಂಡು ಈಗಾಗಲೇ 18 ಜನರು ದೇಹದಾನವನ್ನು ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ನಾವು ಸತ್ತ ಮೇಲಾದರೂ ಮರ್ಯಾದೆಯಿಂದ ಗೌರವಯುತವಾಗಿ ಶವಸಂಸ್ಕಾರ ಮಾಡುವುದು ನಮ್ಮ ಜವಾಬ್ದಾರಿ ಮತ್ತು ಸರ್ಕಾರದ ಜವಾಬ್ದಾರಿ ಸಹ ಆಗಿದೆ. ಕೊನೆಯದಾಗಿ ಉತ್ತರದಲ್ಲಿ ಹೇಳಿರುವುದೇನೆಂದರೆ, ಕಲಬುರಗಿ ಜಿಲ್ಲೆಗೆ 8 ಲಕ್ಷದ 92 ಸಾವಿರ ರೂಪಾಯಿಗಳನ್ನು ಜಮೀನನ್ನು ಖರೀದಿಸಲು ಕೊಡಲಾಗಿದೆ ಎಂದು ಹೇಳಿದ್ದಾರೆ. ಕಲಬುರಗಿ ಜಿಲ್ಲೆಗೆ 08 ಲಕ್ಷ ಅನ್ವಯವಾಗುತ್ತದೆ ಆದರೆ ಭಂಕೂರು ಗ್ರಾಮಕ್ಕೆ ಬೇಕಾಗಿರುವುದು 2–4 ಎಕರೆ ಭೂಮಿ. ಪಟ್ಟಾ ಭೂಮಿಯನ್ನು ಖರೀದಿ ಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ತಳವಾರ್ ಸಾಬಣ್ಣನವರ ಪ್ರಶ್ನೆ ಸ್ಮಶಾನಗಳಿಗೆ ಜಾಗ ಕೊಡುವುದಾಗಿದೆ. ಕಲಬುರಗಿ ಜಿಲ್ಲೆ, ಶಹಬಾದ ತಾಲ್ಲೂಕಿನ ಭಂಕೂರು ಇಲ್ಲಿ 23 ಎಕರೆ ಸರ್ಕಾರಿ ಜಮೀನಿದೆ. ಆದರೆ ಸರ್ಕಾರಿ ಜಮೀನಿದ್ದರೂ ಕೂಡ ಅಲ್ಲಿ ಜವುಳು ಇರುವುದರಿಂದ ಅಲ್ಲಿ ಸ್ಮಶಾನ ಮಾಡುವುದಕ್ಕೆ ಆಗುತ್ತಿಲ್ಲ, ಅಲ್ಲಿನ ಜನರೂ ಒಪ್ಪುತ್ತಿಲ್ಲ. ಆ ದೃಷ್ಟಿಯಿಂದ ಬೇರೆ ಜಮೀನನ್ನು ಭಂಕೂರು ಗ್ರಾಮದ ಸರ್ವೆ ನಂ.4ರಲ್ಲಿ ವಿಸ್ತೀರ್ಣ 4 ಎಕರೆ 33 ಗುಂಟೆ ಜಮೀನು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪಟ್ಟಾದಾರರದ್ದಾಗಿದ್ದು ಸ್ಮಶಾನಕ್ಕಾಗಿ ನೀಡುವುದಾಗಿ ಅವರು ಒಪ್ಪಿಕೊಂಡಿರುತ್ತಾರೆ. ನೇರ ಖರೀದಿಗೆ ಪ್ರಸ್ತಾವನೆ ಮಾಡುತ್ತಿದ್ದೇವೆ. ನೇರ ಖರೀದಿ ಮಾಡಿ 04 ಎಕರೆ 33 ಗುಂಟೆ ಅವರಿಗೆ ಕೊಡುತ್ತೇವೆ. ರಾಜ್ಯದಲ್ಲಿ ಒಟ್ಟು 29,590 ಗ್ರಾಮಗಳಿವೆ. ಅದರಲ್ಲಿ 21,336 ಗ್ರಾಮಗಳಲ್ಲಿ ಸ್ಮಶಾನ ಲಭ್ಯವಿದೆ 7069 ಗ್ರಾಮಗಳಿಗೆ ಸ್ಮಶಾನ ಲಭ್ಯವಿರುವುದಿಲ್ಲ. 2020-21ರ ಬಜೆಟ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಮೀಸಲಿಟ್ಟಿದ್ದೇವೆ. ಈ ವರ್ಷದಲ್ಲೂ ಕೂಡ ನಾನು 30 ಜಿಲ್ಲೆಗಳ ಡಿಜತುಜ್ಞತಿ ಮಾಡಿದ್ದೇನೆ. ಪ್ರತಿ ಹಳ್ಳಿಯಲ್ಲೂ ಒಂದು ಸ್ಮಶಾನ ಇರಬೇಕು ಎಂಬುದು ನನ್ನ ಮೊದಲ ಘೋಷಣೆ. ಮೊದಲು ನಾನು ಈ ಪ್ರಶ್ನೆಗೆ ಉತ್ತರ ಹೇಳಿ ಮುಂದೆ ಹೋಗುತ್ತೇನೆ. ಜಿಲ್ಲಾಧಿಕಾರಿಯವರಿಗೆ ಹೇಳಿದ್ದೇನೆ, ನಮ್ಮ ಹತ್ತಿರ ಅಲೆಯುವ ಪ್ರಶ್ನೆಯೇ ಇಲ್ಲ, ಇಡೀ ರಾಜ್ಯದಲ್ಲಿ ಜಿಲ್ಲಾಧಿಕಾರಿಯವರೇ ಠಿಡುಂಡುಣಥಿ ಮೇಲೆ ತಕ್ಷಣವೇ ಮಂಜೂರು ಮಾಡಬೇಕೆಂದು ಪತ್ರ ಕೊಟ್ಟಿದ್ದೇನೆ, ಆದೇಶವನ್ನೂ ಮಾಡಿದ್ದೇನೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸಚಿವರು ಈ ವಿಷಯದಲ್ಲಿ ಶೀಘ್ರವೇ ಕ್ರಮ ಕೈಗೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಆರ್. ಅಶೋಕ್:-** ಆಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 912**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಂಪೂರ್ಣವಾದ ಮಾಹಿತಿ ಒದಗಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆ ಬೆಳಗಾವಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಶುಸಂಗೋಪನಾ ಇಲಾಖೆಯ ಆಸ್ಪತ್ರೆಗಳೆಷ್ಟು, ಅಲ್ಲಿರುವಂತಹ ಹುದ್ದೆಗಳೆಷ್ಟು? ಖಾಲಿ ಇರುವ ಹುದ್ದೆಗಳೆಷ್ಟು? ಯಾವ ಕಾಲಮಿತಿಯೊಳಗೆ ಹುದ್ದೆಗಳನ್ನು ತುಂಬುತ್ತೀರಿ ಎಂಬ ಪ್ರಶ್ನೆಗಳನ್ನು ಕೇಳಿದ್ದೇನೆ. ಬೆಳಗಾವಿ ವಿಭಾದಲ್ಲಿ ಒಟ್ಟು 4199 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸೃಷ್ಟಿ ಮಾಡಲಾಗಿದೆ, ಇದರಲ್ಲಿ ಕೇವಲ 2179 ಹುದ್ದೆಗಳು ಮಾತ್ರ ಭರ್ತಿ ಇದ್ದು, 2023 ಹುದ್ದೆಗಳು ಇಲ್ಲಿ ಖಾಲಿ ಇವೆ. ಇವನ್ನು ಯಾವ ಕಾಲಮಿತಿಯೊಳಗೆ ತುಂಬಿಕೊಳ್ಳುತ್ತೀರಿ ಎಂಬ ವಿಷಯವನ್ನು ಮಾನ್ಯ ಸಚಿವರು ತಿಳಿಸಬೇಕು. ಜೊತೆಗೆ ನಾವೆಲ್ಲರೂ ಕೂಡ ಗೋಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತಂದ ಮೇಲೆ ಗೋವುಗಳ ಸಂಖ್ಯೆ ಸಹಜವಾಗಿ ಗಣನೀಯವಾಗಿ ಹೆಚ್ಚಾಗುತ್ತಿರುವಂತಹ ಈ ಸಂದರ್ಭದಲ್ಲಿ ಇನ್ನಷ್ಟು ಹೆಚ್ಚು ಪಶು ಇಲಾಖೆ ಮುಖಾಂತರ ಪಶು ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿ ಅಲ್ಲಿರುವಂತಹ ಎಲ್ಲಾ ಹುದ್ದೆಗಳನ್ನು ಆದಷ್ಟು ಬೇಗನೆ ಭರ್ತಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಶಶೀಲ್.ಜಿ. ನಮೋಶಿಯವರು ಕೂಡ ಅವರ ವಿಭಾಗದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾರೆ, ಆದಷ್ಟು ಬೇಗನೆ ಹೆಚ್ಚು ಪಶು ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿ ಅಲ್ಲಿರುವಂತಹ ಹುದ್ದೆಗಳನ್ನು ಬೇಗನೆ ತುಂಬಿ. ಗೋ ರಕ್ಷಣೆ ಆಗಬೇಕು, ಪಶುಗಳ ರಕ್ಷಣೆಯಾಗಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಪ್ರಭು.ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ನಮ್ಮ ನಿರಾಣಿಯವರು ಬೆಳಗಾವಿ ವಿಭಾಗದಲ್ಲಿ ಪಶು ಆಸ್ಪತ್ರೆಯ ಹುದ್ದೆಗಳ ಬಗ್ಗೆ ಕೇಳಿದ್ದಾರೆ. ನಾವು ಅವರಿಗೆ ಅಂಕಿ-ಸಂಖ್ಯೆಗಳನ್ನೂ ಕೊಟ್ಟಿದ್ದೇವೆ. ಅವರ ಮೂರು ಪ್ರಶ್ನೆ ಇದೆ. ನಾನು ಪದೇ ಪದೇ ಹೇಳುತ್ತಿದ್ದೇನೆ, ಬಹಳ ವರ್ಷದಿಂದ ಹುದ್ದೆಗಳು ಖಾಲಿ ಇವೆ.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಮುಂದು)**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(353) 10–03–2021/ 11–10/ ಕೆಹೆಚ್–ಬಿಎನ್‌ಎಸ್**

**ಶ್ರೀ ಪ್ರಭು ಬಿ.ಚವ್ಹಾಣ್ (ಮುಂದು):–**

ಬೆಳಗಾವಿ ಜಿಲ್ಲೆಯಲ್ಲಿ ದೊಡ್ಡ ವಿಭಾಗ ಇದ್ದು, ಅಲ್ಲಿ ಎಲ್ಲಾ ಕಡೆಗಳಲ್ಲಿ ಹುದ್ದೆಗಳು ಖಾಲಿ ಇದೆ. ಕೇವಲ ಬೆಳಗಾವಿಯಲ್ಲಿ ಮಾತ್ರ ಅಲ್ಲ. ಬೆಳಗಾವಿ, ಕಲ್ಯಾಣ ಕರ್ನಾಟಕ ಆಗಲಿ, ಇನ್ನು ಎಲ್ಲಾ ಕಡೆ ಹುದ್ದೆಗಳು ಖಾಲಿ ಇದೆ. ಈ ಹುದ್ದೆಗಳ ನೇಮಕಾತಿಗಾಗಿ ಮಾನ್ಯ ಮುಖ್ಯಮಂತ್ರಿಯವರ ಜೊತೆ ಮತ್ತು ಎಫ್.ಡಿ.,ಯವರ ಜೊತೆಯಲ್ಲಿ ಮಾತನಾಡಿದ್ದೇವೆ. ಈಗಾಗಲೇ ಇದು ಪ್ರಗತಿಯಲ್ಲಿದೆ. ಇದನ್ನು ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಂತರ ಗೋ–ಹತ್ಯೆ ನಿಷೇಧ ಕಾಯ್ದೆ ಅಂಗೀಕಾರಕ್ಕೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಬೆಂಬಲ ಕೊಟ್ಟು ಗೋ–ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದಿದ್ದಾರೆ. ನಿನ್ನೆಯ ಆಯವ್ಯಯದಲ್ಲಿ ಜನಪ್ರಿಯ ಮಾನ್ಯ ಮುಖ್ಯಮಂತ್ರಿಯವರು ಪ್ರತಿ ಜಿಲ್ಲೆಗೆ ಒಂದು ಗೋ–ಶಾಲೆ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇನ್ನು ಬೇರೆ ಬೇರೆ 6 ರಿಂದ 7 ವಿಷಯಗಳನ್ನು ನನಗೆ ಕೊಟ್ಟಿದ್ದಾರೆ. ಮುಂದಿನ ಸಭೆಯಲ್ಲಿ ನಾನು ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕಿಗೆ ಹೋಗಿ ಸಭೆಗಳನ್ನು ಮಾಡಿ ಒಳ್ಳೆಯ ರೀತಿಯಲ್ಲಿ ಕಾರ್ಯಗತಗೊಳಿಸುತ್ತೇನೆ. ಇದರ ಬಗ್ಗೆ ನನಗೆ ಭರವಸೆ ಇದೆ. ಊರಿಗೆ ಹೋಗುವ ಬಗ್ಗೆ ಕಾರ್ಯಪದ್ಧತಿಯನ್ನು ಮಾಡುತ್ತಿದ್ದೇವೆ. ಮುಂದಿನ ಸಭೆಯಲ್ಲಿ ಗೋ–ಹತ್ಯೆ ನಿಷೇಧ ಆಗಲಿ, ನೇಮಕಾತಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರ ಪ್ರಶ್ನೆಗೆ ಉತ್ತರ ನೀಡಲು ಮಂತ್ರಿಗಳು ಸಮಯವನ್ನು ಕೇಳಿದ್ದಾರೆ. ಮಾನ್ಯ ಸಚಿವರಾದ ವಿ.ಸೋಮಣ್ಣನವರೇ, ತಾವು ಮುಂದಿನ ವಾರ ಇದಕ್ಕೆ ಉತ್ತರವನ್ನು ಕೊಡಬೇಕು.

**ಶ್ರೀ ವಿ.ಸೋಮಣ್ಣ(ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಮಯವನ್ನು ಕೇಳುವುದು ಎನ್ನುವುದಕ್ಕಿಂತ ಹೆಚ್ಚಾಗಿ ನಮ್ಮ ಹತ್ತಿರ ಈಗಾಗಲೇ ಉತ್ತರ ಸಿದ್ಧವಿದೆ. ಮಾನ್ಯ ಸದಸ್ಯರು ಸರ್ಕಾರದ ಅನುದಾನದ ಬಗ್ಗೆ ಕೇಳಿದ್ದಾರೆ.

**ಸಭಾಪತಿಯವರು:–** ಇದಕ್ಕೆ ಮುಂದಿನ ವಾರ ಉತ್ತರ ಕೊಡಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇದಕ್ಕೆ ಸರ್ಕಾರದಿಂದ ಅನುದಾನ ಇರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮುಂದಿನ ವಾರ ತಾವು ಉತ್ತರವನ್ನು ಕೊಡಿ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಉತ್ತರವನ್ನು ನಾಳೆಯೇ ಕೊಡುತ್ತೇನೆ. ಇದರ ಬಗ್ಗೆ ಸ್ಪಷ್ಟೀಕರಣ ಬಂದಿದೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಇದಕ್ಕೆ ಸ್ಪಷ್ಟೀಕರಣ ಬರಲಿ. ಮುಂದಿನ ವಾರ ಉತ್ತರ ನೀಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1005**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಜಮೀನು ಏನಿದೆ, 1966 ರಲ್ಲಿ School of Arts and Crafts ಗೆ 22 ಎಕರೆ ಜಮೀನು ದಾವಣಗೆರೆಯ ಈಗಿನ ಮಧ್ಯಭಾಗದಲ್ಲಿ ಹಂಚಿಕೆಯಾಗಿರುತ್ತದೆ. ಅಲ್ಲಿ ವಿಶ್ವವಿದ್ಯಾಲಯ ಕೂಡ ಇದೆ. ಬೆಂಗಳೂರಿನಲ್ಲಿ ಚಿತ್ರಕಲಾ ಪರಿಷತ್ತು ನಾವು ಏನು ನೋಡುತ್ತಿದ್ದೇವೆ. ಅದಕ್ಕಿಂತ ಮುಂಚೆ ಸುಮಾರು 1966 ರಲ್ಲಿ ಆಗಿರುವ ಒಂದು ದೊಡ್ಡ ಆರ್ಟ್ಸ್ ಕಾಲೇಜು ಇದು. ಕರ್ನಾಟಕದಲ್ಲಿಯೇ ಮೊದಲು ಈ ಕಾಲೇಜು ಪ್ರಾರಂಭವಾಗಿದ್ದು. ಅಲ್ಲಿ ಏನಾಗುತ್ತಿದೆ ಎಂದರೆ, ಪ್ರತಿ ಬಾರಿಯೂ ಕನ್ನಡ ಸಾಹಿತ್ಯ ಪರಿಷತ್ತುಗಾಗಿ ಎರಡು ಎಕರೆ ಜಾಗವನ್ನು Auditorium ಮಾಡಬೇಕೆಂದು ಹೇಳಿದರು. ಆ ಜಾಗವನ್ನು ಇಲ್ಲಿಗೆ ಕೊಟ್ಟಿದ್ದಾರೆ. ದಾವಣಗೆರೆ ವಿಶ್ವವಿದ್ಯಾಲಯದವರು ಒಂದು ಮನೆಯನ್ನು ಮಾಡಬೇಕೆಂದು ಹೇಳಿದರು. ಅವರಿಗೆ ಐದು ಎಕರೆ ಜಾಗವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮಾನ್ಯ ಶಾಮನೂರು ಶಿವಶಂಕರಪ್ಪನವರು, ಮಾನ್ಯ ಸಿದ್ದೇಶ್ವರ್‌ರವರು, ಅಲ್ಲಿನ ಸ್ಥಳೀಯ ಎಂ.ಎಲ್.ಎ.,ಯವರಾದ ರವೀಂದ್ರನಾಥ್‌ರವರು ಪತ್ರವನ್ನು ಬರೆದಿದ್ದಾರೆ. ದಾವಣಗೆರೆ ಜಿಲ್ಲೆಯಾದ ಮೇಲೆ ಈಗಾಗಲೇ ಡಿ.ಸಿ.,ಯವರ ಮನೆ ಸಿದ್ಧವಾಗಿದೆ. ಇದನ್ನು ಬಾಡಿಗೆಗೆ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಯವರು ಅಲ್ಲಿಗೆ ಹೋಗಿಲ್ಲ. ಸಿ.ಇ.ಓ., ಮನೆ ಸಿದ್ಧವಿದೆ. ಅವರು ಸಹ ಹೋಗುತ್ತಿಲ್ಲ. ನಂತರ ಎಸ್.ಪಿ.,ಯವರ ಮನೆ ಸಿದ್ಧವಿದೆ. ಅಲ್ಲಿಯೂ ಕೂಡ ಹೋಗುವುದಿಲ್ಲ. ಮತ್ತೆ 4 ಎಕರೆ ಜಾಗ . . .

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದು ಎಷ್ಟು ವರ್ಷವಾಯಿತು?

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅಲ್ಲಿ ಮನೆಗಳು ಆಗಿ 4-5 ವರ್ಷಗಳು ಆಗಿವೆ. ಮತ್ತೆ ಈಗ 4 ಎಕರೆ ಜಮೀನನ್ನು ಹಂಚಿಕೆ ಮಾಡಿಸಿಕೊಂಡಿದ್ದಾರೆ. ಪ್ರತಿ ಬಾರಿ School of Arts and Crafts ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಇದರ ಬಗ್ಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದರೂ ಕೂಡ ಕಾನೂನುಬಾಹಿರವಾಗಿ ಜಮೀನನ್ನು ಹಂಚಿಕೆ ಮಾಡಿಸಿಕೊಂಡಿದ್ದಾರೆ. ಇದು ದಾವಣಗೆರೆ ಮಧ್ಯಭಾಗದಲ್ಲಿರುವುದರಿಂದ, ಪ್ರತಿ ಬಾರಿ ಇದರ ಬಗ್ಗೆ mislead ಮಾಡಿ, University land ಅನ್ನು ಈ ರೀತಿ ಮಾಡಿಕೊಳ್ಳುತ್ತಾ ಹೋಗುತ್ತಿದ್ದಾರೆ. ಇದೇ ರೀತಿ ಬೆಂಗಳೂರಿನ ವಿಶ್ವವಿದ್ಯಾಲಯದವರು ಕೂಡ 2-3 ಎಕರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಮೀನುಗಳನ್ನು ಕೊಡುತ್ತಾ ಹೋಗುತ್ತಾರೆ. ದಯವಿಟ್ಟು ಈ ರೀತಿಯಾಗಬಾರದು. ಮಾನ್ಯ ಸಚಿವರೇ, ಇದನ್ನು ದಯವಿಟ್ಟು ತಾವು ರದ್ದುಪಡಿಸಬೇಕು. ಅಷ್ಟೇ ನನ್ನ ಆಗ್ರಹವಾಗಿದೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಯವರೇ, 1966ನೇ ಇಸವಿಯಲ್ಲಿ ಸರ್ಕಾರಿ ಗೋಮಾಳ ಜಮೀನನ್ನು ಇವರಿಗೆ grant ಮಾಡಿದ್ದೇವೆ. ಈಗಾಗಲೇ 50-60 ವರ್ಷಗಳಾದರೂ ಕೂಡ ಇವರು ಸುಮಾರು 4 ಎಕರೆ ಜಮೀನನ್ನು ಬಿಟ್ಟರೆ, ಬೇರೆ ಜಮೀನನ್ನು ಉಪಯೋಗ ಮಾಡಿಲ್ಲ. ಈ ಜಮೀನು ಸಿಟಿಯೊಳಗೆ ಇರುವಂತಹದ್ದು. ಈಗಾಗಲೇ ಕಲೆ, ಚಿತ್ರಕಲೆ ಇವರಿಗೆ ಒಳ್ಳೆಯ ಪರಿಸರ ಮತ್ತು ಶಾಂತ ಪ್ರದೇಶ ಇರುವಂತಹ ಜಾಗ ಬೇಕು. ಈಗಾಗಲೇ ಈ ವಿಶ್ವವಿದ್ಯಾನಿಲಯಕ್ಕೆ ಪ್ರಶಾಂತ ಸ್ಥಳದಲ್ಲಿ 80 ಎಕರೆ ಜಮೀನನ್ನು ಮುಖ್ಯ ರಸ್ತೆಯಲ್ಲಿಯೇ ಹಂಚಿಕೆ ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಡಿ.ಸಿ.ಯವರ ಹಾಗೂ ಇನ್ನಿತರ ಅಧಿಕಾರಿಗಳಿಗಾಗಿ ಮನೆಗಳನ್ನು ಕಟ್ಟಿದ್ದಾರೆ ಎಂದು ಹೇಳಿದರು. ಅಲ್ಲಿ ಸಾರ್ವಜನಿಕ ಉಪಯೋಗಕ್ಕೋಸ್ಕರ ಡಿ.ಸಿ., ಎಸ್.ಪಿ., ಸಿ.ಇ.ಓ., ಎಲ್ಲರೂ ಒಂದೇ ಕಡೆ ಇದ್ದರೆ ಒಳ್ಳೆಯದು ಎಂದು ಈ ರೀತಿ ಮಾಡಿದ್ದಾರೆ. ಈಗ ಇವರು ಬೇರೆ ಬೇರೆ ಕಡೆಯಲ್ಲಿ ಇದ್ದಾರೆ. ಇವರೆಲ್ಲಾ ಒಂದೇ ಕಡೆ ಇದ್ದರೆ ಬರುವಂತಹ ಜನರು ಮನವಿ ಕೊಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಇದರ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದಾರೆ. ನಾನು ಕೂಡ ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ, ಸೂಕ್ತ ನಿರ್ಧಾರವನ್ನು ಆದಷ್ಟು ಶೀಘ್ರದಲ್ಲಿಯೇ ಕೈಗೊಳ್ಳುತ್ತೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಆರ್.ಅಶೋಕ್:-** ಮಾನ್ಯ ಸದಸ್ಯರೇ, ಒಂದು ನಿಮಿಷ. ನಾನು ಹೇಳಿ ಮುಗಿಸುತ್ತೇನೆ. ಅಲ್ಲಿ ನಮ್ಮ ಎಂ.ಪಿ.,ಯವರು ಇದ್ದಾರೆ. ಅಲ್ಲಿ ಎಂ.ಎಲ್.ಎ.,ಯವರು ಇದ್ದಾರೆ. ಅವರಿಬ್ಬರ ಜೊತೆಯಲ್ಲಿ ಮಾತನಾಡುತ್ತೇನೆ. ಜನಪ್ರತಿನಿಧಿಗಳ ಒಪ್ಪಿಗೆ ಇಲ್ಲ ಎಂದರೆ ಇದನ್ನು ರದ್ದುಪಡಿಸುತ್ತೇನೆ. ಇದರ ಬಗ್ಗೆ ನಾನು ಹಿಂದೆ-ಮುಂದೆ ನೋಡುವುದಿಲ್ಲ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಲ್ಲಿ ಗುತ್ತಿಗೆದಾರರಿಗೋಸ್ಕರ ಮನೆಗಳನ್ನು ಕಟ್ಟಲಾಗಿದೆಯೇ? ಅಲ್ಲಿ ಯಾರು ಕೂಡ ವಾಸ್ತವ್ಯ ಇರುವುದಿಲ್ಲ. ಅಲ್ಲಿ ಮನೆಗಳನ್ನು ಹೇಗೆ ಕಟ್ಟುತ್ತೀರಿ ಮತ್ತು ಏಕೆ ಕಟ್ಟುತ್ತೀರಿ? ಅಲ್ಲಿ ಯಾರಿಗೋಸ್ಕರ ಮನೆಗಳನ್ನು ಕಟ್ಟುತ್ತೀರಿ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ಅಲ್ಲಿ ಡಿ.ಸಿ., ಎಸ್.ಪಿ., ಸಿ.ಇ.ಓ., ರವರಿಗೆ ಮನೆಗಳನ್ನು ಮಾಡಿದ್ದೇವೆ. ಆದರೆ, ಅಲ್ಲಿ ಬಾಡಿಗೆಗೆ ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ಇದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಚಿವರೇ, ಹೌದು, ಗುತ್ತಿಗೆದಾರರಿಗೋಸ್ಕರ ಮನೆಗಳನ್ನು ಕಟ್ಟುತ್ತಿದ್ದೀರಾ ಅಥವಾ ಅವಶ್ಯಕತೆಗೋಸ್ಕರ ಕಟ್ಟಡ ಕಟ್ಟುತ್ತಿದ್ದೀರಾ ಎಂದು ನಾನು ಆಗಲೇ ಕೇಳಿದ್ದೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸದಸ್ಯರಾದ ಕೆ.ಪ್ರತಾಪಚಂದ್ರ ಶೆಟ್ಟಿಯವರೇ, ಇದರ ಬಗ್ಗೆ ನನಗೆ ಗೊತ್ತಿಲ್ಲ. ಯಾರು ಕಟ್ಟಿದ್ದಾರೆ, ಯಾವಾಗ grant ಆಯಿತು ಎಂದು ನನಗೆ ಗೊತ್ತಿಲ್ಲ. ಈಗ ಅವರಿಗೆ ಜಮೀನನ್ನು ಕೊಡಬೇಕೋ ಅಥವಾ ಬೇಡವೋ ಎಂಬುದು ನಮ್ಮ ಮುಂದಿರುವಂತಹ ಪ್ರಶ್ನೆಯಾಗಿದೆ. ಅದಕ್ಕೆ ಅಲ್ಲಿನ ಎಂ.ಎಲ್.ಎ., ಮತ್ತು ಎಂ.ಪಿ.,ಯವರ ಜೊತೆ ಚರ್ಚೆ ಮಾಡಿ, ಸಾರ್ವಜನಿಕವಾದಂತಹ ಒಳ್ಳೆಯ ನಿರ್ಧಾರವನ್ನು ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಸಚಿವರಿಗೆ ತಪ್ಪಾದ ಮಾಹಿತಿಯನ್ನು ಕೊಟ್ಟಿದ್ದಾರೆ. 80 ಎಕರೆ ಜಮೀನನ್ನು ಏನು ಕೊಟ್ಟಿದ್ದಾರೆಯಲ್ಲವೇ, ಅದು 20 ಕಿ.ಮೀ ಆಚೆಗೆ ಇದೆ. ಆರ್ಟ್ಸ್ ಸ್ಕೂಲ್ ಜಾಗ ಏನಿದೆ, ಆ 20 ಕಿ.ಮೀ ಆಚೆಗೆ ಒಂದು ಹಳ್ಳಿಯೊಳಗೆ ಜಾಗ ಕೊಡಲಾಗಿದೆ. ಅದಕ್ಕೂ-ಇದಕ್ಕೂ ಯಾವುದೇ ಸಂಬಂಧ ಇಲ್ಲ. 1964 ರಲ್ಲಿ ಈ 22 ಎಕರೆ ಜಮೀನನ್ನು ನಮ್ಮ ತಂದೆಯವರಾದ ಕೊಂಡಜ್ಜಿಯವರು ಎಂ.ಎಲ್.ಎ., ಇದ್ದಾಗ ಮತ್ತು ಮಂತ್ರಿಗಳು ಇದ್ದಾಗ ಮಂಜೂರು ಆಗಿದೆ. ಅದು ಆರ್ಟ್ಸ್ ಸ್ಕೂಲ್. ಅದಕ್ಕೂ-ಇದಕ್ಕೂ ಯಾವುದೇ ಸಂಬಂಧ ಇಲ್ಲ. ಇದರ ಬಗ್ಗೆ ಮಾನ್ಯ ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಚಿವರೇ, ದಯವಿಟ್ಟು 80 ಎಕರೆ ಜಮೀನು 20 ಕಿ.ಮೀ ದೂರದಲ್ಲಿ ಇದೆ. ಈ ಜಮೀನು ಮಧ್ಯದಲ್ಲಿ ಇರುತ್ತದೆ. ಅಲ್ಲಿ ಈಗ ಸಿಕ್ಕಾಪಟ್ಟೆ ಅಭಿವೃದ್ಧಿಯಾಗಿದೆ. ಅಲ್ಲಿ hostel ಅದು, ಇದು ಬಂದು ಅಭಿವೃದ್ಧಿಯಾಗಿದೆ. ಇದರ ಬಗ್ಗೆ ಮಾಹಿತಿಯನ್ನು ತಪ್ಪಾಗಿ ಕೊಟ್ಟು ಜಮೀನನ್ನು ಹಂಚಿಕೆ ಮಾಡಿಸಿಕೊಂಡಿದ್ದಾರೆ. ಏಕೆಂದರೆ, ಅವರು ಅಲ್ಲಿ ಬಾಡಿಗೆಗೆ ಕೊಟ್ಟಿದ್ದಾರೆ. ನಾನು ಈ ಡಿ.ಸಿ., ಮಾಡಿದ್ದಾರೆ ಎಂದು ಹೇಳುವುದಿಲ್ಲ. ತಾವೇ ಹೋಗದೆ, ತಾವೇ ತಪ್ಪು ಮಾಡಿ, ಪದೇ ಪದೇ ಜಮೀನನ್ನು ಹಂಚಿಕೆ ಮಾಡಿಸಿಕೊಳ್ಳುತ್ತಾರೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರೇ, ಇದನ್ನು ತಮಗೆ ಕಳುಹಿಸಿಕೊಡುತ್ತೇವೆ. ಇದನ್ನು ತಕ್ಷಣವೇ ರದ್ದುಪಡಿಸಬೇಕು ಮತ್ತು ತಾವು ಹೋಗಿ ಸ್ಥಳವನ್ನು ನೋಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1035**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಹಾಲು ಉತ್ಪಾದಿಸುವ ರೈತರಿಗೆ ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು ಹಾಗೂ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೇನೆ. ಇದಕ್ಕೆ ಮಾನ್ಯ ಸಚಿವರು 'ಹೌದು' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಹೌದು ಎಂದರೆ, ಹಾಲಿಗೆ ಬೆಲೆ ಸಿಗದಿರುವುದು ಮತ್ತು ಹಾಲಿನ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದು ಸಹ 'ಹೌದು' ಎನ್ನುವಂತಹ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅದಕ್ಕೆ ಸರ್ಕಾರ ತೆಗೆದುಕೊಂಡಿರುವಂತಹ ಕ್ರಮ ಏನು? ಬೇರೆ ರಾಜ್ಯಗಳಲ್ಲಿ ಇದೇ ಹಾಲಿಗೆ ರೈತರಿಗೆ ಏನು ದರ ಕೊಡುತ್ತಿದ್ದಾರೆ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಿದ್ದೇನೆ. ಇದರ ಬಗ್ಗೆ ನಾನು ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇನೆ. ನಾನು ತಂದಿರುವಂತಹ ಮಾಹಿತಿ ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿಯೂ ಸಹ ಇದೆ. ನಮ್ಮ ಕರ್ನಾಟಕದ ಕೋಲಾರ ಜಿಲ್ಲೆಯಲ್ಲಿ ಪ್ರತಿ ಲೀಟರ್ ಹಾಲಿಗೆ 27 ರೂಪಾಯಿಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಹಾಗೆಯೇ ಧಾರವಾಡ ಆಗಿರಬಹುದು. ಮಂಡ್ಯ ಜಿಲ್ಲೆಯಲ್ಲಿ ಪ್ರತಿ ಲೀಟರ್ ಹಾಲಿಗೆ 22.50 ಪೈಸೆ ರೂಪಾಯಿಗಳನ್ನು ಕೊಡುತ್ತಿದ್ದಾರೆ. 22.50 ಪೈಸೆ ರೂಪಾಯಿಗಳನ್ನು ಕೊಟ್ಟು ಸರ್ಕಾರ 5 ರೂಪಾಯಿಗಳ ಪರಿಹಾರವನ್ನು ಕೊಟ್ಟಿರುವಂತಹ ಸಮಯದಲ್ಲಿ ರೈತರು ಯಾವ ರೀತಿ ಹಾಲನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಮಂಡ್ಯದ ಮಾನ್ಯ ಸದಸ್ಯರು ಸಹ ಕೇಳಬೇಕು. ಮಂಡ್ಯ ಜಿಲ್ಲೆಯಲ್ಲಿ ಪ್ರತಿ ಲೀಟರ್ ಹಾಲಿಗೆ 22.50 ಪೈಸೆ ರೂಪಾಯಿಗಳನ್ನು ಕೊಡುವುದಕ್ಕೆ ಏನು ಕಾರಣ ಮತ್ತು ಕೋಲಾರ ಜಿಲ್ಲೆಯಲ್ಲಿ ಪ್ರತಿ ಲೀಟರ್ ಹಾಲಿಗೆ 27 ರೂಪಾಯಿಗಳನ್ನು ಕೊಡುವುದಕ್ಕೆ ಏನು ಕಾರಣ ಎನ್ನುವುದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು. ಇದಲ್ಲದೇ, ನಂದಿನಿ ಹಾಲನ್ನು 37 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. 37 ರೂಪಾಯಿಗಳಿಗೆ ನಂದಿನಿ ಹಾಲನ್ನು ಮಾರುವುದರ ಜೊತೆಗೆ ಹಾಲು ಒಕ್ಕೂಟದವರು ಬೆಣ್ಣೆಯಲ್ಲಿ ಹಣ ಮಾಡುತ್ತಾರೆ ಹಾಗೂ ತುಪ್ಪದಲ್ಲಿ ಹಣ ಮಾಡುತ್ತಾರೆ. ಬೇರೆ ಬೇರೆ ರೀತಿಯಲ್ಲಿ ಹಣವನ್ನು ಮಾಡುತ್ತಾರೆ. ನೆರೆ ರಾಜ್ಯವಾದ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಪ್ರತಿ ಲೀಟರ್ ಹಾಲಿಗೆ ಎಷ್ಟು ದರದಲ್ಲಿ ಮಾರುತ್ತಿದ್ದಾರೆ ಎಂದರೆ, ರೂ.43.00 ರಿಂದ ರೂ.47.00 ರೂಪಾಯಿಗಳವರೆಗೆ ಹಾಲನ್ನು ಮಾರಾಟ ಮಾಡುತ್ತಿದ್ದಾರೆ. ನಮ್ಮ ಸರ್ಕಾರದಿಂದ ರೈತರಿಗೆ 5 ರೂಪಾಯಿಗಳ ಪರಿಹಾರವನ್ನು ಕೊಡುತ್ತಿದೆ. ಅದು ತುಂಬಾ ಒಳ್ಳೆಯ ವಿಷಯ. ನೆರೆ ರಾಜ್ಯದಲ್ಲಿ 47 ರೂಪಾಯಿಗಳಿಗೆ ಹಾಲು ಮಾರಾಟ ಮಾಡುವಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಸ್ಥಿತಿ ಇದ್ದಾಗ, ನಮ್ಮಲ್ಲಿಯೂ ಸಹ ಆ ದರಕ್ಕೆ ಹಾಲನ್ನು ಏಕೆ ಮಾರಾಟ ಮಾಡಬಾರದು? ಇದಕ್ಕೆ ಏನು ಸಮಸ್ಯೆ ಇದೆ. ಪೆಪ್ಸಿ, ಫಾಂಟಾಗಳನ್ನು 45 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಇದೇ ದರ ನಮ್ಮಲ್ಲಿಯೂ ಸಹ ಇದೆ. ಹೀಗಿರುವಾಗ, ಹಾಲನ್ನು 32 ರೂಪಾಯಿಯಿಂದ 47 ರೂಪಾಯಿಯನ್ನು ಕೊಟ್ಟು ಏಕೆ ಖರೀದಿ ಮಾಡುವುದಿಲ್ಲ? ರೈತರಿಗೆ ಏಕೆ ಹಾಲಿನ ದರವನ್ನು ಜಾಸ್ತಿ ಮಾಡಿಕೊಡುವುದಿಲ್ಲ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದ್ದು, ಇದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ನಂತರ ನಾನು ನನ್ನ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

**(ಮುಂದು)**

**(354) 10/03/2021/ಎಸ್‌ಪಿಆರ್/ಬಿಎನ್‌ಎಸ್/11:20**

**ಶ್ರೀ ಪ್ರಭು ಬಿ.ಚವ್ಹಾಣ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿಯ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ಅಂಕಿ-ಅಂಶಗಳೊಂದಿಗೆ ಲಿಖಿತ ಉತ್ತರವನ್ನು ನೀಡಲಾಗಿದೆ. ಆದರೂ ಸದಸ್ಯರಿಗೆ ಆತಂಕವಿದೆ. ನಮ್ಮ ಸರ್ಕಾರದ ವತಿಯಿಂದ 5/- ರೂಪಾಯಿಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಸದಸ್ಯರು ಪ್ರಸ್ತಾಪಿಸಿರುವ ಸಮಸ್ಯೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಬೇರೆ ಬೇರೆ ಕೆ.ಎಂ.ಎಫ್‌ಗಳ ಜೊತೆಗೆ ಚರ್ಚೆ ಮಾಡಿ ಸರಿಪಡಿಸುವುದಕ್ಕೆ ಪ್ರಯತ್ನಗಳನ್ನು ಮಾಡಿ, ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದು. ಮಾನ್ಯ ಸದಸ್ಯರ ಎಲ್ಲಾ ಪ್ರಶ್ನೆಗಳಿಗೆ ಇದು ಒಂದೇ ಉತ್ತರವಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ದೇಶಿಯ ಹಸುಗಳ ಪೈಕಿ ನಾನು ಘೀರ್ ತಳಿಯ ಆಕಳು ಸಾಕಿದ್ದೇನೆ. ಹೊರಗಡೆ, ಒಂದು ಲೀಟರ್ ಹಾಲಿಗೆ 80 ರೂಪಾಯಿ ಇದೆ; ಆದರೆ ಒಂದು ಲೀಟರ್ ಹಾಲಿಗೆ 29/- ರೂಪಾಯಿಗಳಂತೆ ಕೆ.ಎಂ.ಎಫ್.ಗೆ ಹಾಲು ಕೊಡುತ್ತೇವೆ. ಇದರಿಂದಾಗಿ ಒಂದು ವಾರಕ್ಕೆ ನನಗೆ 5,000/- ರೂಪಾಯಿಗಳ ನಷ್ಟವಾಗುತ್ತಿದೆ. ಈ ವಿಚಾರದಲ್ಲಿ ಸದಸ್ಯರು ಹೇಳುವ ಅಂಶವು ಸರಿಯಾಗಿದೆ. ಹೀಗಾಗಿ ಸರ್ಕಾರವು ಇದನ್ನು ಪುನರ್ ಪರಿಶೀಲಿಸಬೇಕು. ರೈತರಿಗೆ ಯಾವ ರೀತಿಯಾಗಿ ಅನುಕೂಲ ಮಾಡಬೇಕೆನ್ನುವುದನ್ನು ಸರ್ಕಾರವು ನೋಡಬೇಕು.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಸಚಿವರು ಕೆ.ಎಂ.ಎಫ್. ರವರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಷ್ಟು ಕಾಲಾವಕಾಶವಿಲ್ಲ. ಏಕೆಂದರೆ ಈಗ ಬೇಸಿಗೆ ಬರುತ್ತಿದೆ. ಈಗಾಗಲೇ ಹೊರಗಡೆ ಮೇವಿನ ಅಭಾವವಾಗಿದ್ದು; ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಹೀಗಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರವು ಈ ಕೂಡಲೇ ಈ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಬೇಕು. ರೈತರಿಗೆ ಒಂದು ಲೀಟರ್ ಹಾಲಿಗೆ 27/- ರೂಪಾಯಿಗಳನ್ನು ನೀಡಲಾಗುತ್ತಿದೆ, ತಕ್ಷಣವೇ ಅದನ್ನು 37/- ರೂಪಾಯಿಗಳಗೆ ಹೆಚ್ಚಿಸಬೇಕು ಹಾಗೂ ಸದನದಲ್ಲಿ ಇದನ್ನು ಪ್ರಕಟಿಸಬೇಕು. ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ನಾನು ಪುನಃ ಈ ಪ್ರಶ್ನೆಗಳನ್ನೇ ಕೇಳುತ್ತೇನೆ. ಸರ್ಕಾರವು ಹೆಚ್ಚಿನ ಪ್ರೋತ್ಸಾಹ ಧನವನ್ನು ನೀಡದಿದ್ದರೆ, ನಾವು ಪ್ರತಿಭಟನೆಯನ್ನು ಮಾಡಲು ಸಿದ್ಧರಿದ್ದೇವೆ.

ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ನಂತರ ತಮ್ಮ ಹಸುಗಳಿಗೆ ಸರಿಯಾದ ಬೆಲೆ ಸಿಗದೇ ರೈತರು ಆತಂಕಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಸರ್ಕಾರವು ಲಿಖಿತ ಉತ್ತರದಲ್ಲಿ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ತಿಳಿಸಿರುತ್ತದೆ. ಕೋಲಾರದ ಭಾಗದಲ್ಲಿ 'ಮಹಾ ಶಿವರಾತ್ರಿ' ಹಬ್ಬದ ಪ್ರಯುಕ್ತ ಜಾತ್ರೆಯೊಂದು ನಡೆಯುತ್ತದೆ. 'ಆವಣಿ ಜಾತ್ರೆಗೆ ಜಾನುವಾರುಗಳ ದಂಡು' ಎಂದು ಅಲ್ಲಿನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಜಾತ್ರೆಗೆ ಜಾನುವಾರುಗಳ ದಂಡು ಏಕೆ ಜಾಸ್ತಿಯಾಗುತ್ತದೆ ಎನ್ನುವ ವಿಚಾರವನ್ನು ಸರ್ಕಾರವು ದಯಮಾಡಿ ಅರ್ಥಮಾಡಿಕೊಳ್ಳಬೇಕು. ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಾದ ನಂತರ ರೈತರು ಅಂತಹ ಹಸುಗಳನ್ನಿಟ್ಟುಕೊಂಡು ಏನು ಮಾಡುತ್ತಾರೆ? ಒಂದು ಕಡೆ ಜಾನುವಾರುಗಳಿಗೆ ಮೇವು ದೊರೆಯುತ್ತಿಲ್ಲ; ಅವರು ನೀಡುವ ಹಾಲಿಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತಿಲ್ಲ; ಗಂಡು ಕರುಗಳನ್ನು ಖರೀದಿಸಲು ಜನ ಇಲ್ಲ. ಇಂತಹ ವಿಷಯದ ಬಗ್ಗೆ ಮಾಹಿತಿಯನ್ನು ನಾನು ತೆಗೆದುಕೊಂಡು ಬಂದಿದ್ದೇನೆ. ನಮ್ಮ ರಾಜ್ಯದಲ್ಲಿ ಒಂದು ವರ್ಷಕ್ಕೆ 20,18,000 ಗಂಡು ಕರುಗಳು ಹುಟ್ಟುತ್ತವೆ. ಆವಣಿ ಎನ್ನುವುದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಸಣ್ಣ ಹೋಬಳಿಯಾಗಿದ್ದು, ಅಲ್ಲಿ 22,000 ಹಸುಗಳನ್ನು ಸಾಕುತ್ತಾರೆ ಎನ್ನುವ ಮಾಹಿತಿಯು ಕಳೆದ 20 ದಿನಗಳ ಹಿಂದೆ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಸದರಿ ಪತ್ರಿಕಾ ವರದಿಯನ್ನು ನಾನು ಅವಶ್ಯವಿದ್ದಲ್ಲಿ ಸಚಿವರಿಗೆ ಒದಗಿಸುತ್ತೇನೆ. ಜಾನುವಾರುಗಳು ಹಾಲು ಕೊಡುವುದನ್ನು ನಿಲ್ಲಿಸಿದ ನಂತರ ಅವುಗಳ ಮತ್ತು ಗಂಡು ಕರುಗಳ ಪರಿಸ್ಥಿತಿ ಏನು? ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಜಿಲ್ಲೆಗೊಂದರಂತೆ ಗೋಶಾಲೆಗಳನ್ನು ತೆರೆಯುವುದಾಗಿ ಘೋಷಿಸಲಾಗಿದೆ. ಜಿಲ್ಲೆಗೊಂದರಂತೆ ಗೋಶಾಲೆಗಳನ್ನು ತೆರೆದಾಗ, 20,18,000 ಗಂಡು ಕರುಗಳು ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಹುಟ್ಟುವಾಗ ಮತ್ತು ಕೋಲಾರ ಜಿಲ್ಲೆಯೊಂದರಲ್ಲಿ ಮಾತ್ರವೇ ಸುಮಾರು 4 ಲಕ್ಷದಷ್ಟು ಗಂಡು ಕರುಗಳಿದ್ದಾಗ ಮತ್ತು ವಯಸ್ಸಾದ 4 ಲಕ್ಷದಷ್ಟು ಹಸುಗಳನ್ನು ಸರ್ಕಾರವು ಎಲ್ಲಿ ಕಟ್ಟುತ್ತದೆ ಮತ್ತು ಈ ವಿಚಾರದಲ್ಲಿ ಸರ್ಕಾರವು ಯಾವ ರೀತಿಯಾದ ವ್ಯವಸ್ಥೆಗಳನ್ನು ಮಾಡಿದೆ ಎನ್ನುವುದರ ಬಗ್ಗೆ ಸರ್ಕಾರವು ಸ್ಪಷ್ಟೀಕರಣವನ್ನು ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಬೇಕು.

**ಸಭಾಪತಿಯವರು:–** ಈ ವಿಚಾರದ ಬಗ್ಗೆ ನಾನು ಹೇಳುತ್ತೇನೆ. ಇದರ ಬಗ್ಗೆ ರಾಜ್ಯದ ಬಹಳಷ್ಟು ರೈತರ ಸಮಸ್ಯೆ ಇದೆ. ಆದ್ದರಿಂದ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಈ ಪ್ರಶ್ನೆಯನ್ನು ವರ್ಗಾವಣೆ ಮಾಡಲಾಗುವುದು. ಹೀಗಾಗಿ ಇದನ್ನು ಮುಂದಿನ ವಾರದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

**(ಸದರಿ ಪ್ರಶ್ನೆಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ನೀಡಲಾಯಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 882**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ಲೋಕೋಪಯೋಗಿ ಸಚಿವರು ಉಪಸ್ಥಿತರಿಲ್ಲ. ಬೆಂಗಳೂರಿನ ದಿಗ್ಗಜರಾದ ಶ್ರೀ ವಿ.ಸೋಮಣ್ಣ, ಶ್ರೀ ಆರ್.ಅಶೋಕ್ ಮತ್ತು ಶ್ರೀ ಕೆ.ಗೋಪಾಲಯ್ಯ ರವರುಗಳು ಸದನದಲ್ಲಿಯೇ ಕುಳಿತಿದ್ದಾರೆ; ಅವರುಗಳಿಗೆ ಈ ಕಷ್ಟ ಗೊತ್ತಿದೆ. ನಗರದ ಮೇಖ್ರಿ ವೃತ್ತದಿಂದ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಬೇಕಾದ ಅವಧಿಯಲ್ಲಿ ಬಸುರಿಗೆ ಹೆರಿಗೆಯಾಗುತ್ತದೆ. ಇದರರ್ಥ ಪ್ರಯಾಣಕ್ಕಾಗಿ ಅಷ್ಟು ಸಮಯ ಬೇಕಾಗುತ್ತದೆ. ಇದರ ಬಗ್ಗೆ ಈ ಮೊದಲು ಕಾರ್ಯಕ್ರಮವೊಂದು ಜಾರಿಗೆ ಬಂದಿದ್ದು, ಕಾರಣಾಂತರಗಳಿಂದ ಅದು ಜಾರಿಗೊಂಡಿರಲಿಲ್ಲ. ಇದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯಲ್ಲಿದೆ. ದಿನಾಂಕ 06/05/2020 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರಸ್ತೆ ಅಗಲೀಕರಣ ಯೋಜನೆಯ ಕಾರ್ಯಾದೇಶವನ್ನು ನೀಡಲಾಗಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿಯ ಅವಶ್ಯಕತೆ ಇದೆ. ಸದನದಲ್ಲಿ ಮಂತ್ರಿಗಳು ಇರುವುದಿಲ್ಲ. ಹೀಗಾಗಿ ಇದರ ಬಗ್ಗೆ ನಾವು ಯಾರನ್ನು ಕೇಳಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉಪ ಮುಖ್ಯಮಂತ್ರಿ ಹಾಗೂ ಲೋಕೋಪಯೋಗಿ ಇಲಾಖೆ ಪರವಾಗಿ):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಚಾಲುಕ್ಯ ವೃತ್ತದಿಂದ ದೇವನಹಳ್ಳಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಉದ್ದೇಶಿತ ಯೋಜನೆ ವಿಳಂಬವಾಗಲು ಕಾರಣಗಳನ್ನು ಸದಸ್ಯರು ಕೇಳಿದ್ದಾರೆ. ಇದರಲ್ಲಿ ನಗರದ ಹೆಬ್ಬಾಳ ಪ್ರದೇಶದಿಂದ ದೇವನಹಳ್ಳಿಯವರೆಗಿನ ರಸ್ತೆ ಮತ್ತು ಚಾಲುಕ್ಯ ವೃತ್ತದಿಂದ ಹೆಬ್ಬಾಳವರೆಗಿನ ರಸ್ತೆ ಇಂತಹ ಎರಡು ಕಾಮಗಾರಿಗಳು ಒಳಗೊಂಡಿವೆ. ಹೆಬ್ಬಾಳದಿಂದ ದೇವನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣಗೊಂಡಿದೆ. ಚಾಲುಕ್ಯ ವೃತ್ತದಿಂದ ಹೆಬ್ಬಾಳವನ್ನು ಸಂಪರ್ಕಿಸುವ ರಸ್ತೆ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ.

**ಸಭಾಪತಿಯವರು:-** ಪ್ರಸ್ತುತ ಪ್ರಶ್ನೆಗೆ ಲೋಕೋಪಯೋಗಿ ಸಚಿವರೇ ಉತ್ತರವನ್ನು ನೀಡಲಿ. ಹೀಗಾಗಿ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವು ಸಿದ್ಧವಿದೆ. ಹೀಗಾಗಿ ನಾನು ಮಾಹಿತಿಯನ್ನು ನೀಡುತ್ತೇನೆ.

**ಸಭಾಪತಿಯವರು:-** ಇದು ಸರಿಯೆನ್ನಿಸುವುದಿಲ್ಲ. ಹೀಗಾಗಿ ಸಚಿವರು ಮುಂದಿನ ವಾರ ಉತ್ತರವನ್ನು ನೀಡಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಪ್ರಶ್ನೆಗೆ ಉತ್ತರ ಸಿದ್ಧವಿದೆ. ಆದರೂ ಸಹ ಸದಸ್ಯರು ಹೆಚ್ಚುವರಿ ಉತ್ತರಗಳನ್ನು ಬಯಸಿದ್ದಲ್ಲಿ ಅವರಿಂದಲೇ ಉತ್ತರವನ್ನು ಕೊಡಿಸಲಾಗುವುದು. ಆದರೆ ಇಲ್ಲಿನ ಪರಿಸ್ಥಿತಿಗಳ ಬಗ್ಗೆ ನಾನು ಹೇಳುತ್ತೇನೆ. ಪ್ರಶ್ನಿತ ಕಾಮಗಾರಿಗೆ ಸಂಬಂಧಪಟ್ಟಂತೆ ಪ್ರಕರಣವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವುದರಿಂದ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗುತ್ತಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಒಂದು ದಶಕ ಕಳೆದರೂ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬರುವುದಿಲ್ಲ ಮತ್ತು ಇತ್ಯರ್ಥಗೊಳ್ಳುವುದೇ ಇಲ್ಲ. ಬೆಂಗಳೂರು ನಗರದ ವಾಹನ ದಟ್ಟಣೆ ಮುಂದೆಯೂ ಹೀಗೆಯೇ ಇರುತ್ತದೆಯೇ? ಇದರ ಗತಿ ಏನು? ಆಗ ಏನು ಮಾಡುವುದು?

**ಸಭಾಪತಿಯವರು:-** ಈಗ ಸಭಾನಾಯಕರು ನೀಡುವ ಉತ್ತರದಿಂದ ನನಗೂ ಸಹ ಸಮಾಧಾನವಾಗಿಲ್ಲ. ಹೀಗಾಗಿ ಲೋಕೋಪಯೋಗಿ ಸಚಿವರಾದ ಉಪಮುಖ್ಯಮಂತ್ರಿಗಳು ಸದನಕ್ಕೆ ಬಂದು ಉತ್ತರವನ್ನು ನೀಡಲಿ. ಅದಕ್ಕೆ ನಾನು ನಾಳೆಗೆ ಅನುಮತಿ ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ : 890**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆಗಳಿಗೆ ಸರ್ಕಾರವು ಉತ್ತರಿಸಿದೆ. ನಮ್ಮ ಕೊಡಗಿನಲ್ಲಿ ಜಮ್ಮಾ ಬಾಣೆ ಎನ್ನುವುದು ವಿಶೇಷ ಖಾತೆಯಾಗಿದೆ. ಇದು ನಾವು ಅನೇಕ ವರ್ಷಗಳಿಂದ ಅಂದರೆ ಪೂರ್ವಕಾಲದಿಂದಲೂ ಪಡೆದುಕೊಂಡು ಬಂದಿರುವ ಹಕ್ಕು ಆಗಿದೆ. ಕೊಡಗು ಜಿಲ್ಲೆಯ ಜಮ್ಮಾ ಬಾಣೆಯ ಪಹಣಿಯಲ್ಲಿರುವ ಕುಟುಂಬದ ಮುಖ್ಯಸ್ಥ ಅಂದರೆ ಪಟ್ಟೇದಾರರ ಹೆಸರನ್ನು ಇತ್ತೀಚಿಗೆ ಕಂದಾಯ ಇಲಾಖೆಯವರು ಸದರಿ ಜಮೀನಿನ ಮುಖ್ಯಸ್ಥನೆಂದು ಪರಿಗಣಿಸಿದೆ. ಕೊಡಗಿನ ಅವಿಭಜಿತ ಕುಟುಂಬದ ಆಸ್ತಿ ಹಕ್ಕು ಪಡೆಯಲು ಈ ಹಿಂದೆ ಕುಟುಂಬದ ವಯಸ್ಕ ಸದಸ್ಯರ ಒಪ್ಪಿಗೆಯನ್ನು ಪಡೆದುಕೊಂಡಿದ್ದಲ್ಲಿ ಸಾಕಾಗಿತ್ತು. ಆದರೆ ಈಗಿನ ವ್ಯವಸ್ಥೆಯ ಕೂಡು ಕುಟುಂಬದ ಆಸ್ತಿಯ ಮೇಲೆ ಕುಟುಂಬದ ಮುಖ್ಯಸ್ಥ ಅಂದರೆ ಪಟ್ಟೇದಾರರ ಮಕ್ಕಳಿಗೆ ಅಧಿಕಾರ ನೀಡುತ್ತದೆ. ಈ ರೀತಿಯ ಕುಟುಂಬದ ಇತರ ಸದಸ್ಯರ ವಶದಲ್ಲಿರುವ ಜಮೀನಿನ ಮೇಲೆ ಕುಟುಂಬದ ಮುಖ್ಯಸ್ಥ ಅಂದರೆ ಪಟ್ಟೇದಾರನ ಮಕ್ಕಳ ಮಾಲೀಕತ್ವ ಲಭಿಸುತ್ತದೆ. ಇದು ಅನಗತ್ಯ ತಿಕ್ಕಾಟಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಈ ಪ್ರಕ್ರಿಯೆಯಲ್ಲಿ ಜಿಲ್ಲೆಯ ಒಂದೊಂದು ಹೋಬಳಿಯಲ್ಲಿ ಒಂದೊಂದು ಮಾನದಂಡವನ್ನು ಪಾಲಿಸಬೇಕಾಗುತ್ತದೆ. ಇದರ ಜೊತೆಗೆ ಕುಟುಂಬದ ನಡುವಿನ ಕಾನೂನು ಬದ್ಧ ಪಾಲುದಾರಿಕೆ ಒಪ್ಪಂದವಿದ್ದರೂ ಸಹ ಕೂಡು ಕುಟುಂಬದ ಸದಸ್ಯ ತನ್ನ ಪಾಲಿನ ಜಮೀನಿನ ಒಡೆತನ ಪಡೆಯಲು ಮತ್ತೊಂದು ಕಾನೂನಿನ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಪೌತಿ ಖಾತೆ ಆಂದೋಲನದಿಂದಾಗಿ ಕೊಡಗು ಜಿಲ್ಲೆಯು ಸೀಮಿತ ಯಶಸ್ಸು ಕಾಣುತ್ತಿದೆ. ಕೊಡಗು ಜಿಲ್ಲೆಯ ಮಟ್ಟಿಗೆ ಕೂಡು ಕುಟುಂಬಗಳ ಜಂಟಿ ಮಾಲೀಕತ್ವದ ಜಮೀನಿನಲ್ಲಿ ತನ್ನ ಪಾಲಿನ ಜಮೀನಿನ ಮೇಲೆ ಮಾಲೀಕತ್ವವನ್ನು ಪಡೆಯಲು ಹಿಡುವಳಿದಾರರಿಗೆ ಅನುಕೂಲವಾಗುವಂತೆ ಅಂದರೆ ಜಮ್ಮಾ ಬಾಣೆಯ ಪಹಣಿಯಲ್ಲಿರುವ ಕುಟುಂಬದ ಮುಖ್ಯಸ್ಥ (ಪಟ್ಟೇದಾರರ) ಹೆಸರನ್ನು ತೆಗೆದುಹಾಕಬೇಕು. ಪೌತಿ ಖಾತೆ ಆಂದೋಲನದಲ್ಲಿ ಪೂರಕ ಬದಲಾವಣೆಯಾಗಬೇಕೆಂದು ನಾನು ಹೇಳುತೇನೆ. ಇದಕ್ಕೆ ಸಂಬಂಧಪಟ್ಟಂತೆ ಇತ್ತೀಚೆಗೆ ಸರ್ಕಾರದ ಸುತ್ತೋಲೆಯು ಬಂದಿದೆ. ಅದನ್ನು ಒಪ್ಪುವುದಕ್ಕೆ ಖಂಡಿತವಾಗಿಯೂ ಸಹ ಸಾಧ್ಯವಿಲ್ಲ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ರಾಜರ ಮತ್ತು ಬ್ರಿಟೀಷರ ಕಾಲದಲ್ಲಿ ಜಮ್ಮಾ, ಉಂಬಳಿ, ಜಾಗೀರು, ಜೋಡಿ, ಬಟ್ಟಮಾನ್ಯ ಮತ್ತು ಸರ್ವಮಾನ್ಯ ಇಂತಹ ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಜಮೀನುಗಳನ್ನು ಕರುಗಳಿಗೆ ಮೇವು ನೀಡುವುದಕ್ಕಾಗಿ, ಹಸಿರೆಲೆ ಗೊಬ್ಬರ, ಕಟ್ಟಿಗೆ ಇತ್ಯಾದಿ ಮರ–ಮುಟ್ಟುಗಳನ್ನು ಬೆಳೆಸುವುದಕ್ಕಾಗಿ ಸ್ಥಳೀಯರಿಗೆ ನೀಡಲಾಗಿತ್ತು. ಇದಾದ ಮೇಲೆ ಪಟ್ಟೇದಾರರ ಹೆಸರಿನಲ್ಲಿ ಜಮ್ಮಾ ಬಂದಿಯ ಕಲಂ (4) ನ್ನು ದಾಖಲಿಸಿದ್ದು, ಸದರಿ ಕುಟುಂಬದ ಸದಸ್ಯರಿಗೆ ಕೊಡುವ ಅವಕಾಶವನ್ನು ಈಗಾಗಲೇ ಸರ್ಕಾರವು ನೀಡಿದೆ. ಈಗಾಗಲೇ ಪಟ್ಟೇದಾರರು ಎಂದರೆ ಆ ಕುಟುಂಬದ ಹಿರಿಯ ಸದಸ್ಯರ ಹೆಸರು ಆಗಿರುತ್ತದೆ. ಈ ಮೊದಲಿನಿಂದಲೂ ಇದೇ ಪದ್ಧತಿಯು ಮುಂದುವರೆದುಕೊಂಡು ಬಂದಿದೆ. ಆ ಕುಟುಂಬದ ಹಿರಿಯ ಸದಸ್ಯರ ಹೆಸರಿಗೆ ಜಮ್ಮಾ ಬಾಣೆಯು ಕಂದಾಯಕ್ಕೆ ಒಳಪಟ್ಟಿರುವ ಪ್ರಕರಣಗಳಲ್ಲಿ ಪಟ್ಟೇದಾರರ ಹೆಸರಿನೊಂದಿಗೆ ಅದರ ಅನುಭವದಾರರ ಹೆಸರೂ ಸಹ ಜಂಟಿಯಲ್ಲಿರುತ್ತದೆ. ಪಟ್ಟೇದಾರರು ಮೃತರಾದರೆ, ಪೌತಿ ಖಾತೆ ಮಾಡುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಸರ್ಕಾರವು ನಿಯಮಾನುಸಾರ ಇದನ್ನು ಮಾಡುತ್ತದೆ. ಈಗಾಗಲೇ ಮುಖ್ಯಮಂತ್ರಿಗಳು ಇದರ ಬಗ್ಗೆ ಚರ್ಚಿಸಿದ್ದಾರೆ. ಅಲ್ಲಿನ ಕಾಣೆ, ಕುಮ್ಕಿ ಇನ್ನಿತರೆ ಪರಿಭಾವಿತ ಅರಣ್ಯ ಪ್ರದೇಶಗಳೆಲ್ಲವೂ ಸಹ ದೊಡ್ಡ ಸಮಸ್ಯೆಯಾಗಿದೆ.

**(ಮುಂದು)**

**(355)/10–3–2021/11–30/ಎಲ್‌ಎಂ/ಜಿಆರ್**

**ಶ್ರೀ ಆರ್.ಅಶೋಕ(ಮುಂದು):–**

ಮಲೆನಾಡು ಭಾಗದ 7–8 ಜಿಲ್ಲೆಗಳಲ್ಲಿ ಸುಮಾರು ನೂರಾರು ವರ್ಷಗಳಿಂದ ಈ ರೀತಿಯ ದೊಡ್ಡ ಸಮಸ್ಯೆಗಳು, ಕಾನೂನಾತ್ಮಕ ತೊಡಕುಗಳು ಇವೆ. ಎಲ್ಲಾ ದಾಖಲೆಗಳಲ್ಲಿ ಸರ್ಕಾರಿ ಎಂದು ಬಂದಿದೆ. ಸೊಪ್ಪಿನ ಬೆಟ್ಟ ಎನ್ನುವುದನ್ನು ರೈತರಿಗೆ ಮೇವು ಬೆಳೆಯಲು ಕೊಟ್ಟಿರುವುದು. ಈಗ ಅಲ್ಲಿಯು ಉಳುಮೆ ಮಾಡುತ್ತಿದ್ದಾರೆ. ಈ ರೀತಿ 7–8 ಜಿಲ್ಲೆಗಳಲ್ಲಿ ಈ ಸಮಸ್ಯೆಗಳು ಇರುವುದರಿಂದ ಇದಕ್ಕೆ ಕಾನೂನಾತ್ಮಕವಾಗಿ ಅಂತಿಮ ಸ್ವರೂಪವನ್ನು ಕೊಡಲು ನಾನು ಕಂದಾಯ ಸಚಿವನಾದ ಮೇಲೆ ಎಲ್ಲಾ ಎಂ.ಎಲ್.ಎ., ಗಳನ್ನು ಕರೆದು ಚರ್ಚೆ ಮಾಡಿದ್ದೇನೆ. ಅಧಿಕಾರಿಗಳ ಜೊತೆಯಲ್ಲಿಯು ಮಾತನಾಡಿದ್ದೇನೆ. ಬಜೆಟ್‌ನಲ್ಲಿಯು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿ, ಈ ಜಮೀನಿನ ಮಾಲೀಕತ್ವ ಮತ್ತು ಪರಿಹಾರ ಕೊಡುವ ಬಗ್ಗೆ ಸಮಿತಿಯಲ್ಲಿ ಚರ್ಚೆ ಮಾಡಲಾಗುತ್ತದೆ ಅವರಿಗೆ ಏನು ಅವಕಾಶ ಸಿಗಬೇಕು ಅದನ್ನು ಕೊಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಎನ್ ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಗಳೆ, ಹೊರ ರಾಜ್ಯಗಳಿಂದ ಬರುವ ಅಧಿಕಾರಿಗಳಿಗೆ ಕೊಡಗಿನ ಬಗ್ಗೆ ಯಾವುದೇ ವಿಚಾರವು ಗೊತ್ತಿರುವುದಿಲ್ಲ. ಕೊಡಗಿನಲ್ಲಿ ತನ್ನದೆ ಆದ ಸಂಸ್ಕೃತಿ, ಪದ್ದತಿ ಎಲ್ಲವು ಇದೆ. ಕೇವಲ ಅಧಿಕಾರಿಗಳಿಂದ ಕೇಳಿ ತಿಳಿದುಕೊಳ್ಳುವುದು ಸರಿಯಲ್ಲ ಎನ್ನುವುದು ನನ್ನ ವಾದ. ನಮ್ಮಲ್ಲಿ ಕೂಡು ಕುಟುಂಬಗಳು ಇವೆ. ಕೂಡು ಕುಟುಂಬ ಎಂದರೆ 'ಶಾಂತಎಡ್ಡ' ಎಂದು ಕೂಡು ಕುಟುಂಬ ಇರುತ್ತದೆ. "ಶಾಂತ ಎಡ್ಡ" ಎಂದರೆ 200 ರಿಂದ 300 ಜನರು ಇರುತ್ತಾರೆ. ಹೀಗೆ ಇರುವಾಗ ಯಾವ ರೀತಿ ಒಬ್ಬರ ಹೆಸರಿಗೆ ಮಾಡಲು ಸಾಧ್ಯವಾಗುತ್ತದೆ. ಅದು ಅಲ್ಲದೆ ಮನೆಯ ಒಡಯ ಸತ್ತ ಮೇಲೆ ಅವನ ಮಕ್ಕಳಿಗೆ ಆಸ್ತಿ ಹೋಗುತ್ತದೆ. ಹಾಗಾದಾಗ ಆ ಮಕ್ಕಳು ಬೇರೆಯವರಿಗೆ ಪೌತಿ ಖಾತೆಯನ್ನು ಮಾಡಿ ಕೊಡುತ್ತಾರೆ ಎಂದು ಹೇಗೆ ನಂಬುವುದು. ಇದಕ್ಕೆ ಕಾನೂನಿನಲ್ಲಿ ಅವಕಾಶ ಕೊಡಬಾರದು ಎಂದು ಮಾನ್ಯ ಮಂತ್ರಿಗಳಿಗೆ ಒತ್ತಾಯಿಸುತ್ತೇನೆ, ಈ ರೀತಿ ಮಾಡುವುದು ಸರಿಯಲ್ಲ. ಪಟ್ಟೇದಾರರ ಮಕ್ಕಳಿಗೆ ಅದು ಹೋಗಬೇಕು ಎಂದು ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಇದು ಯಾವ ನ್ಯಾಯ? ಪಟ್ಟೇದಾರರ ಮಕ್ಕಳಿಗೆ ಹೋದರೆ ಬಾಕಿ ಇರುವ ಕುಟುಂಬಳಿಗೆ ಯಾವ ರೀತಿ ಪಹಣೆ ಪತ್ರ ಕೊಡಲು ಸಾಧ್ಯ? ಆದ್ದರಿಂದ ಈ ತಿದ್ದುಪಡಿಗೆ ಇಡೀ ಕೊಡಗಿನವರ ವಿರೋಧವಿದೆ ಎಂದು ಹೇಳಬಯಸುತ್ತೇನೆ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಗಳೆ, ಇದರಲ್ಲಿ ಬಹಳ ಗೊಂದಲವಿರುವುದರಿಂದಲೇ ಸಮಿತಿಯನ್ನು ನೇಮಕ ಮಾಡಲಾಗಿದೆ. ಪಟ್ಟೇದಾರಿ ಎಂದು ಇರುವುದನ್ನು ಕೊಡಲು ಇಲ್ಲಿ ಅವಕಾಶ ಮಾಡಿಕೊಡಲಾಗಿದೆ. ಪಟೇಗಾರ ಎಂದರೆ ಕುಟುಂಬದ ಹಿರಿಯರ ಹೆಸರು. ಇದು ಇವತ್ತಿನದಲ್ಲ, ನೂರಾರು ವರ್ಷಗಳಿಂದ ಬಂದಿರುವುದು.

**ಸಭಾಪತಿಯವರು:-** ಅದನ್ನೇ ಸರಿ ಮಾಡಿ ಎಂದು ಅವರು ಹೇಳುತ್ತಿರುವುದು. ಸರಿ ಮಾಡಿ ಅದನ್ನು.

**ಶ್ರೀ ಆರ್.ಅಶೋಕ:-**ಮಾನ್ಯ ಸಭಾಪತಿಗಳೆ, ಸರ್ಕಾರ ಇದರ ಬಗ್ಗೆ ಗಮನಹರಿಸಿಯೇ ಒಂದು ಸಮಿತಿಯನ್ನು ರಚನೆ ಮಾಡಿದೆ. ಆ ಸಮಿತಿಯಲ್ಲಿ ಕಾನೂನಾತ್ಮಕವಾಗಿ ಹೇಗೆ ವರ್ಗಾಯಿಸಬಹುದು ಎನ್ನುವುದನ್ನು ತೀರ್ಮಾನಿಸಬೇಕಾಗುತ್ತದೆ. ಕಾನೂನು ಮಾಡದೆ ಹಾಗೆ ಕೊಟ್ಟರೆ ಅದಕ್ಕೆ ಅರ್ಥವೇ ಬರುವುದಿಲ್ಲ. ಮತ್ತೆ ಯಾರ್‍ಯಾದರೂ ಕೋರ್ಟ್‌ಗೆ ಹೋಗಬಹುದು. ಕೊಡಗಿನಲ್ಲಿ conversion ಮಾಡುವುದನ್ನೆ ನಿಲ್ಲಿಸಬೇಕೆಂದು ಕೋರ್ಟ್‌ಗೆ ಹಾಕಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಅದನ್ನು ಬ್ರಿಟೀಷ್‌ನವರು ಕೊಟ್ಟಿದ್ದು. It is their privilege. ಯಾಕೆ ಕೊಟ್ಟರು ಎನ್ನುವುದು ಬೇಡ.

**ಸಭಾಪತಿಯವರು:–** ಅದು ಸಮತಿಯಲ್ಲಿ ಚರ್ಚೆಯಾಗುತ್ತದೆ ಬಿಡಿ.

**ಶ್ರೀ ಆರ್.ಅಶೋಕ:–** ಸರ್ಕಾರ ಏಕೆ ಕೊಟ್ಟಿದೆ ಅವರಿಗೆ?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–**ಕೊಟ್ಟಿರುವುದು ಸರ್ಕಾರವಲ್ಲ, ಹಿಂದಿನ ಬ್ರಿಟಿಷ್‌ರ ಕಾಲದಲ್ಲಿ ಕೊಟ್ಟಿರುವುದು.

**ಶ್ರೀ ಆರ್.ಅಶೋಕ:–** ಏತಕೆ ಕೊಟ್ಟರು?

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–**ಕೃಷಿ ಮಾಡಲು ಕೊಟ್ಟಿದ್ದಾರೆ. ಕಂದಾಯ ಸಚಿವರಿಗೆ ಪಾಣೆ, ಕಾಣೆ, ಸೊಪ್ಪಿನ ಬೆಟ್ಟ, ಕುಮ್ಕಿ ಎನ್ನುವ ಮಾಹಿತಿ ಇಲ್ಲ ಎಂದರೆ ಕಷ್ಟ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಗಳೆ, ಅದರ ಬಗ್ಗೆ ನಾನು ನಾಲ್ಕು ಮೀಟಿಂಗ್‌ಗಳನ್ನು ಮಾಡಿದ್ದೇವೆ. ಏನಾದರೂ ತಪ್ಪಿದರೆ ಕೇಳಿ. It's a Government Order. ನಾನು ನನ್ನ ಆದೇಶವನ್ನು ಓದುತ್ತಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–** ಬ್ರಿಟೀಷರ ಕಾಲದಲ್ಲಿ ರೈತರಿಗೆ ಕೊಟ್ಟಿರುವಂತಹ ರಿಡಿುತುಟಜರಜ ಅದು.

ಶ್ರೀ ಆರ್.ಅಶೋಕ:– ಮಾನ್ಯ ಸಭಾಪತಿಗಳೆ, privilege ಕೊಟ್ಟಿದ್ದಾರೆ. ಮಾರಿ ಎಂದು ಕೊಟ್ಟಿರುವುದಿಲ್ಲ.

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:–**ಮಾರಿ ಎನ್ನುವುದು ಇಲ್ಲಿ ಬರುವುದಿಲ್ಲ. Privilege ಕೊಟ್ಟಿರುವುದು.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಗಳೆ, ಅವರಿಗೆ privilege ಕೊಟ್ಟಿರುವುದು ಏತಕ್ಕೆ ಎಂದರೆ, ಗೊಬ್ಬರಕ್ಕೆ ಹಸಿರು ಎಲ್ಲಿ, ದನ–ಕರುಗಳಿಗೆ ಮೇವು ಬೆಳೆಯಲು ಕೊಟ್ಟಿರುವುದು. ಅದನ್ನು ರೈತರಿಗೆ ಕೊಡಬೇಕು ಎನ್ನುವ ಯೋಚನೆಯಲ್ಲಿ ಸರ್ಕಾರ ಇದೆ. ಸುಮಾರು 60–70 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದಾರೆ. ಇದು ಸರ್ಕಾರಿ ಜಮೀನು ಆಗಿರುವುದರಿಂದ ಶಾಲೆಗಳ ಕಟ್ಟಡಕ್ಕೂ ಕೂಡಾ ಮಂಜೂರು ಮಾಡಲು ಬರುವುದಿಲ್ಲ. ಸರ್ಕಾರದವರು ಅದು ಸರ್ಕಾರಿ ಆಸ್ತಿ ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ, ಉಳುಮೆ ಮಾಡುವವರು ಅದು ನಮ್ಮ ಆಸ್ತಿ ಎಂದು ಹೇಳುತ್ತಾರೆ. ಈ ಕೇಸ್ ಈಗಾಗಲೇ ಸುಪ್ರೀಮ್ ಕೋರ್ಟ್ ಮೆಟ್ಟಿಲನ್ನು ಹತ್ತಿದೆ. ಅದಕ್ಕಾಗಿ ಇದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಕನಿಷ್ಠ ರೈತರಿಗೆ 10 ಎಕರೆ 20 ಎಕರೆಯನ್ನಾದರೂ ಕೊಡಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ. ಚಿಕ್ಕಮಗಳೂರು ಕಡೆಗೆ 100- 200 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಒಬ್ಬ ಸಣ್ಣ ರೈತನಿಗೆ ಎಷ್ಟು ಕೊಡಬಹುದು ಅಷ್ಟು ಕೊಟ್ಟು ಅದಕ್ಕೆ ಒಂದು ಬೆಲೆಯನ್ನು ನಿಗದಿ ಮಾಡಿ ಅವರಿಗೆ ಕೊಟ್ಟರೆ ಶಾಶ್ವತವಾಗಿ ಪರಿಹಾರವಾಗುತ್ತದೆ. ಉಳಿದ ಜಮೀನಾದರೂ ಸರ್ಕಾರಕ್ಕೆ ಬರುತ್ತದೆ. ಇಲ್ಲದಿದ್ದರೆ ಸರ್ಕಾರಕ್ಕೂ ಸಿಗುವುದಿಲ್ಲ, ರೈತರಿಗೂ ಸಿಗುವುದಿಲ್ಲ ಹಾಗೆ ಅಡ್ಡಗೋಡೆ ಮೇಲೆ ದೀಪ ಇಟ್ಟಹಾಗೆ ಆಗುತ್ತದೆ. ಅದಕ್ಕಾಗಿ ಸಮಿತಿ ರಚನೆ ಮಾಡಲಾಗುತ್ತಿದೆ. ಅದರಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲಾಗುತ್ತದೆ.

**ಸಭಾಪತಿಯವರು:-** ನಿಮ್ಮ ಕೊನೆಯ ಉಪ ಪ್ರಶ್ನೆಯನ್ನು ಕೇಳಿ.

**ಶ್ರೀಮತಿ ಎನ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಅದು ಸರ್ಕಾರದ ಜಾಗ ಎಂದು ಹೇಳುತ್ತಾರೆ. ಕೊಡಗಿನವರಿಗೆ ಯಾವುದೆ ಸರ್ಕಾರದ ಜಮೀನಿನ ಅವಶ್ಯಕತೆ ಇಲ್ಲ. ನಾವು ಪುರಾತನ ಕಾಲದಿಂದಲೂ ಬೇಸಾಯ ಮಾಡಿಕೊಂಡು ಬಂದಿರುವಂತಹ ಜಾಗ. ಅದು ಖಂಡಿತವಾಗಿ ಸರ್ಕಾರದ ಜಾಗವಲ್ಲ. ಅದು ನಮ್ಮ ಜನ್ಮಸಿದ್ಧ ಹಕ್ಕು. ದಯಮಾಡಿ ಮಂತ್ರಿಗಳು ಸರ್ಕಾರ ಕೊಟ್ಟಿದ್ದು ಎಂದು ಹೇಳುವುದು ಬೇಡ. ಖಂಡಿತವಾಗಿಯು ಯಾರ ದಾನದ ಅವಶ್ಯಕತೆ ಕೊಡಗಿನವರಿಗೆ ಇಲ್ಲ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ.

**ಶ್ರೀ ಆರ್.ಅಶೋಕ:-** ಮಾನ್ಯ ಸಭಾಪತಿಗಳೆ, ಅವರ ಮನವಿಯನ್ನು ಗಮನದಲ್ಲಿಟ್ಟುಕೊಂಡು ಕಾನೂನಾತ್ಮಕವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:-** ಮುಂದಿನ ಪ್ರಶ್ನೆ ಶ್ರೀ ಸುನೀಲ್ ವಲ್ಯಾಪುರ್‌ರವರದು. ದಯಮಾಡಿ ಸದಸ್ಯರು ತಮ್ಮ ಪ್ರಶ್ನೆ ಬರುವ ಸಮಯದಲ್ಲಿ ಸದನದಲ್ಲಿ ಹಾಜರಿರಬೇಕು. ತಮಗೆ ಇದೊಂದು ಸಾರಿ ಅವಕಾಶ ಕೊಡುತ್ತೇನೆ. ಮತ್ತೆ ಈ ರೀತಿ ಅವಕಾಶ ಕೊಡುವುದಿಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 1017**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, thank you. ರಾಜ್ಯದ ಜಿಲ್ಲಾವರು ಸಂಪೂರ್ಣ ಮಾಹಿತಿಯನ್ನು ಉತ್ತರದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಕೇಂದ್ರ ಸರ್ಕಾರದ ಅನುದಾನವೆಷ್ಟು, ರಾಜ್ಯ ಸರ್ಕಾರದ ಅನುದಾನವೆಷ್ಟು ಮತ್ತು ಫಲಾನುಭವಿಗಳ ಅನುದಾನವೆಷ್ಟು ಎನ್ನುವುದನ್ನು ವಿವರವಾಗಿ ತಿಳಿಸಿರುವುದಿಲ್ಲ. ಒಟ್ಟಾರೆ ಅನುದಾನ ಎಷ್ಟು ಎನ್ನುವುದನ್ನು ತಿಳಿಸಿದ್ದಾರೆ. ಇದರಲ್ಲಿ ಎಷ್ಟು ಖರ್ಚಾಗುತ್ತಿದೆ ಎನ್ನುವ ಪ್ರಶ್ನೆಗೆ, ಕೇಂದ್ರ ಸರ್ಕಾರದ ಹಣ ಪೂರ್ತಿ ಖರ್ಚಾಗುತ್ತಿದೆ, ರಾಜ್ಯಸರ್ಕಾರದಿಂದಲೂ ಸಚಿವರಾದ ಶ್ರೀ ಸೋಮಣ್ಣನವರು ಕಾಳಜಿವಹಿಸಿ, ಮುತರ್ವಜಿ ವಹಿಸಿ ಹಣವನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಫಲಾನುಭವಿಗಳು ಅನುದಾನವನ್ನು ಕೊಡಬೇಕು, ಬಿ.ಪಿ.ಎಲ್., ಕಾರ್ಡ್ ಇರುವವರಿಗೆ ಮನೆಗಳನ್ನು ಕೊಡುತ್ತಿದ್ದಾರೆ. ಬಿ.ಪಿ.ಎಲ್., ಕಾರ್ಡ್ ಹೊಂದಿವರಿಗೆ ತಮ್ಮ ಪಾಲಿನ ಅನುದಾನವನ್ನು ಕಟ್ಟಲು ಆಗುತ್ತಿಲ್ಲ, ಆದ್ದರಿಂದ ಫಲಾನುಭವಿಗಳ ಪಾಲಿನ ಭಿಂಟಣಡುಭಣಣುಂಟಿ ಹಣವನ್ನು ಸರ್ಕಾರವೇ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಗಳೆ, ಅಭಿವೃದ್ಧಿಗೆ ಎಷ್ಟು ಹಣ ಖರ್ಚಾಗಿದೆ ಎಂದು ಮಾನ್ಯ ಸುನೀಲ್ ವಲ್ಯಾಪುರ್‌ರವರು ಕೇಳಿದ್ದಾರೆ. ಇದರಲ್ಲಿ ಫಲಾನುಭವಿಗಳ contribution ಬರುವುದಿಲ್ಲ. Basic amenities ಏನೇನು ಕೊಡಬಹುದು ಎನ್ನುವುದನ್ನು ಮಾತ್ರ ಅವರು ಕೇಳಿದ್ದಾರೆ. ಅವರು ಹೇಳುತ್ತಿರುವ ಮಾತು ಕೂಡಾ ಸಮಂಜಸವಾಗಿದೆ. ನಾನು ಈಗಾಗಲೇ ಲೀಡ್ ಬ್ಯಾಂಕ್‌ಗಳನ್ನು ಕರೆದು ಮೀಟಿಂಗ್ ಮಾಡಿದ್ದೇವೆ. ಇದರ ಅಧ್ಯಕ್ಷತೆಯನ್ನು ಮಾನ್ಯ ಮುಖ್ಯಮಂತ್ರಿಗಳೆ ವಹಿಸಿಕೊಂಡು ಮಾತನಾಡಿದ್ದಾರೆ. ಕೇಂದ್ರ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಅನುದಾನದ ಜೊತೆಗೆ ಫಲಾನುಭವಿಗಳ ಅನುದಾನವನ್ನು ಸರ್ಕಾರ ಕಟ್ಟಲು ಬರುವುದಿಲ್ಲ. ಅವರಿಗೆ 3 ಅಥವಾ 4% ರಲ್ಲಿ ಟಂಚಿಟಿನ್ನು ಕೊಡಿಸಿ ಮನೆಗಳನ್ನು ಕಟ್ಟಿ ಮುಗಿಸಲು ಒಂದು ಅಂತಿಮ ರೂಪಕ್ಕೆ ತಂದಿದ್ದೇವೆ. ಇನ್ನು 15-20 ದಿನಗಳಲ್ಲಿ ಒಂದು ಹಂತಕ್ಕ ಬರುತ್ತದೆ. ಇದು ಸುಮಾರು ವರ್ಷಗಳಿಂದ ಗೊಂದಲದಲ್ಲಿ ಇರುವುದರಿಂದ, ಆ ಸಮಸ್ಯೆಯನ್ನು ಬಗೆಹರಿಸುವ ಪ್ರಯತ್ನವನ್ನು ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ತಡೆಹಿಡಿಯಲಾದ ಪ್ರಶ್ನೆ

**ಸಂಖ್ಯೆ: 756**

**(ಉತ್ತರವನ್ನು ಲಗತ್ತಿಸಲಾಗಿದೆ)**

ಶ್ರೀ **ಎಂ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಅಕಾಲ್ಲಿಕ ಆಲಿಕಲ್ಲು ಮಳೆಯಿಂದ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಬೆಳೆಗಳು ನಾಶವಾಗಿ ರೈತ ಸಂಕಷ್ಟದಲ್ಲಿದ್ದಾನೆ, ಅಧಿಕಾರಿಗಳು ತಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಕಾಫಿ ಬೆಳೆಗೂ ಅನ್ಯಾಯವಾಗುತ್ತಿದೆ. ಅಲ್ಲಿ ಬೀಜಗಳು ಸಾಲಕ್ಕೆ ಸಿಗುತ್ತಿಲ್ಲ. ಹಿಂದಿನ ಸಾರಿ ನಾನು ಇದರ ಬಗ್ಗೆ ಕೇಳಿದ್ದೆನು. ಆಗ ಕೃಷಿ ಸಚಿವರು ಇದಕ್ಕೆ ಕಂದಾಯ ಸಚಿವರು ಬಂದು ಉತ್ತರ ಕೊಡುತ್ತಾರೆ ಎಂದು ಹೇಳಿದ್ದರು. ಮಾನ್ಯ ಕಂದಾಯ ಸಚಿವರು ಉತ್ತರವನ್ನು ನೀಡಬೇಕೆಂದು ಬಯಸುತ್ತೇನೆ.

**ಶ್ರೀ ಆರ್.ಅಶೋಕ:–** ಮಾನ್ಯ ಸಭಾಪತಿಗಳೆ, ಅಕಾಲಿಕ ಆಲಿಕಲ್ಲು ಮಳೆಯಿಂದ ಹಾಸನ ಜಿಲ್ಲೆಯಲ್ಲಿ ನೂರಾರು ಎಕರೆ ಕೃಷಿ ಭೂಮಿ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಜಂಟಿ ಸಮೀಕ್ಷಾ ವರದಿ ಅನುಸರಿಸಿ 33% ಗಿಂತ ಹೆಚ್ಚು ಬೆಳೆ ನಾಶವಾಗಿದ್ದರೆ ಮಾತ್ರ ಓಆಖಈ ಚಿಟಿಜ ಖಆಖಈ ಮುಖಾಂತರ ಗನಿಷ್ಠ ಎರಡು ಹೆಕ್ಟೇರ್‌ಗೆ ಕೊಡುವಂತಹ ಅವಕಾಶ ನಮ್ಮಲ್ಲಿ ಇದೆ. ಮಳೆಯಾಶ್ರಿತ ಬೆಳೆಗೆ 6800 ರೂ.ಗಳನ್ನು, ನೀರಾವರಿ ಬೆಳೆಗೆ 13500 ರೂ.ಗಳನ್ನು ಮತ್ತು ಬಹುವಾರ್ಷಿಕ ಬೆಳೆಗೆ 18000 ರೂ.ಗಳನ್ನು ಕೊಡುವಂತಹ ವ್ಯವಸ್ಥೆ ಇದೆ. ಅಕಾಲಿಕ ಆಲಿಕಲ್ಲು ಮಳೆಯಿಂದ ಬೆಳೆ ಹಾನಿ 33% ಗಿಂತ ಹೆಚ್ಚಾಗಿದ್ದರೆ ಇನ್‌ಪುಟ್ ಸಬ್ಸಿಡಿ ಪಾವತಿ ಮಾಡಲಾಗುವುದು.

(ಮುಂದು)

**(356)10–03–2021(11–40)ಬಿಎಸ್‌ಡಿ–ಜಿಆರ್**

**ಶ್ರೀ ಆರ್. ಅಶೋಕ್ (ಮುಂದು)**

ಹಾಸನ ಜಿಲ್ಲೆಯಲ್ಲಿ ನಡೆಸಿರುವ ಜಂಟಿ ಸಮೀಕ್ಷೆಯ ಪ್ರಕಾರ 148.86 ಹೆಕ್ಟೇರ್‌ನ ವಿವಿಧ ಬೆಳೆಗಳಿಗೆ ಹಾನಿಯಾಗಿದ್ದು, ತಂತ್ರಾಂಶದ ಮೂಲಕ 327 ರೈತರ ಬ್ಯಾಂಕ್ ಖಾತೆಗಳಿಗೆ ಸುಮಾರು ರೂ.20.74 ಲಕ್ಷ ಽಟಿಠಿಣ, ಖಭುಜಥಿ ಯನ್ನು ಜಮಾ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಎ. ಗೋಪಾಲಸ್ವಾಮಿಃ–** ಮಾನ್ಯ ಸಭಾಪತಿಯವರೇ, subsidy ಕೊಡುವುದು ಒಂದು ಕಡೆಯಾದರೆ, ಬೆಲೆ ಹೆಚ್ಚು ಮಾಡುವ ಬಗ್ಗೆ ಗಮನಹರಿಸಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ. ರೂ.6,800 ಮತ್ತು ರೂ.13,500 ಗಳ ಬಗ್ಗೆ ಸರ್ಕಾರವು ಗಮನಹರಿಸಬೇಕು.

**ಶ್ರೀ ಆರ್. ಅಶೋಕ್ಃ–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಈಗಾಗಲೇ NDRF and SDRF ನಲ್ಲಿ ಬಹಳ ಕಡಿಮೆ ಹಣ ಕೊಡುತ್ತಿದ್ದು, ರೂ.1 ಕೋಟಿ ರಸ್ತೆ repair ಗೆ ಖರ್ಚಾಗಿದ್ದರೆ ರೂ.60 ಲಕ್ಷ ಕೊಡುತ್ತೇವೆ. ಇದರ ನಾಲ್ಕು ಪಟ್ಟು ಜಾಸ್ತಿ ಮಾಡಬೇಕೆಂದು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಕೇಂದ್ರ ಸರ್ಕಾರವು ಇದಕ್ಕೆ ಒಪ್ಪಿಕೊಂಡಿದೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಸಲಹೆಯಂತೆ ಮಾಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, NDRF and SDRF norms ಪ್ರಕಾರ fixed rates ಇದ್ದು, ಅದನ್ನು ನಾಲ್ಕು ಪಟ್ಟು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. But, in the meantime, ಅದು ಆಗಿ ಬರಬೇಕಾದರೆ ಕತೆಯೇ ಮುಗಿದುಹೋಯಿತು. ರಾಜ್ಯದ ಬೊಕ್ಕಸದಿಂದ ಸ್ವಲ್ಪ increase ಮಾಡಿ ಕೊಡಲಿ, ರೈತರು ಬಹಳ ಕಷ್ಟದಲ್ಲಿದ್ದಾರೆ. ರೈತರ ಪರಿಸ್ಥಿತಿ ಸರಿಯಿಲ್ಲ.

**ಶ್ರೀ ಆರ್. ಅಶೋಕ್:––** ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದ್ದು, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಬಹಳ ಆತ್ಮೀಯತೆಯಿಂದ ಇದ್ದಾರೆ. ಇದರ ಬಗ್ಗೆ ಅವರೇ ಒಂದು ಸಾರಿ ಮಾತನಾಡಬೇಕು. ಈಗಾಗಲೇ ಮನೆ ಕಟ್ಟುವುದಕ್ಕೆ ರೂ.95 ಸಾವಿರ ಕೊಟ್ಟರೆ ನಾವು ರೂ.5 ಲಕ್ಷ ಕೊಡುತ್ತಿದ್ದೇವೆ. ಕಳೆದ ಬಾರಿ ತರಕಾರಿ ಮತ್ತು ಹೂ ಬೆಳೆ ಹಾನಿಯಾದ ಸಂದರ್ಭದಲ್ಲಿ NDRF ನವರು ಕೊಟ್ಟಿದ್ದಕ್ಕಿಂತ ಮೂರು ಪಟ್ಟು ಜಾಸ್ತಿ ಕೊಟ್ಟಿದ್ದೇವೆ. ವಿಶೇಷ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್ಃ–** ಆಲಿಕಲ್ಲಿನ ಹಾನಿಗೆ ಅದೇ norms adopt ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ.

**ಶ್ರೀ ಆರ್. ಅಶೋಕ್ಃ–** ನಾನು ಕೊಡಗು ಇತ್ಯಾದಿ ಕಡೆ ಹೋಗಿ ಬಂದಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, NDRF and SDRF norms ಕ್ಕಿಂತ ಹಿಂದಿನ ವರ್ಷದಲ್ಲಿ ಆದ flood ಅಥವಾ ಅತಿವೃಷ್ಟಿಯಲ್ಲಿ ಹಾನಿಯಾದವರಿಗೆ ಕೊಟ್ಟಂತೆ ಆಲಿಕಲ್ಲಿನಿಂದ ಹಾನಿಯಾದವರಿಗೂ ಅನ್ವಯಿಸಿದರೆ ರೈತರಿಗೆ ಸಹಾಯವಾಗುತ್ತದೆ. ಮಾನ್ಯ ಸದಸ್ಯರು ನಿನ್ನೆಯಿಂದ ಇದರ ಬಗ್ಗೆ ಪ್ರಸ್ತಾಪಿಸಲು ಪ್ರಯತ್ನಿಸಿದ್ದು, ಇವತ್ತು ಮಾನ್ಯ ಕಂದಾಯ ಸಚಿವರು ಸದನದಲ್ಲಿ ಉತ್ತರವನ್ನು ಹೇಳುತ್ತಿದ್ದಾರೆ. ಕೊನೆ ಪಕ್ಷ ಪ್ರಶ್ನೆ ಮುಂದೆ ಹೋಗಿದ್ದಕ್ಕೆ, ಮಾನ್ಯ ಸಚಿವರು NDRF and SDRF norms ಅನ್ನು ಮೀರಿ adopt ಮಾಡಿದರು. ಅದನ್ನು ಆಲೀಕಲ್ಲು damage ಗೆ apply ಮಾಡಲಿ ಎಂದು ಅವರ ಪರವಾಗಿ ಮನವಿ ಮಾಡುತ್ತೇನೆ.

**ಶ್ರೀ ಆರ್. ಅಶೋಕ್:-** ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಜೊತೆ ಚರ್ಚೆ ಮಾಡುತ್ತೇನೆ. ಈಗಾಗಲೇ ಹಿಂದಿನ ಹಾಗೂ ಕಳೆದ ವರ್ಷಗಳಲ್ಲಿ ದೊಡ್ಡ flood ಸಂದರ್ಭದಲ್ಲಿ NDRF ಗಿಂತ ನಾಲ್ಕು ಪಟ್ಟು ಜಾಸ್ತಿ ಕೊಟ್ಟಿದ್ದೇವೆ. ಆಲಿಕಲ್ಲಿನ ಹಾನಿಯನ್ನು ನಾನು ನೋಡಿದ್ದು, ಒಂದು ಸಾರಿ ಆಲಿಕಲ್ಲು ಬಿದ್ದರೆ ಹಣ್ಣುಗಳು ಕೊಳೆತು ಹೋಗುತ್ತವೆ. ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 10ನೇ ಮಾರ್ಚ್ 2021ರ ಸಮೂಹ 3ರಲ್ಲಿ ಲಿಖಿತವಾಗಿ ಉತ್ತರಿಸುವ ಒಟ್ಟು 105 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರುಃ–** ಮಂಡಿಸಲಾಯಿತು.

**(ಉತ್ತರದ ಪ್ರತಿಗಳನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ Breach of Privilege Notice ಅನ್ನು ಕೊಟ್ಟಿದ್ದು, ಅದರ ಬಗ್ಗೆ ಏನಾಯಿತೆಂದು ತಾವು ಹೇಳಲಿಲ್ಲ.

**ಸಭಾಪತಿಯವರು:–** ಹೇಳುತ್ತೇನೆ. ಅದನ್ನು put up ಮಾಡಿಸಿದ್ದೇನೆ, ಬರುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ಇವತ್ತು ಬರುತ್ತದೆಯೇ ಅಥವಾ ನಾಳೆ ಬರುತ್ತದೆಯೇ?

**ಸಭಾಪತಿಯವರು:–** ಸೋಮವಾರ ಬರುತ್ತದೆ, ಒಂದು ದಿವಸ ಹೆಚ್ಚು ಕಡಿಮೆ ಬರುತ್ತದೆ.

**ಶ್ರೀ ಸಿ.ಎಂ. ಇಬ್ರಾಹಿಂ:–** ನನ್ನ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಆಯಿತು.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ)ವಿಷಯ:– ಉಡುಪಿ ಜಿಲ್ಲೆಯ ನಾಗರಿಕರಿಗೆ ದುಷ್ಪರಿಣಾಮ ಬೀರುತ್ತಿರುವ ಉಷ್ಣ ವಿದ್ಯುತ್ ಸ್ಥಾವರ ಕುರಿತು.**

– –

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, " ಉಡುಪಿ ಜಿಲ್ಲೆಯ ಪಡುಬಿದ್ರಿಯಲ್ಲಿ ಇರುವ 2 ಥ 600 ಮೆಗಾವಾಟ್ ಸಾಮರ್ಥ್ಯದ ಯುಪಿಸಿಎಲ್ ಉಷ್ಣ ವಿದ್ಯುತ್ ಸ್ಥಾವರದ ಮಾಲಿನ್ಯದ ಕಾರಣದಿಂದ ಆ ಕಾರ್ಖಾನೆಯ 10 ಕಿಲೋಮೀಟರ್ ಸುತ್ತುವ್ಯಾಪ್ತಿಯಲ್ಲಿ ಇರುವ 15 ಗ್ರಾಮಗಳಲ್ಲಿ ಕಾರ್ಖಾನೆಯ ಮಾಲಿನ್ಯದ ಕಾರಣದಿಂದಾಗಿ ಕಳೆದ 2012ರಿಂದ 2020ರ ನಡುವೆ ಅಸ್ತಮಾ ಪ್ರಕರಣಗಳಲ್ಲಿ 17% ಶ್ವಾಸಕೋಶದ ಸೋಂಕುಗಳಲ್ಲಿ 171% ಮತ್ತು ಕ್ಯಾನ್ಸರ್ ರೋಗಗಳಲ್ಲಿ 292% ಏರಿಕೆ ಆಗಿದೆ ಎಂದು ಕೇಂದ್ರೀಯ ಪರಿಸರ ಟ್ರಿಬ್ಯುನಲ್ (ಎನ್‌ಜಿಟಿ) ರಚಿಸಿದ ತಜ್ಞರ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಈ ವರದಿಯನ್ನು 2–3–2021ಕ್ಕೆ ಎನ್‌ಜಿಟಿಗೆ ಸಲ್ಲಿಸಿದೆ. ಈ ಕಾರಣಕ್ಕಾಗಿ 'ಪೊಲ್ಯೂಟರ್ ಪೇಸ್ ಪ್ರಿನ್ಸಿಪಲ್' ಅಡಿಯಲ್ಲಿ ಸಮಿತಿಯು ಕಾರ್ಖಾನೆಗೆ ಹಿಂದಿನ ದಂಡಕ್ಕೆ ಹೆಚ್ಚುವರಿಯಾಗಿ ರೂ70 ಕೋಟಿ, ರೂ. 4 ಲಕ್ಷ, ರೂ.10,828 ಗಳ ದಂಡ ವಿಧಿಸಲು ಶಿಫಾರಸ್ಸು ಮಾಡಿದೆ. ಇದೇ ಸಮಿತಿ ಈ ವರದಿಯಲ್ಲಿ ಈ ಆರೋಗ್ಯ ಮಾಹಿತಿ ಕೇವಲ ಆ ಪ್ರದೇಶದ ಸರ್ಕಾರಿ ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದವರ ಮಾಹಿತಿ ಆಧರಿಸಿದೆ. ಇದರಲ್ಲಿ ಖಾಸಗಿ ಆಸ್ಪತ್ರೆಗಳ ಮಾಹಿತಿ ಒಳಗೊಂಡಿಲ್ಲ ಎಂದು ಹೇಳಲಾಗಿದೆ. ಇದು ಬಾರೀ ಕಳವಳಕಾರಿ ವಿಚಾರವಾಗಿದೆ. ಯಾಕೆಂದರೆ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ಮಂಗಳೂರು ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಖಾಸಗಿ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದಿರುವವರ ಲೆಕ್ಕಾಚಾರಗಳನ್ನು ಈ ವರದಿ ಒಳಗೊಂಡಿಲ್ಲ. ಕಳೆದ ಹಲವು ವರ್ಷಗಳಿಂದ ಈ ಪ್ರದೇಶದಲ್ಲಿ ಶ್ವಾಸಕೋಶ, ಅಲರ್ಜಿ, ಚರ್ಮ ಸಂಬಂಧಿ ರೋಗಗಳು ಬಾರೀ ಪ್ರಮಾಣದಲ್ಲಿ ಹೆಚ್ಚಿರುವ ಬಗ್ಗೆ ಆಗಾಗ ನಾವು ಕೇಳುತ್ತಿರುತ್ತೇವೆ. ಈಗ ತಜ್ಞರ ಸಮಿತಿ ಸಲ್ಲಿಸಿರುವ ವರದಿಯಲ್ಲಿ ಅಲರ್ಜಿ–ಚರ್ಮ ಸಂಬಂಧಿ ರೋಗಗಳ ಪ್ರಸ್ತಾಪ ಇಲ್ಲ. ಉಡುಪಿ–ಮಣಿಪಾಲ–ಬ್ರಹ್ಮಾವರದ ತನಕವೂ ಈ ಕಾರ್ಖಾನೆಯ ಲವಣ ಮಾಲಿನ್ಯ ಹರಡಿದ ಬಗ್ಗೆ ಹಾರು ಬೂದಿ ಉದುರಿರುವ ಬಗ್ಗೆ ಪತ್ರಿಕೆಗಳು ವರದಿ ಮಾಡಿದ್ದಿವೆ. ಹಾಗಾಗಿ ವಾಸ್ತವ ಅಂಕಿಸಂಖ್ಯೆಗಳು ಈಗ ಪರಿಣಿತ ಸಮಿತಿ ಹೇಳಿದ್ದಕ್ಕಿಂತಲೂ ಬಹಳ ಹೆಚ್ಚಿರಬಹುದು ಈ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಶ್ವಾಸಕೋಶ, ಚರ್ಮ ರೋಗಗಳು, ಕ್ಯಾನ್ಸರ್‌ಗಳು ಮತ್ತು ಅಲರ್ಜಿ ರೋಗಗಳಲ್ಲಿ ಆಗಿರುವ ಹೆಚ್ಚಳವನ್ನು ತಕ್ಷಣ ಸಮಗ್ರವಾಗಿ ಪರಿಶೀಲಿಸಬೇಕು ಮತ್ತು ಅದಕ್ಕೆ ಹೊಣೆಗಾರ ಆಗಿರುವ ಕಂಪನಿಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಂಪನಿ ಸಮುದ್ರಕ್ಕೆ ನೀರು ಬಿಡುವ ಪೈಪ್ ಲೈನ್ ತಿಂಗಳುಗಳಿಂದ ಕಳಚಿ ಬಿದ್ದು, ಮಲಿನ ನೀರು ಸೋರಿಕೆ ಆಗುತ್ತಿರುವ ಬಗ್ಗೆ ಕಳೆದ ವಾರ ಹಲವು ಪತ್ರಿಕೆಗಳಲ್ಲಿ ವರದಿ ಆಗಿದೆ. ಆದರೂ ತಜ್ಞರ ವರದಿ ಎಲ್ಲವೂ ಸಮರ್ಪಕ ಆಗಿದೆ ಎಂದು ತನ್ನ ವರದಿಯಲ್ಲಿ ಹೇಳಿದೆ. ಈ ಕಂಪನಿಯ ಮಾಲಿನ್ಯ ನಿಯಂತ್ರಣದ ಹೊಣೆ ರಾಜ್ಯದ ಮಾಲಿನ್ಯ ನಿಯಂತ್ರಣ ಮಂಡಳಿಯದ್ದು. ಅದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬುದು ಇದರಿಂದ ಸಾಭೀತಾಗಿದೆ. ಈ ಕಂಪನಿ ಈ ಹಂತದಲ್ಲೇ ಇಷ್ಟೊಂದು ಮಾಲಿನ್ಯ ಉಂಟು ಮಾಡುತ್ತಿರುವುದರಿಂದ ಇದೆಲ್ಲ ಸರಿಯಾಗುವ ತನಕ ಕಂಪನಿ ಕಾರ್ಯನಿರ್ವಹಣೆಯನ್ನು ಸ್ಥಗಿತಗೊಳಿಸಬೇಕು. ಅದಕ್ಕೆ ಇನ್ನಷ್ಟು ವಿಸ್ತರಣೆಗೆ ಯಾವುದೇ ಕಾರಣಕ್ಕೆ ಅವಕಾಶ ಕೊಡಬಾರದು ಎಂದು ಈ ಸದನದ ಮೂಲಕ ಸರಕಾರದ ಗಮನ ಸೆಳೆಯಲು ಬಯಸುತ್ತೇನೆ."

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ ಹಿರಿಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸುತ್ತೇನೆ.

**ಆ)ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ ವಿಭಾಗದಿಂದ 37 ಲಕ್ಷ ನಷ್ಟಾಗಿರುವ ಕುರಿತು ಲೆಕ್ಕಪರಿಶೋಧಕರು ವರದಿ ಮಾಡಿರುವ ಬಗ್ಗೆ.**

---

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಘನ ತ್ಯಾಜ್ಯ ನಿರ್ವಹಣೆ ವಿಭಾಗದ ಆಡಿಟ್ ನಡೆಸಿರುವ ಭಾರತೀಯ ಲೆಕ್ಕಪರಿಶೋಧನಾ ಇಲಾಖೆಯು ಹಲವಾರು ಹುಳುಕುಗಳನ್ನು ಎತ್ತಿಹಿಡಿದಿದ್ದು, 2016 ರಿಂದ 2019ರ ಸಮಯದಲ್ಲಿ ಕಸಗುಡಿಸುವ ಯಂತ್ರಗಳು, ಬಯೋಮೆಟ್ರಿಕ್ ಸಾಧನಗಳ ಖರೀಧಿ, ಬಯೋಮೆಥನೈಸೇಶನ್ ಘಟಕಗಳ ಸ್ಥಾಪನೆ ಈ ವಿಚಾರಗಳಲ್ಲಿ ನಿಯಮಗಳನ್ನು ಗಾಳಿಗೆ ತೂರಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದ್ದು, ಕೇವಲ 750 ಅವಳಿ ಕಸದ ತೊಟ್ಟಿಗಳನ್ನು ಖರೀದಿಸಲು ಸರಕಾರ ಆದೇಶಿಸಿದ್ದರೂ, ಪ್ರದೇಶದ ಅವಶ್ಯಕತೆ ಮತ್ತು ಸ್ಥಳ ಗುರುತಿಸದೇ ಬಿಬಿಎಂಪಿ ಹೆಚ್ಚುವರಿ 1482 ಅವಳಿ ಕಸದ ತೊಟ್ಟಿಗಳನ್ನು ಖರೀದಿಸಿರುವುದರಿಂದ ಬೊಕ್ಕಸಕ್ಕೆ ರೂ.2.20 ಕೋಟಿಗಳು ಹೊರೆಯಾಗಿರುವುದನ್ನು ವರದಿಯಲ್ಲಿ ತಿಳಿಸಿರುತ್ತದೆ. ತಲಾ ರೂ.2,000 ನಂತೆ ಅವಳಿ ಕಸದ ತೊಟ್ಟಿ ಸರಬರಾಜಿಗೆ ಕಂಪನಿಯೊಂದು ಪ್ರಸ್ತಾಪಿಸಿದ್ದರೂ, ಬಿಬಿಎಂಪಿ ಕೆಆರ್‌ಐಡಿಎಲ್ ಗೆ ಗುತ್ತಿಗೆ ನೀಡುವ ಮೂಲಕ ಪ್ರತಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಸದ ಬುಟ್ಟಿಗೆ ರೂ.700 ಗಳನ್ನು ಹೆಚ್ಚುವರಿಯಾಗಿ ಪಾವತಿಸುವ ಮೂಲಕ ರೂ.37.18 ಲಕ್ಷಗಳ ನಷ್ಟಕ್ಕೆ ಕಾರಣವಾಗಿರುತ್ತದೆ. ಈ ಎಲ್ಲ ಅಂಶಗಳನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆದಕಾರಣ, ರಾಜ್ಯದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ ಹಾಗೂ ನಿಯಮ ಮೀರಿ ಖರೀದಿಸಲು ಕಾರಣಕರ್ತರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ."

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸುತ್ತೇನೆ.

**ಇ)ವಿಷಯ: ಬೆಂಗಳೂರು ಮತ್ತು ನಗರ ಪ್ರದೇಶಗಳಲ್ಲಿ ಕನ್ನಡ ಭಾಷೆ ಬಳಕೆ ಕಡಿಮೆಯಾಗುತ್ತಿರುವ ಬಗ್ಗೆ.**

- - -

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, " ಇತ್ತೀಚೆಗೆ ಕನ್ನಡ ಪ್ರಭ ಪತ್ರಿಕೆಯಲ್ಲಿ ಪ್ರಕಟವಾದ ನಗರದಲ್ಲಿ ಶುದ್ಧ ಕನ್ನಡ ನಾಮಫಲಕ ಅಭಿಯಾನ ಎಂಬ ಶೀರ್ಷಿಕೆಯಡಿ, ರಾಜ್ಯದಲ್ಲಿ ಬೆಂಗಳೂರು ಸೇರಿದಂತೆ ಪ್ರಮುಖ ನಗರ ಪ್ರದೇಶಗಳಲ್ಲಿ ಇತ್ತೀಚೆಗೆ ಕನ್ನಡ ಭಾಷೆಯ ಬಳಕೆ ಕಡಿಮೆಯಾಗುತ್ತಿದ್ದು, ಈ ಬಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಫಲಕ ಅಳವಡಿಕೆಯ ಬಗ್ಗೆ ಅಭಿಯಾನ ಮತ್ತು ಜಾಗೃತಿಯನ್ನು ಆರಂಭಿಸಿರುತ್ತದೆ. ನಗರಗಳಲ್ಲಿನ ಗಲ್ಲಿಗಲ್ಲಿಗಳಲ್ಲಿ ಸಂಚರಿಸಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸುವ ಬಗ್ಗೆ ಹಾಗೂ ಎಲ್ಲಾ ವಾಣಿಜ್ಯ ಸಂಸ್ಥೆಯ ನಾಮಫಲಕಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬಳಸುವ ಸಂಬಂಧ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ರಥವು ನಗರಗಳಲ್ಲಿ ಸಂಚರಿಸಿ ಜಾಗೃತಿಯನ್ನು ಮೂಡಿಸುತ್ತಿದೆ.

ಕರ್ನಾಟಕದಲ್ಲಿ ಕನ್ನಡ ಭಾಷೆಯೇ ಸಾರ್ವಭೌಮ ಭಾಷೆಯಾಗಿದ್ದು, ಕನ್ನಡ ಭಾಷೆಯ ಬಳಕೆಯ ಬಗ್ಗೆ ಜಾಗೃತಿ ಮೂಡಿಸುವಂತಹ ದುಸ್ಥಿತಿಗೆ ತಲುಪಿರುವುದು ವಿಪರ್ಯಾಸವೇ ಸರಿ. ಆದ್ದರಿಂದ ರಾಜ್ಯ ಸರ್ಕಾರ ಈ ಬಗ್ಗೆ ಗಮನಹರಿಸಿ, ರಾಜ್ಯದ ಬೆಂಗಳೂರು ಸೇರಿದಂತೆ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಹೊಟೇಲ್, ಮಾಲ್, ಮಳಿಗೆಗಳು ಹಾಗೂ ಬ್ಯಾಂಕ್‌ಗಳು ಈ ಎಲ್ಲಾ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿ ವ್ಯವಹರಿಸುವ ಸಂಬಂಧ ಸೂಕ್ತ ಕಾನೂನು ತಂದು ಕ್ರಮ ಕೈಗೊಳ್ಳದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಪ್ರಮುಖವಾಗಿ ಬೆಂಗಳೂರು ನಗರದಲ್ಲಿ ಕನ್ನಡ ಭಾಷೆಯು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಶಿಸಿ ಹೋಗುವ ಆತಂಕವಿರುವುದರಿಂದ ಸರ್ಕಾರ ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ."

**(ಮುಂದು)**

**(357)/10.03.2021/11.50/ಹೆಚ್‌ವಿ:ಎಂಡಿ**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಮುಂದು):–**

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ಪ್ರಸ್ತಾಪಿಸಿರುವ ಕನ್ನಡ ಭಾಷೆ ಬಳಕೆಯ ಬಗ್ಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಸನ್ಮಾನ್ಯ ಸಭಾಪತಿಯವರೇ, 4ನೇ ತಾರೀಖಿನಂದು ಪ್ರಸ್ತಾಪಿಸಿರುವ ಶೂನ್ಯವೇಳೆಯ ಪ್ರಸ್ತಾಪಗಳಿಗೆ ಇಲ್ಲಿಯವರೆವಿಗೂ ಸರ್ಕಾರದಿಂದ ಉತ್ತರ ಬಂದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಉತ್ತರವನ್ನು ಒದಗಿಸಿ ಕೊಡಲಾಗುತ್ತದೆ.

**ಈ) ವಿಷಯ:– "ಥರ್ಮೋ ಎಲೆಕ್ಟ್ರಿಕ್" ತಂತ್ರಾಂಶವನ್ನು ಸರ್ಕಾರ ಅನುಷ್ಠಾನಗೊಳಿಸುವ ಬಗ್ಗೆ.**

– – –

**ಶ್ರೀಮತಿ ಭಾರತಿ ಶೆಟ್ಟಿ(ನಾಮ ನಿರ್ದೇಶಿತರು):–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿರುವ Jawaharlal Nehru Centre for Advanced Scientific Research (JNCASR) ನ ಪ್ರಾಧ್ಯಾಪಕ ಕಾನಿಷ್ಕ ವಿಶ್ವಾಸ ನೇತೃತ್ವದ ತಂಡವು ತ್ಯಾಜ್ಯ ಶಾಖವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಪರಿಸರ ಸ್ನೇಹಿ "ಥರ್ಮೋ ಎಲೆಕ್ಟ್ರಿಕಲ್" ತಂತ್ರಾಂಶ ಅಭಿವೃದ್ಧಿ ಪಡಿಸಿದೆ. ಲ್ಯಾಪ್‌ಟಾಪ್‌ನಿಂದ ಉತ್ಪತ್ತಿಯಾಗುವ ಶಾಖವನ್ನು ಮೊಬೈಲ್ ಫೋನ್ ಚಾರ್ಜ್ ಮಾಡಲು ಮೊಬೈಲ್‌ನಿಂದ ಉತ್ಪತ್ತಿಯಾಗುವ ಶಾಖವನ್ನು ಕೈಗಡಿಯಾರ ಚಾರ್ಜ್ ಮಾಡಲು ಬಳಸಬಹುದು. ರತನ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟಾಟಾ ಸ್ಟೀಲ್ ಸಂಸ್ಥೆ, ತಮ್ಮ ಉಕ್ಕಿನ ಘಟಕದಲ್ಲಿ ಉತ್ಪತ್ತಿಯಾಗುವ ಅಪಾರ ಪ್ರಮಾಣದ ತ್ಯಾಜ್ಯ ಶಾಖವನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸಲುವಾಗಿ ಈ ತಂತ್ರಾಂಶವನ್ನು ತನ್ನ ಘಟಕಗಳಲ್ಲಿ ಅಳವಡಿಸಿಕೊಳ್ಳಲು ಯೋಜನೆ ರೂಪಿಸಿದೆ.

ಅಂದರೆ, ಈ ಅವಿಷ್ಕಾರ ಪರಿಸರದಲ್ಲಿ ಉತ್ಪತ್ತಿಯಾಗುತ್ತಿರುವ ಅನಗತ್ಯ ಮಾನವ ನಿರ್ಮಿತ ಶಾಖವನ್ನು ನಿಯಂತ್ರಿಸಬಹುದು ಹಾಗೂ ಬರುವ ದಿನಗಳಲ್ಲಿ ಪರಿಸರ ರಕ್ಷಣೆಯಲ್ಲಿ ದೊಡ್ಡ ಪಾತ್ರ ವಹಿಸುತ್ತದೆ. ಈ ರೀತಿಯ ಸಂಶೋಧನೆ ಕೈಗೊಂಡ ಸಂಸ್ಥೆ ಹಾಗೂ ವಿಜ್ಞಾನಿಗಳ ತಂಡವನ್ನು ನಾನು ಅಭಿನಂದಿಸುತ್ತೇನೆ ಹಾಗೂ ಸದರಿ ತಂತ್ರಾಂಶವನ್ನು ಜನತೆಯ ತನಕ ತರಲು ಅಗತ್ಯ ಪ್ರೋತ್ಸಾಹವನ್ನು ಸರ್ಕಾರ ನೀಡಬೇಕೆಂದು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರು ಪ್ರಸ್ತಾಪಿಸಿರುವ ವಿಚಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುವುದು.

## 4. ಪ್ರಕಟಣೆ

**ಸಭಾಪತಿಯವರು:- ದಿನಾಂಕ:10.03.2021ರಂದು ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಮಾನ್ಯ ಸಚಿವರುಗಳ ಪಟ್ಟಿ;**

1. ಶ್ರೀ ಸಿ.ಸಿ.ಪಾಟೀಲ್ : ಸಣ್ಣ ಕೈಗಾರಿಕೆ ಮತ್ತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು
2. ಶ್ರೀ ಮುರಗೇಶ್ ರುದ್ರಪ್ಪ ನಿರಾಣಿ : ಗಣಿ ಮತ್ತು ಭೂವಿಜ್ಞಾನ ಸಚಿವರು
3. ಶ್ರೀ ನಾಗರಾಜ್ (ಎಂ.ಟಿ.ಬಿ.) : ಪೌರಾಡಳಿತ ಮತ್ತು ಸಕ್ಕರೆ ಸಚಿವರು
4. ಶ್ರೀ ಕೆ.ಗೋಪಾಲಯ್ಯ : ಅಬಕಾರಿ ಸಚಿವರು
5. ಶ್ರೀ ಸಿ.ಪಿ.ಯೋಗೇಶ್ವರ್ : ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

**ದಿನಾಂಕ:10.03.2021ರಂದು ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಅಧಿಕಾರಿಗಳ ಪಟ್ಟಿ;**

1. ಶ್ರೀ ಹೆಚ್. ಬಸವರಾಜೇಂದ್ರ : ಆಯುಕ್ತರು, ಪಶುಪಾಲನಾ ಮತ್ತು ಪಶು ವೈದ್ಯಸೇವೆ
2. ಶ್ರೀ ರವಿಕುಮಾರ್ ಸುರಪೂರ್ : ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ಶ್ರೀಮತಿ ರಶ್ಮಿ ಶ್ರೀಕಾಂತ್ : ಉಪ ಕಾರ್ಯದರ್ಶಿ
4. ಶ್ರೀಮತಿ ನಾಗವೇಣಿ : ಉಪ ಕಾರ್ಯದರ್ಶಿ

**ದಿನಾಂಕ:10.03.2021ರಂದು ಅಪರಾಹ್ನ ಸದನದಲ್ಲಿ ಕಡ್ಡಾಯವಾಗಿ ಉಪಸ್ಥಿತರಿರಬೇಕಾದ ಅಧಿಕಾರಿಗಳ ಪಟ್ಟಿ;**

1. ಶ್ರೀಮತಿ ಆರ್.ವಿನೋದ ಪ್ರಿಯ : ನಿರ್ದೇಶಕರು, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ
2. ಶ್ರೀ ಮೊಹಮದ್‌ಮೊಯಿಸಿನ್ : ಆಯುಕ್ತರು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆ
3. ಶ್ರೀ ಶಂಕರ್ : ಉಪ ಕಾರ್ಯದರ್ಶಿ
4. ಶ್ರೀ ಶಂಭು ಲಿಂಗಯ್ಯ : ಉಪ ಕಾರ್ಯದರ್ಶಿ

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಿದ ವಿಷಯಕ್ಕೆ ಎರಡು ದಿನಗಳಲ್ಲಿ ಸರ್ಕಾರ ಉತ್ತರ ನೀಡದಿರುವ ಬಗ್ಗೆ**

**ಶ್ರೀ ಪಿ.ಆರ್.ರಮೇಶ್(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಕೊಠಡಿಯಲ್ಲಿ ಸಭೆ ಕರೆದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಗಳಿಗೆ ಎರಡು ದಿನಗಳೊಳಗಾಗಿ ಉತ್ತರಗಳನ್ನು ನೀಡಬೇಕೆನ್ನುವುದರ ಬಗ್ಗೆ ಸರ್ಕಾರಕ್ಕೆ ಸೂಕ್ತ ನಿರ್ದೇಶನವನ್ನು ನೀಡಿದ್ದೀರಿ. ಹಿಂದಿನ ಮೂರು ಅಧಿವೇಶನಗಳಲ್ಲಿ ಪ್ರಸ್ತಾಪಿಸಿದ ಶೂನ್ಯವೇಳೆಯ ಪ್ರಸ್ತಾವಗಳಿಗೆ ಸರ್ಕಾರ ಇಲ್ಲಿಯವರೆವಿಗೂ ಉತ್ತರಗಳನ್ನು ನೀಡಿಲ್ಲ. ಮೊನ್ನೆ ಪ್ರಸ್ತಾವ ಮಾಡಿದ ಶೂನ್ಯವೇಳೆಗೆ ಇವತ್ತಿನವರೆವಿಗೂ ಸರ್ಕಾರದಿಂದ ಉತ್ತರ ಬಂದಿಲ್ಲ. ಈ ರೀತಿಯಾದರೆ, ನಾವು ಶೂನ್ಯವೇಳೆಯ ಪ್ರಸ್ತಾವಗಳನ್ನು ಏತಕ್ಕೋಸ್ಕರ ಮಾಡಬೇಕು? ತಮ್ಮ ಆದೇಶವನ್ನು ಪಾಲನೆ ಮಾಡುವುದಕ್ಕಾಗಿಯೇ ಈ ಸಭೆ ಇರುವುದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಅಧಿವೇಶನ ಪ್ರಾರಂಭವಾದ ಮೊದಲನೆಯ ದಿನವೇ ಶೂನ್ಯವೇಳೆಯ ಪ್ರಸ್ತಾವಗಳಿಗೆ ಎರಡು ದಿನಗಳೊಳಗಾಗಿ ಉತ್ತರವನ್ನು ಕೊಡಿಸಬೇಕೆಂದು ಹೇಳಿದ್ದೇನೆ, ಈ ರೀತಿಯಾದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ತರಿಸಿಕೊಂಡು ಮಂಡನೆ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರುಃ–** ಉತ್ತರ ಕೊಡಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ನಾನು ಪೀಠದಿಂದ ಏನು ನಿರ್ದೇಶನವನ್ನು ನೀಡಿದ್ದೇನೆ ಅದರಂತೆ ತಾವು ಉತ್ತರವನ್ನು ತರಿಸಿ ಕೊಡಬೇಕಾಗಿದೆ. ತಾವು ಸಭಾ ನಾಯಕರಾಗಿ ಉತ್ತರವನ್ನು ಕೊಡಿಸುತ್ತೇವೆಂದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಉತ್ತರವನ್ನು ತರಿಸುತ್ತಿದ್ದೇನೆ, ಕೊಡುತ್ತೇನೆ. ಮೊನ್ನೆ ಪ್ರಸ್ತಾಪ ಮಾಡಿದ ಶೂನ್ಯವೇಳೆಯ ಪ್ರಸ್ತಾವಗಳಿಗೆ ನಿನ್ನೆ ಉತ್ತರವನ್ನು ಕೊಟ್ಟಿದ್ದೇನೆ.

**ಸಭಾಪತಿಯವರುಃ–** ತಾವು ಸಭಾ ನಾಯಕರಾಗಿ 'ಉತ್ತರವನ್ನು ತರಿಸುತ್ತಿದ್ದೇನೆ' ಎಂದು ಹೇಳಿದರೆ ಹೇಗೆ? ಈಗ ನಾನು ಹೇಳುತ್ತಿದ್ದೇನೆ, ಶೂನ್ಯವೇಳೆಯ ಪ್ರಸ್ತಾವಗಳಿಗೆ ಗರಿಷ್ಠ ಮೂರು ದಿನಗಳೊಳಗಾಗಿ ಉತ್ತರವನ್ನು ತರಿಸಿಕೊಡಬೇಕಾಗುತ್ತದೆ. ಅಧಿಕಾರಿಗಳನ್ನು ಈ ರೀತಿ ಬಿಡಬೇಡಿ ತಾವು.

## 6. ಸಭೆಯ ಮುಂದಿಡಲಾದ ಕಾಗದ ಪತ್ರ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು, ಮುಖ್ಯಮಂತ್ರಿಗಳ ಪರವಾಗಿ)ಃ–** ಸನ್ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ 2019–20ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಸಂಪುಟ 1 ಮತ್ತು 2) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

## 7. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲೆ ಚರ್ಚೆ

**ವಿಷಯ: ಬೆಳಗಾವಿ ಜಿಲ್ಲೆಯ ಪಶ್ಚಿಮ ಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸೆ, ಶಿರೋಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಕುರಿತು.**

– –

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯರೇ, ಬೆಳಗಾವಿ ಜಿಲ್ಲೆಯ ಪಶ್ಚಿಮಘಟ್ಟ ಪ್ರದೇಶದ ಖಾನಾಪುರ ತಾಲ್ಲೂಕಿನ ನೇರಸೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶಿರೋಳಿ ಹಾಗೂ ಇತರೆ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಜನರು ಮೂಲಭೂತ ಸೌಲಭ್ಯಗಳಿಲ್ಲದೆ ಶೋಚನೀಯ ಸ್ಥಿತಿ ಎದುರಿಸುತ್ತಿರುವ ಕುರಿತು ಕಳೆದ ಬಾರಿಯೂ ಚರ್ಚೆ ಆಗಿತ್ತು, ಸರ್ಕಾರದಿಂದ ಉತ್ತರ ಬರಬೇಕಾಗಿದೆ. ಖಾನಾಪುರ ತಾಲ್ಲೂಕಿನ ಸುಮಾರು 50 ಗ್ರಾಮ ಪಂಚಾಯಿತಿಗಳ ಪೈಕಿ 15 ಗ್ರಾಮ ಪಂಚಾಯಿತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲ. ಇದರ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಉತ್ತರವನ್ನು ಕೊಡಬೇಕಾಗಿದೆ. ಅದು ಅರಣ್ಯ ಪ್ರದೇಶ ಮತ್ತು ಪಶ್ಚಿಮಘಟ್ಟ ಪ್ರದೇಶವಾಗಿದೆ. ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ, ಇದಕ್ಕೆ ದಯವಿಟ್ಟು ಮಾನ್ಯ ಸಚಿವರು ಉತ್ತರವನ್ನು ನೀಡಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ಬಗ್ಗೆ ಗಮನಹರಿಸಿ.

## 8. ಸದನದಲ್ಲಿ ಸಂಬಂಧಪಟ್ಟ ಸಚಿವರುಗಳು ಹಾಜರಿಲ್ಲದಿರುವ ಬಗ್ಗೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಯಾವಯಾವ ಸಚಿವರು ಈ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕು ಎಂದು ತಾವು ಅವರುಗಳ ಹೆಸರುಗಳನ್ನು ಈಗ ತಾನೇ ಓದಿ ಹೇಳಿದ್ದೀರಿ, ತಾವು ಓದಿರುವಂತಹ ಸಚಿವರ ಪೈಕಿ ಮೂವರು ಸಚಿವರು ಈ ಸದನದಲ್ಲಿ ಹಾಜರಿಲ್ಲ, ಮೇಲ್ಮನೆ ಎಂದರೆ ಅವರು ಹಗುರವಾಗಿ ಪರಿಗಣಿಸಿದ್ದಾರೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಒಬ್ಬರು ಅಥವಾ ಇಬ್ಬರು ಸಚಿವರು ಹಾಗೇ ತಿರುಗಾಡಿಕೊಂಡು ಬರುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಇದೇ ರೀತಿಯ ಉತ್ತರವನ್ನು ಕೊಡುತ್ತಾರೆ. ಇವತ್ತು ಸದನದಲ್ಲಿ ಯಾವ ಸಚಿವರು ಕಡ್ಡಾಯವಾಗಿ ಇರಬೇಕೆಂದು ಸಚಿವರುಗಳ ಹೆಸರನ್ನು ತಾವು ಓದಿದ್ದೀರಿ, ಅವರ ಪೈಕಿ ಮೂರು ಜನ ಸಚಿವರು ಸದನದಲ್ಲಿ ಉಪಸ್ಥಿತರಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ತಾವು ಸಭಾಪತಿಗಳಾದ ಮೇಲೆ ಇಂತಿಂಥ ಸಚಿವರುಗಳು ಮತ್ತು ಅಧಿಕಾರಿಗಳು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕೆಂದು ಸದನದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೆಸರನ್ನು ಓದಿ ಆದೇಶವನ್ನು ಕೊಟ್ಟಿದ್ದೀರಿ ಮತ್ತು ಅದು ಪರಿಪಾಲನೆ ಆಗುತ್ತಿರುವುದನ್ನು ತಾವು ಗಮನಿಸುತ್ತಿದ್ದೀರಿ. ಈ ಹಿನ್ನೆಲೆಯಲ್ಲಿ ಎಲ್ಲ ವ್ಯವಸ್ಥೆಗಳು ಚುರುಕಾಗಿದೆ. ಮೊದಲಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಮಂತ್ರಿಗಳು ಬರುತ್ತಿದ್ದಾರೆ.

**ಸಭಾಪತಿಯವರು:**: ಮಾನ್ಯ ಸಭಾನಾಯಕರೇ, ತಾವು ಹೇಳುತ್ತಿರುವುದು ಸರಿಯಾಗಿದೆಯೇ? 'ವ್ಯವಸ್ಥೆಯಲ್ಲಿ ಸುಧಾರಣೆ ಆಗುತ್ತಿದೆ, ಮಂತ್ರಿಗಳು ಬಂದು-ಹೋದರು, ತಿರುಗಾಡಿಕೊಂಡು ಬರುತ್ತಾರೆ' ಎಂದು ತಾವು ಉತ್ತರವನ್ನು ಕೊಡುತ್ತಿದ್ದೀರಿ ಇದು ನಿಮಗೆ ಸರಿ ಅನಿಸುತ್ತಿದೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನಾವು ನೂರು ಜನರು ಕಡ್ಡಾಯವಾಗಿ ಇರಬೇಕು, ಇದ್ದೇವೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಮಾತನಾಡುತ್ತಾ, 'ಒಬ್ಬರು ಅಥವಾ ಇಬ್ಬರು ಸಚಿವರು ಹಾಗೇ ಅಡ್ಡಾಡಿಕೊಂಡು ಬರುತ್ತಾರೆ' ಎಂದು ಹೇಳಿದರು. 'ಅಲ್ಲಿ ಇಲ್ಲಿ ಅಡ್ಡಾಡಿಕೊಂಡು ಬರುತ್ತಾರೆ' ಎಂದರೆ, ನಮ್ಮ ಕಡೆ ಅರ್ಥವೇ ಬೇರೆ ಆಗುತ್ತದೆ. ಇದರ ಜೊತೆಗೆ ಇತ್ತೀಚೆಗೆ ನಡೆದಿರುವ ಘಟನೆಗಳನ್ನು ನೋಡಿದರೆ, ನಮಗೆ ಬಹಳ ಸಂಶಯ ಬರುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ತಮಗೂ ಗೊತ್ತಿದೆ ನಮ್ಮ ಕಡೆ 'ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದಾರೆ' ಎಂದರೆ ದಾರಿ ಬಿಟ್ಟಿದ್ದಾರೆ ಎಂದು ಅರ್ಥ ಅಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಅವರು ಸಂಶಯಪಡುವಂತಹ ಮನಃಸ್ಥಿತಿಯಲ್ಲಿದ್ದಾರೆ, ಅದಕ್ಕೆ ನಾವೇನು ಮಾಡುವುದಕ್ಕೂ ಸಾಧ್ಯವಿಲ್ಲ. ಅಲ್ಲಿ ಇಲ್ಲಿ ತಿರುಗಾಡಿಕೊಂಡಿದ್ದಾರೆ ಎಂದರೆ, ಕೆಳಮನೆ ಮತ್ತು ಮೇಲ್ಮನೆಗೆ ಓಡಾಡುತ್ತಿದ್ದಾರೆ ಎಂದು ಅರ್ಥ. ಶಬ್ದಗಳನ್ನು ಅವರು ಸ್ವಲ್ಪ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕೆಳಮನೆ, ಮೇಲ್ಮನೆ ಎನ್ನುವುದು ನಮಗೆ ಗೊತ್ತಾಗಲಿಲ್ಲ. ಹುಡುಗ ಅಲ್ಲಿ ಇಲ್ಲಿ ಅಡ್ಡಾಡುತ್ತಿದ್ದಾನೆ ಎಂದರೆ ದಾರಿ ಬಿಟ್ಟಿದ್ದಾನೆ ಎಂದು ಅರ್ಥ. ಇತ್ತೀಚಿನ ಘಟನೆ ಮತ್ತು ವ್ಯವಸ್ಥೆಗಳನ್ನು ನೋಡಿದರೆ, ಹಳೆ ಚಾಳಿ ಮರುಕಳಿಸಿರಬಹುದು ಎನ್ನುವ ಸಂಶಯ ನಮಗೆ ಬಂದಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಸುಮ್ಮನೆ ಚರ್ಚೆ ಮಾಡುವುದು ಬೇಡ. ಈ ಸದನದ ಘನತೆ-ಗೌರವವನ್ನು ಕಾಪಾಡುವ ಹಿನ್ನೆಲೆಯಲ್ಲಿ ಈ ಸದನದಲ್ಲಿ ಯಾವಯಾವ ಸದಸ್ಯರು ಇರಬೇಕು ಅವರು ಕಡ್ಡಾಯವಾಗಿ ಹಾಜರಿರಬೇಕಾಗುತ್ತದೆ. ಇದಕ್ಕೂ ಮೀರಿ ನನ್ನ ಮಾತುಗಳನ್ನು ಕೇಳುವುದಿಲ್ಲವೆಂದರೆ ಏನು ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ತಿಳಿದುಕೊಳ್ಳಬೇಕು. 'ಬಂದರು-ಹೋದರು' ಎಂದರೆ ಏನು ಅರ್ಥ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ಆದಷ್ಟೂ ಪಾಲಿಸಬೇಕೆನ್ನುವ ಸೂಚನೆಯನ್ನು ಕೊಡಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಎಲ್ಲ ಮಂತ್ರಿಗಳು ಸದನದಲ್ಲಿ ಹಾಜರಿರುತ್ತಾರೆ. ನಾವು ಜಾಗ್ರತೆ ವಹಿಸುತ್ತಿದ್ದೇವೆ. ಮುಂದೆ ಈ ರೀತಿ ಆಗದಂತೆ ಎಚ್ಚರವನ್ನು ವಹಿಸುತ್ತೇವೆ.

**ಸಭಾಪತಿಯವರು:-** ಎಷ್ಟು ಬಾರಿ ಇದೇ ಮಾತನ್ನು ತಾವು ಹೇಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ?

**ಸಭಾಪತಿಯವರು:-** ಸಭಾ ನಾಯಕರಾಗಿ ತಾವು 'ಏನು ಮಾಡುವುದಕ್ಕೆ ಆಗುತ್ತದೆ?' ಎಂದು ಕೇಳುತ್ತಿದ್ದೀರಿ ಇದು ತಪ್ಪು.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಸಭಾನಾಯಕರಾಗಿ ಅವರು 'ಏನು ಮಾಡುವುದಕ್ಕೆ ಆಗುತ್ತದೆ?' ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. You are the Leader of the House. You are deemed to be the Chief Minister in this House. You pull up the Officers and you take action.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಇದು ಅಸಹಾಯಕತೆಯಲ್ಲ. ಕೆಲವೊಂದು ಅನಿವಾರ್ಯತೆ ಇರುತ್ತದೆ. ಉದಾಹರಣೆಗೆ ಹೇಳಬೇಕಾದರೆ, ಕೆಳಮನೆಯಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟ ವಿಚಾರದ ಬಗ್ಗೆ ನಿಯಮ 72ರಡಿಯಲ್ಲಿ ಚರ್ಚೆ ನಡೆಯುತ್ತಿರುತ್ತದೆ, ನಾನು ಮೇಲ್ಮನೆಯಲ್ಲಿ ಕಡ್ಡಾಯವಾಗಿ ಇರಬೇಕು ಎಂದರೆ, ಇಲ್ಲಿ ಪ್ರಶ್ನೆ ಕೇಳಿದಾಗ, ಕೆಳಮನೆಯಲ್ಲಿ ಇದ್ದಾರೆಂದು ಹೇಳಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಬಹಳ ಸಂಭಾವಿತರು, ಅವರ ಜೊತೆಗೆ ವಾದ ಮಾಡುವುದಕ್ಕೂ ನಮಗೆ ಮನಸ್ಸು ಬರುವುದಿಲ್ಲ. ಅಷ್ಟು ಸುಸಂಸ್ಕೃತರು ಮತ್ತು ಒಳ್ಳೆಯವರು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಕೆಳಮನೆಯಲ್ಲಿ ಇರುವಂತಹ ಮಂತ್ರಿಗಳ ಬಗ್ಗೆ ನಮ್ಮ ತಕರಾರಿಲ್ಲ. ಅಲ್ಲಿ ಇಲ್ಲದವರು ಇಲ್ಲಾದರೂ ಇರಬೇಕಲ್ಲವೇ? ಈ ದಿನ ಸದನದಲ್ಲಿ ಹಾಜರಿರಬೇಕಾಗಿರುವ ಮಂತ್ರಿಗಳ ಹೆಸರನ್ನು ಕರೆದಿದ್ದೇನೆ. ಅವರಲ್ಲಿ ಇಂತಿಂಥವರು ಕೆಳಮನೆಯಲ್ಲಿದ್ದಾರೆಂದು ತಾವು ಹೇಳಿ. ಈ ದಿನ ಹಾಜರಿರಬೇಕಾಗಿರುವ ಎಲ್ಲ ಸಚಿವರು ಈ ಸದನದಲ್ಲಿ ಉಪಸ್ಥಿತರಿರಬೇಕೆನ್ನುವುದು ಎಲ್ಲರ ಅಭಿಪ್ರಾಯವಾಗಿದೆ. ಹಾಜರಿರಲು ಸಾಧ್ಯವಾಗದೇ ಇರುವಂತಹ ಅನಿವಾರ್ಯ ಕಾರಣಗಳಿದ್ದರೆ ಅದನ್ನು ತಿಳಿಸಬೇಕಾಗುತ್ತದೆ. ಸರ್ಕಾರದ ಮುಖ್ಯ ಸಚೇತಕರು ಸಹ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಯಾವ ಇಲಾಖೆಗೆ ಸಂಬಂಧಪಟ್ಟಂತೆ ನಾವು ಪ್ರಶ್ನೆಯನ್ನು ಕೇಳುತ್ತೇವೆ, ಆ ಇಲಾಖೆಯ ಮಂತ್ರಿಗಳೇ ಉತ್ತರ ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ಎಲ್ಲದಕ್ಕೂ ಮಾನ್ಯ ಸಭಾನಾಯಕರು ಉತ್ತರ ಕೊಡುವಂತಹ ಹೊಸ ಸಂಪ್ರದಾಯ ಈಗ ಪ್ರಾರಂಭವಾಗುತ್ತಿದೆ. ದಯಮಾಡಿ ಇದಕ್ಕೆ ತಾವು ಅವಕಾಶ ಕೊಡಬಾರದು. ಸಂಬಂಧಪಟ್ಟ ಸಚಿವರೇ, ಬಂದು ಉತ್ತರ ಕೊಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಇದು ಹೊಸ ಸಂಪ್ರದಾಯವಲ್ಲ. ಹಳೆಯ ಸಂಪ್ರದಾಯವನ್ನೇ ನಾವು ಪಾಲನೆ ಮಾಡುತ್ತಿದ್ದೇವೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಈಗ ಇದು ಹೆಚ್ಚಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಆರ್.ಪಾಟೀಲ್‌ರವರು ಸಭಾನಾಯಕರಾಗಿದ್ದಾಗ, ಈ ರೀತಿ ಎಷ್ಟು ಉತ್ತರಗಳನ್ನು ನೀಡಿದ್ದಾರೆನ್ನುವುದನ್ನು ನಾವು ನೋಡಿದ್ದೇವೆ. ಪರಿಸ್ಥಿತಿಯನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನನ್ನ ಅನುಭವವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ನನ್ನ ಪ್ರಶ್ನೆ ಒಂದಿದೆ ನೋಡಿಕೊಳ್ಳಿ ಎನ್ನುತ್ತಾರೆ, ಕೆಲವೊಮ್ಮೆ bill move

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದಕ್ಕೆ ಎಷ್ಟೋ ಜನ ಸಚಿವರು ನನಗೆ ಬಂದು ಹೇಳುತ್ತಿದ್ದರು. ಮಾನ್ಯ ಸಭಾನಾಯಕರು, 'ಸಂಬಂಧಪಟ್ಟ ಸಚಿವರನ್ನೇ ಕಳುಹಿಸಿಕೊಡಿ' ಎಂದು ಹೇಳುವ ಮೂಲಕ firm ಆಗಬೇಕಾಗಿದೆ. ಇವರು ಎಲ್ಲದಕ್ಕೂ 'yes' ಎಂದು ಅಲ್ಲಿ ಹೋಗಿ briefing ತೆಗೆದುಕೊಂಡು ಇಲ್ಲಿ ಬಂದು ಮಾತನಾಡಿದರೆ, ಅವರಿಗೆ ಸಲಿಗೆ ಸಿಕ್ಕಿದಂತಾಗುತ್ತದೆ. ನನಗೆ ಆದಂತಹ ಅನುಭವವನ್ನು ಅವರ ಜೊತೆಗೆ ಹಂಚಿಕೊಳ್ಳುತ್ತಿದ್ದೇನೆ. ಸ್ವತಃ ನೀವೇ ಬರಬೇಕೆಂದು ಅವರು ಸಚಿವರಿಗೆ ಹೇಳಬೇಕಾಗುತ್ತದೆ. You are capable to answer. We will not doubt your capability. ಎಲ್ಲದಕ್ಕೂ ಇವರು 'ಸರಿ' ಎಂದು ಒಪ್ಪಿಕೊಂಡರೇ ಎಲ್ಲ ಸಚಿವರು ಎಲ್ಲ ಪ್ರಶ್ನೋತ್ತರವನ್ನೂ ಇವರ ಹೆಗಲಿಗೆ ಹಾಕಿ, ಸಭಾನಾಯಕರೊಬ್ಬರೇ ಉತ್ತರ ಕೊಡುವ ಮೂಲಕ ಸದನವನ್ನು ನಡೆಸುವಂತಹ ಸ್ಥಿತಿಗೆ ಇವರುಗಳು ತಂದು ನಿಲ್ಲಿಸುತ್ತಾರೆ.

**(ಮುಂದು)**

**(358) 10.3.2021 12.00 ಪಿಕೆ:ಎಂಡಿ**

**9. ವಿತ್ತೀಯ ಕಾರ್ಯಕಲಾಪ**

**2021–22ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ**

– –

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್(ನಾಮನಿರ್ದೇಶನ ಹೊಂದದವರು):–** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬಹುಶಃ ನಿನ್ನೆ ನಾನು ಸದನದ ಕೊನೆಯಲ್ಲಿ ಈ ವಿಷಯವನ್ನು ರೈಸ್ ಮಾಡಿದೆ. ಆಯವ್ಯಯ ಅಧಿವೇಶನದ ಪಾವಿತ್ರ್ಯತೆ ಮತ್ತು ಪಾತಿವ್ರತ್ಯತೆಯನ್ನು ಉಳಿಸಿಕೊಳ್ಳಬೇಕು; 30 ದಿವಸಗಳ ಕಾಲದ ಆಯವ್ಯಯ ಅಧಿವೇಶನ ಪ್ರಶ್ನೋತ್ತರ, ಶೂನ್ಯವೇಳೆ ಹೊರತುಪಡಿಸಿ ಉಳಿದೆಲ್ಲಾ ಸಮಯವನ್ನು ತಾವು ಆಯವ್ಯಯ ಚರ್ಚೆಗೆ ಮೀಸಲಿಡಬೇಕು ಎಂದು ವಿನಂತಿ ಮಾಡಿಕೊಂಡಿದ್ದೆ. ತಾವು ಅದನ್ನು ಮಾನ್ಯ ಮಾಡಿ ಇವತ್ತು ನನ್ನನ್ನು ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಕರೆದಿದ್ದು ಬಹಳ ಸಂತೋಷವಾಯಿತು. ಮಾನ್ಯ ಸಭಾಪತಿಯವರೇ, ನಾವು, ನೀವು ಮತ್ತು ಮಾನ್ಯ ಇಬ್ರಾಹಿಂರವರು 1978ರಿಂದ ಇದ್ದೇವೆ. 30 ದಿವಸಗಳ ಕಾಲದ ಆಯವ್ಯಯ ಅಧಿವೇಶನ ಎಂದರೆ ಬಹಳ ಚೆನ್ನಾಗಿ ನಡೆಯುತ್ತಿತ್ತು. ಪ್ರತಿ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಗಳಾಗುತ್ತಿತ್ತು. ಆಯಾ ಸಚಿವರು ಅದಕ್ಕೆ ಉತ್ತರ ಕೊಡುತ್ತಿದ್ದರು. ಮಾನ್ಯ ವೀರಪ್ಪ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೊಯಿಲಿಯವರ ಕಾಲದಲ್ಲಿ ನಾನು ಬಹಳ ಚಿಕ್ಕ ಇಲಾಖೆಯ ಸಚಿವನಾಗಿದ್ದೆ; ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವನಾಗಿದ್ದೆ. ಅಂತಹ ಇಲಾಖೆಯ ಬೇಡಿಕೆ ಮೇಲಿನ ಚರ್ಚೆ ಆಗಿ ಆ ಸಚಿವರೇ ಉತ್ತರ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ನಾನು ಉತ್ತರ ಕೊಡುತ್ತಾ ಅಭಿಮಾನದಿಂದ "ವಿಶ್ವಕ್ಕೆಲ್ಲಾ ಒಬ್ಬನೇ ಕನ್ನಡ ಮಂತ್ರಿ ವಿಶ್ವನಾಥ" ಎಂದು ಹೇಳಿದ್ದೆ. ಅಂದರೆ ಆಗ ಅಂತಹ ಅವಕಾಶಗಳು ಇರುತ್ತಿತ್ತು.

**ಸಭಾಪತಿಯವರು:-** ತಾವು ಈಗ ನಿಮ್ಮ ವಿಷಯವನ್ನು ಹೇಳಿದಿರೇ?

**(ಸದನದಲ್ಲಿ ನಗು)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಹೌದು. ಮಾನ್ಯ ಸಭಾಪತಿಯವರೇ, ನಾವು-ನೀವು ಒಟ್ಟಿಗೆ ಶಾಸಕಾಂಗದಲ್ಲಿ ಕೆಲಸ ಮಾಡಿದ್ದೇವೆ. ನೀವು 1980ನೇ ಇಸವಿಯಲ್ಲಿ ಮಾನ್ಯ ಗುಂಡೂರಾಯರ ಕಾಲದಲ್ಲಿ ಬಂದಿದ್ದಿರಿ.

ಮಾನ್ಯ ಸಭಾಪತಿಯವರೇ, ಇವತ್ತು ಆಯವ್ಯಯ ಅಧಿವೇಶನ ಕೂಡ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಅದನ್ನು restore ಮಾಡಬೇಕಾದುದು ತಾವು ಮತ್ತು ಕಾರ್ಯಕಲಾಪ ಸಲಹಾ ಸಮಿತಿಯ ಧರ್ಮವಾಗಿದೆ. ನಾವು ಇವತ್ತಿನ ದಿವಸ 2021-22ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಆದರೆ, 2020-21ನೇ ಸಾಲಿನಲ್ಲಿ ಬಜೆಟ್‌ಗೆ ಅನುಮೋದನೆ ಕೊಟ್ಟಿದ್ದು ಏನಾಯಿತು? ಯಾವ ಯಾವ ರೀತಿ ಖರ್ಚುಗಳಾಯಿತು? ಆ ಖರ್ಚಿನಿಂದ ರಾಜ್ಯದ ಅಭಿವೃದ್ಧಿ ಎಷ್ಟಾಯಿತು? ಬಡತನ ರೇಖೆಯಿಂದ ಎಷ್ಟು ಜನ ಮೇಲೆ ಬಂದರು? ಶಿಕ್ಷಣದಲ್ಲಿ ಸಾಕ್ಷರತೆ ಎಷ್ಟು ಜಾಸ್ತಿಯಾಯಿತು? ನಮ್ಮ ನೀರಾವರಿ ಯೋಜನೆಗಳು ಎಷ್ಟು ಜಾಸ್ತಿಯಾಯಿತು ಎಂಬ ಬಗ್ಗೆ ಹೇಳಬೇಕು. ಇದು ಪ್ರತಿ ಇಲಾಖೆಯ ಮಂತ್ರಿಯ ಜವಾಬ್ದಾರಿಯಾಗಿದೆ, ಉತ್ತರದಾಯಿತ್ವವಾಗಿದೆ. ಅದು ಏನೂ ಇಲ್ಲದೇ ಇತ್ತೀಚಿನ ವರ್ಷಗಳಲ್ಲಿ guillotine ಆಗುತ್ತಿದೆ. ಮತ್ತೆ ಮತ್ತೆ ರಾಜಕಾರಣ, ಮತ್ತೆ ಮತ್ತೆ ಅದೇ ವಿಚಾರಗಳನ್ನು ಚರ್ಚೆ ಮಾಡಿ, ಯಾವುದರ ಸಲುವಾಗಿ ನಾವು 30 ದಿವಸಗಳ ಕಾಲ 'this is the budget session' ಎಂದು ಹೇಳುತ್ತೇವೆಯೋ, ಆಯವ್ಯಯ ಅಧಿವೇಶನ ಎಂದು ಹೇಳುತ್ತೇವೆಯೋ ಅದಕ್ಕೊಂದು ಅರ್ಥಬೇಕು. ಅದಕ್ಕೆ ನಾನು ನಿನ್ನೆ ಮಾನ್ಯ ಸಭಾಪತಿಯವರಲ್ಲಿ ವಿನಂತಿ ಮಾಡಿಕೊಂಡೆ. ಮಾನ್ಯ ಸಭಾಪತಿಯವರು ಅದನ್ನು ಮಾನ್ಯ ಮಾಡಿ ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಆಯವ್ಯಯದಲ್ಲಿ ಆರೂವರೆ ಕೋಟಿ ಜನರ ಬದುಕಿನ ಒಂದು ವಿಶೇಷತೆ ಇದಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ನಾನು ಬ್ರಿಟಿಷ್ ಪಾರ್ಲಿಮೆಂಟ್‌ಗೆ ಸಂಬಂಧಪಟ್ಟಂತೆ ಪುಸ್ತಕ ಬರೆಯುವಂತಹ ಸಂದರ್ಭದಲ್ಲಿ ಲಂಡನ್‌ಗೆ ಹೋಗಿದ್ದೆ. ಪ್ರತಿ ವರ್ಷದ ಜೂನ್ 5ನೇ ತಾರೀಖಿನಂದು parliament open ಆಗುತ್ತದೆ. Parliament open ಆದ ದಿವಸವೇ ಬಜೆಟ್ ಕೂಡ ಮಂಡನೆ ಆಗುತ್ತದೆ. ಎರಡು-ಮೂರು ದಿವಸದ ಮುಂಚೆಯೇ ಇಡೀ ಯೂರೋಪ್ ಖಂಡದಲ್ಲಿ 5ನೇ ತಾರೀಖು ನಮ್ಮ parliament open ಆಗುತ್ತದೆ, ನಮ್ಮ ಬಜೆಟ್ ಅಧಿವೇಶನ ಶುರು ಆಗುತ್ತದೆ, ನಮಗೆ ಏನೇನು ಕೊಡುತ್ತಾರೆ, ವಿದ್ಯಾರ್ಥಿಗಳಿಗೆ ಏನು ಕೊಡುತ್ತಾರೆ, ಮಹಿಳೆಯರಿಗೆ ಏನು ಕೊಡುತ್ತಾರೆ, ರೈತರಿಗೆ ಏನು ಕೊಡುತ್ತಾರೆ ಎನ್ನುವುದರ ಬಗ್ಗೆ ದೊಡ್ಡ ಚರ್ಚೆ ಪ್ರಾರಂಭವಾಗುತ್ತದೆ. ಯಾವ ಸದನದಲ್ಲಿ ನಾವು ಚರ್ಚೆ ಮಾಡಬೇಕೋ ಆ ಸದನದಲ್ಲೂ ಸಮಯಾವಕಾಶ ಇಲ್ಲ ಎಂದರೆ, ಆಯವ್ಯಯ ಚರ್ಚೆಯನ್ನು ಎಲ್ಲಿ ಮಾಡಬೇಕು? ಇನ್ನು ಮುಂದಾದರೂ ಕೂಡ ನಮ್ಮ ಎರಡೂ ಸದನಗಳಲ್ಲಿ ಆಯವ್ಯಯದ ಮೇಲೆ ಸುದೀರ್ಘವಾದಂತಹ ಚರ್ಚೆಗಳಾಗಬೇಕು ಮತ್ತು ಯಾವ ಯಾವ ರೀತಿಯಾಗಿ ನಾವು ಅದನ್ನು ಮಾಡಿಕೊಂಡು ಬಂದಿದ್ದೇವೆ ಎನ್ನುವುದನ್ನು ನೋಡಬೇಕಾಗುತ್ತದೆ. ಮಾನ್ಯ ಸಭಾಪತಿಯವರೇ, ಇವತ್ತು ಬೀಡಿ ಕಟ್ಟುವವನು, ಬೀಡಿ ಸೇದುವವನೂ ಕೂಡ ತೆರಿಗೆಯನ್ನು ಕಟ್ಟುತ್ತಾನೆ. ಸಾರಾಯಿ ಕುಡಿಯುವವನು, ದೊಡ್ಡ ಕೈಗಾರಿಕೆಗಳವರು ತೆರಿಗೆಯನ್ನು ಕಟ್ಟುತ್ತಾರೆ. ಆದ್ದರಿಂದ ಈ ಆಯವ್ಯಯದಲ್ಲಿ ಯಾವ ಯಾವ ಜನರು ತಮ್ಮ ಬೆವರಿನ ಶ್ರಮದ ದುಡಿಮೆಯಿಂದ ಈ ಸರ್ಕಾರದ ಖಜಾನೆಯನ್ನು ತುಂಬುತ್ತಿದ್ದಾರೋ ಅವರಿಗೂ ಕೂಡ ಸಂತೋಷ ಆಗಬೇಕು. ನಾನು ಕಟ್ಟಿದ ತೆರಿಗೆ ನಮ್ಮ ರಾಜ್ಯದ ಜನರಿಗೆ ಸಮರ್ಪಕವಾಗಿ ಹೋಗುತ್ತಿದೆ, ವಿತರಣೆ ಆಗುತ್ತಿದೆ, ಅನುಷ್ಠಾನವಾಗುತ್ತಿದೆ ಎನ್ನುವುದು ಗೊತ್ತಾಗಬೇಕು. ಮಾನ್ಯ ಸಭಾಪತಿಯವರೇ, ನಾನು ಮಾನ್ಯ ದೇವರಾಜ ಅರಸು ಕಾಲದಿಂದ ನೋಡಿಕೊಂಡು ಬಂದಿದ್ದೇನೆ. ಹೊಸದಾಗಿ ಬಂದ ಶಾಸಕರಿಗೆ ಪಾಠ ಹೇಳಿಕೊಡುತ್ತಿದ್ದರು. ಮಾನ್ಯ ಬಸವಲಿಂಗಪ್ಪನವರು ಇದ್ದರು. revolutionary ಕಂದಾಯ ಸಚಿವರಾಗಿದ್ದ ಅವರು ನಮಗೆ ಪಾಠ ಹೇಳಿಕೊಡುತ್ತಿದ್ದರು. ಶಾಸಕರು ಹೇಗೆ ಮಾತನಾಡಬೇಕು, ಆಫೀಸರ್ ಗ್ಯಾಲರಿಗೆ ಹೇಗೆ ಮಾತನಾಡಬೇಕು, ಪ್ರೆಸ್ ಗ್ಯಾಲರಿಗೆ ಹೇಗೆ ಮಾತನಾಡಬೇಕು, ಜನರಲ್ ಗ್ಯಾಲರಿಗೆ ಹೇಗೆ ಮಾತನಾಡಬೇಕು ಮತ್ತು ಯಾವರೀತಿಯಾಗಿ ಪ್ರೆಸೆಂಟ್ ಮಾಡಬೇಕು ಎಂಬುದನ್ನು ಮನೆಯಲ್ಲಿ ಊಟ ಕೊಟ್ಟು ಹೇಳಿ ಕೊಡುತ್ತಿದ್ದರು. 1978ನೇ ಇಸವಿಯಲ್ಲಿ ನಮಗೆ 600.00 ರೂ.ಗಳ ಸಂಬಳ ಕೊಡುತ್ತಿದ್ದರು. How to move a motion on Calling Attention? ಹೇಗೆ ಸರ್ಕಾರವನ್ನು ಮಣಿಸಬೇಕು ಎಂದು ಹೇಳಿಕೊಡುತ್ತಿದ್ದರು. ಇವೆಲ್ಲವೂ ನಿಮಗೂ ಗೊತ್ತಿದೆ, ಏಕೆಂದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು–ನೀವು ಒಟ್ಟಿಗೆ ಕೆಲಸ ಮಾಡಿದವರಾಗಿದ್ದೇವೆ. ಆಗ ನನಗೆ, ವಿಶ್ವನಾಥ್ ನೀನು ಯಾವಾಗಲಾದರೂ ಮಂತ್ರಿಯಾದರೆ ನೀನು ಮೊದಲು ಮಾಡಬೇಕಾದ ಕೆಲಸ ಎಂದರೆ, 25 ವರ್ಷಗಳ ಅವಧಿಯ ಎರಡೂ ಸದನಗಳ ಪ್ರೊಸಿಡಿಂಗ್ಸ್ ಓದಬೇಕು. ಆಗ, ಸಂಬಂಧಪಟ್ಟ ಇಲಾಖೆಯ ಬಗ್ಗೆ ಯಾರು ಯಾರು ಏನೇನು ಮಾತನಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಆಗ ನಿರ್ದಿಷ್ಟ ಇಲಾಖೆಯ ಬಗ್ಗೆ ಪೂರ್ಣ ಪರಿಚಯ ಮಾಡಿಕೊಳ್ಳುವುದಕ್ಕೆ ಅವಕಾಶ ಆಗುತ್ತದೆ ಎಂದು ಹೇಳಿದ್ದರು. ನೀನು ಎಂಎಲ್ಎ ಆಗಿದ್ದರೆ 10 ವರ್ಷಗಳ ಬಜೆಟ್ ಓದಬೇಕು ಎಂದು ಹೇಳಿದ್ದರು. ಮಾನ್ಯ ಸಭಾಪತಿಯವರೇ, ನಾನು 10 ವರ್ಷದ ಆಯವ್ಯಯವನ್ನು ಪರಾಮರ್ಶೆ ಮಾಡಿದೆ. ಅದೇ ಅಂಕಿಅಂಶಗಳು, ಆದರೆ ದಿನಾಂಕಗಳು ಬೇರೆ ಬೇರೆ ಇರುವುದು ಕಂಡು ಬಂತು. ಎಲ್ಲಾ ಇಲಾಖೆಗಳಲ್ಲೂ ದಂಡಿಯಾಗಿ ಅಧಿಕಾರಿಗಳಿದ್ದಾರೆ. ಆರ್ಥಿಕ ಇಲಾಖೆಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಸುಮ್ಮನೆ ಒಂದನ್ನೇ ಬರೆಯುವುದು, ಅದನ್ನೇ ಇಡುವ ಕೆಲಸ ಮಾಡುತ್ತಾರೆ. ಇದರಿಂದ ಇಲಾಖೆಗಳು ಹೇಗೆ ಮಂಗರವಾಗಿ ಮಾಡುತ್ತವೆ ಎನ್ನುವುದು ಗೊತ್ತಾಗುತ್ತದೆ. Particularly the Finance Department, ಆರ್ಥಿಕ ಇಲಾಖೆಯವರು... ಮಾನ್ಯ ಸಭಾಪತಿಯವರೇ, ನನಗೂ ಮತ್ತು ಮಾನ್ಯ ಕುಮಾರಸ್ವಾಮಿಯವರ ಮಧ್ಯೆ ಭಿನ್ನಾಭಿಪ್ರಾಯ ಏಕೆ ಬಂತು ಎಂದರೆ, ನಾನು "the state must have an exclusive Finance Minister" ಎಂದು ಒಂದು ಹೇಳಿಕೆ ಕೊಟ್ಟೆ. ಏಕೆಂದರೆ ಆ ಖಾತೆಯನ್ನು ಮುಖ್ಯಮಂತ್ರಿಗಳೇ ಇಟ್ಟುಕೊಂಡು ಬರುತ್ತಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರಾಗಲಿ, ಮಾನ್ಯ ದೇವರಾಜ ಅರಸುರವರಾಗಲಿ ಅಥವಾ ಮಾನ್ಯ ನರೇಂದ್ರ ಮೋದಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ತಮ್ಮ ಬಳಿ ಆರ್ಥಿಕ ಇಲಾಖೆಯನ್ನು ಇಟ್ಟುಕೊಂಡಿರಲಿಲ್ಲ. ಮುಖ್ಯಮಂತ್ರಿಗಳು ಯಾವ ಯಾವ ಇಲಾಖೆಗಳನ್ನು ತಮ್ಮ ಬಳಿ ಇಟ್ಟುಕೊಂಡಿರುತ್ತಾರೋ ಆ ಇಲಾಖೆಗಳು ಸತ್ತು ಹೋಗುತ್ತವೆ. ಏಕೆಂದರೆ ಅವರ ಬಳಿ ಸಮಯ ಇರುವುದಿಲ್ಲ. ಆರ್ಥಿಕ ಇಲಾಖೆಯನ್ನು ಬೇರೆಯವರಿಗೆ ಕೊಡಿ ಎಂದಾಗ, ಮಾನ್ಯ ಕುಮಾರಸ್ವಾಮಿಯವರು, ನನ್ನಲ್ಲಿ ಆರ್ಥಿಕ ಇಲಾಖೆಯನ್ನು ನಡೆಸುವಂತಹ ಸಾಮರ್ಥ್ಯ ಇಲ್ಲವೇ ಎಂದು ನನ್ನ ಮೇಲೆ ಎಗರಾಡಿದರು. ಆಗ ನಾನು, ಮಾನ್ಯ ಮುಖ್ಯಮಂತ್ರಿಗಳೇ ನಿಮಗೆ ಆ ಸಾಮರ್ಥ್ಯ ಇದೆ; ಅದರ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ, ಆದರೆ ಇಲ್ಲಿ ಸಮಯದ ಪ್ರಶ್ನೆ ಬರುತ್ತದೆ ಎಂದು ಹೇಳಿದೆ. ಮುಖ್ಯಮಂತ್ರಿಗಳ ಹತ್ತಿರ ಸಮಯ ಇರುವುದಿಲ್ಲ, ಏನಾದರೂ ತಂದರೆ ಅದಕ್ಕೆ ಸಹಿ ಮಾಡಿ ಕಳುಹಿಸಿ ಬಿಡುತ್ತಾರೆ. ಆದ್ದರಿಂದ ಪ್ರಮುಖವಾದ ಹಣಕಾಸು ಇಲಾಖೆಯನ್ನು ಒಬ್ಬ ಮಂತ್ರಿಗೆ ವಹಿಸಿ ಕೊಡಬೇಕು. ಇಷ್ಟೊಂದು ಜನ ಮಂತ್ರಿಗಳ ಪೈಕಿ ಹಣಕಾಸು ಇಲಾಖೆಯನ್ನು ನಡೆಸುವ ಮಂತ್ರಿಗಳು ಯಾರೂ ಇಲ್ಲವೇ? ಬೇರೆಯವರಿಗೆ ವಹಿಸಿದರೆ ಅದನ್ನು ನಡೆಸುತ್ತಾರೆ. ಮಾನ್ಯ ಸಭಾಪತಿಯವರೇ, ನಮ್ಮಲ್ಲಿ 33

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಗಳಿವೆ. ಇವುಗಳಲ್ಲಿ ಬಹಳ ಪ್ರಮುಖವಾದ 3 ಇಲಾಖೆಗಳು ಯಾವುವೆಂದರೆ, ಹಣಕಾಸು, ಡಿಪಿಎಆರ್ ಮತ್ತು ಕಾನೂನು ಇಲಾಖೆ. ಈ ಮೂರು ಇಲಾಖೆಗಳು ಆಡಳಿತಾತ್ಮಕ ಪರಿಧಿಯೊಳಗೆ ತೀರ್ಮಾನ ತೆಗೆದುಕೊಳ್ಳುವಂತಹ ಇಲಾಖೆಗಳಾಗಿರುತ್ತವೆ.

**(ಮುಂದು)**

**(359) 10–03–2021 12.10 ಡಿಎಸ್–ಎಕೆ**

**ಶ್ರೀ ಅಡಗೂರ್ ಎಚ್.ವಿಶ್ವನಾಥ್(ಮುಂದು):–**

ಮಾನ್ಯ ಸಭಾಪತಿಯವರೇ, the rest 30 departments are like touch and go. ಈ ಮೂರು ಇಲಾಖೆಗಳು ನ್ಯಾಯಾಧೀಶರು ಇದ್ದ ಹಾಗೆ. ಈ ಮೂರು ಇಲಾಖೆಗಳು ಒಟ್ಟಿಗೆ ಕುಳಿತುಕೊಂಡರೆ ಮತ್ತೊಂದು ಇಲಾಖೆಯ ಸಮಸ್ಯೆ ಬಗೆಹರಿಯುತ್ತದೆ. ಇಲ್ಲದಿದ್ದರೆ ಬಗೆಹರಿಯುವುದಿಲ್ಲ. ಇಲ್ಲವೆಂದರೆ, ಚೋಟಾ signature ನೊಂದಿಗೆ Finance Department, DPAR ಮತ್ತು Law Department ಗಳಿಗೆ ಕಡತಗಳು ಹೋಗುತ್ತಿರುತ್ತದೆ. ಈ ಮೂರು ಇಲಾಖೆಗಳಲ್ಲಿ ಎರಡು ಇಲಾಖೆಗಳು ಮುಖ್ಯಮಂತ್ರಿ ಹತ್ತಿರವೇ ಇವೆ. Then how is the government going to solve the problem of the whole state? ಎರಡೂವರೆ ಲಕ್ಷ ಕೋಟಿ ಬಜೆಟ್‌ನ್ನು ಹೇಗೆ, ಎಲ್ಲಿ, where is the time to see that? The postings, disciplinary matters, and promotions of the DPAR, IAS, IFS, IPS, KAS officers; ಇಡೀ ಆಡಳಿತದ ಹೃದಯ ಭಾಗ ಡಿಪಿಎಆರ್. ಅದನ್ನು ನೋಡುವುದಕ್ಕೆ ಅವರಿಗೆ ಎಲ್ಲಿದೆ ಟೈಮ್?

**ಶ್ರೀ ಯು.ಬಿ.ವೆಂಕಟೇಶ್:–** ಈ ಸಲ ಆಯವ್ಯಯದಲ್ಲಿ ವಲಯವಾರು ವಿವರಗಳಿವೆ ಹೊರತು ಅದರಲ್ಲಿ ಇಲಾಖೆಗಳನ್ನೇ ತೆಗೆದುಬಿಟ್ಟಿದ್ದಾರೆ. ಕೇವಲ ವಲಯವಾರು ವಿವರಗಳಿವೆ ಅಷ್ಟೆ.

**ಶ್ರೀ ಅಡಗೂರ್ ಎಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಈ ಮೂರು ಇಲಾಖೆಗಳಲ್ಲಿ ಪ್ರಮುಖವಾಗಿ ಎರಡು ಇಲಾಖೆಗಳು ಮಾನ್ಯ ಮುಖ್ಯಮಂತ್ರಿ ಹತ್ತಿರವೇ ಇದೆ. ಮುಖ್ಯಮಂತ್ರಿಗಳು ಯಾರೇ ಇರಲಿ, ಹಿಂದೆ ಮಾನ್ಯ ಸಿದ್ದರಾಮಯ್ಯನವರು ಕೂಡ ಇಟ್ಟುಕೊಂಡಿದ್ದರು. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಇಟ್ಟುಕೊಂಡಿದ್ದರು. ಈಗ ಮಾನ್ಯ ಯಡಿಯೂರಪ್ಪನವರು ಇಟ್ಟುಕೊಂಡಿದ್ದಾರೆ. ಎಲ್ಲವನ್ನು ಹಿಡಿದಿಟ್ಟುಕೊಳ್ಳುತ್ತೇನೆ ಎನ್ನುವುದಕ್ಕೆ ಅವರೇನು ಆರ್ಥಿಕ ತಜ್ಞರಲ್ಲ. It

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

is a fact. ನಾನು ಇರುವಂತಹ ವಿಚಾರಗಳನ್ನು ಹೇಳುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು 14 ಸಲ ಆಯವ್ಯಯವನ್ನು ಮಂಡಿಸಿದ್ದಾರೆ ಅಷ್ಟೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು 4-5 ಸಲ ಆಯವ್ಯಯವನ್ನು ಮಂಡಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರು 8 ಸಲ ಆಯವ್ಯಯವನ್ನು ಮಂಡಿಸಿದ್ದಾರೆ. But the depth of the Finance Minister, the allocations, the implementation ಎಲ್ಲಿ ಸ್ವಾಮಿ? ನಮ್ಮ ಆರ್ಥಿಕ ಇಲಾಖೆಯವರು ಎಷ್ಟು ಚೆನ್ನಾಗಿ ಸುಳ್ಳು ಹೇಳುತ್ತಾರೆಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಆರ್ಥಿಕ ಇಲಾಖೆಯವರು ಟೋಪಿ ಹಾಕಿದ್ದಾರೆ. 2020-21ನೇ ಸಾಲಿನಲ್ಲಿ ಎರಡೂವರೆ ಲಕ್ಷ ಕೋಟಿ ಹಣವನ್ನು ಹೇಗೆ ಸಂಗ್ರಹ ಮಾಡುತ್ತಾರೆ ಎನ್ನುವುದಕ್ಕೆ ಆಯವ್ಯದಲ್ಲಿ ಒಂದು ಕಡೆ ಮಂಡಳಿ ಮತ್ತು ನಿಗಮಗಳಿಂದ ಪುಟ 105 ಪ್ಯಾರಾ 359 ರಲ್ಲಿ "ರಾಜ್ಯ ಸರ್ಕಾರದ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳ ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 23,763 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುತ್ತದೆಂದು ನಿರೀಕ್ಷಿಸಲಾಗಿದೆ." ಎಂದು ಹೇಳಲಾಗಿದೆ. ನಿಗಮ ಮತ್ತು ಮಂಡಳಿಗಳಲ್ಲಿ ಹಣ ಎಲ್ಲಿದೆ? ಬಹುತೇಕ ನಿಗಮ ಮತ್ತು ಮಂಡಳಿಗಳು ಸರ್ಕಾರದ ಅನುದಾನದಲ್ಲಿ ನಡೆಯುತ್ತಿವೆ. ನಿಗಮ-ಮಂಡಳಿಗಳ ಅಧ್ಯಕ್ಷರುಗಳಿಗೆ ಕ್ಯಾಬಿನೆಟ್ ರ್‍ಯಾಂಕ್ ಸಹ ನೀಡಲಾಗಿದೆ. ಇನ್ನು ಸ್ವಲ್ಪ ದಿವಸಗಳು ಕಳೆದರೆ ಬಹಳ ಸೀನಿಯರ್‌ಗಳು ನಮಗೆ ಕ್ಯಾಬಿನೆಟ್ ರ್‍ಯಾಂಕ್ ಬೇಡ, ಸಿಎಂ ರ್‍ಯಾಂಕ್ ಕೊಡಿ ಎನ್ನುತ್ತಾರೆ. What is this? ಅಲ್ಲಿ ಹಣವೇ ಇಲ್ಲ. 2020-21 ನೇ ಸಾಲಿನ ಬಜೆಟ್‌ನಲ್ಲಿ ಏನು ಹೇಳಲಾಗಿದೆ ಎಂದರೆ, 22,378 ಕೋಟಿ ರೂ.ಗಳನ್ನು ನಿಗಮ-ಮಂಡಳಿಗಳಿಂದ ಕ್ರೋಢೀಕರಿಸಲಾಗುವುದು ಎಂದು ಹೇಳಿದ್ದಾರೆ. ಈ ಹಣ ಎಲ್ಲಿಂದ ಬಂತು? When there is no money in the Boards and Corporations to run the institution itself, ಈ ಹಣವನ್ನು ಎಲ್ಲಿಂದ ಕ್ರೋಢೀಕರಿಸಲಾಗುವುದು? ಅಧಿಕಾರಿಗಳು ಎಷ್ಟು neat ಆಗಿ ಸುಳ್ಳು ಹೇಳುತ್ತಾರೆ, ಎಷ್ಟು neat ಆಗಿ ಇದರಲ್ಲಿ ಅಚ್ಚು ಮಾಡಿ ಕಳುಹಿಸುತ್ತಾರೆ. ಇದನ್ನು ನಾವು ನಂಬಬೇಕೇ? ಇದು ಹಣಕಾಸಿನ ಪರಿಸ್ಥಿತಿ. ಹಾಗಾಗಿ ಈ ಆಯವ್ಯಯ ಅಧಿವೇಶನ ಬಹಳ ಪ್ರಮುಖವಾದ ಅಧಿವೇಶನವಾಗಿದೆ. In-depth discussion ಗಳು ಆಗಬೇಕು. ಆಯವ್ಯಯ ಅಧಿವೇಶನದಲ್ಲಿ ಪ್ರತಿ ಇಲಾಖೆಯ ಮಂತ್ರಿಗಳು ಸಹ.... ಅದಕ್ಕೆ ನಾವು 2020-21ನೇ ಸಾಲಿನ ಆಯವ್ಯಯದಲ್ಲಿ ನಾವು ಅನುಮೋದನೆಯನ್ನು ಕೊಟ್ಟಿದ್ದೇವೆ. 2020-21ನೇ ಸಾಲಿನಲ್ಲಿ ನೀಡಿದ ಅನುಮೋದನೆಯಲ್ಲಿ ಎಷ್ಟು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಣ ಖರ್ಚಾಗಿದೆ? ಏನೇನು ಕಾರ್ಯಕ್ರಮಗಳಾಗಿವೆ, ಈ ರಾಜ್ಯದ ಶಿಕ್ಷಣದ ಪರಿಸ್ಥಿತಿ, ನೀರಾವರಿ ಎಷ್ಟು ಮಟ್ಟಿಗೆ ಮೇಲಕ್ಕೆ ಬಂದಿದೆ ಹಾಗೂ ಬಡತನ ಎಷ್ಟರಮಟ್ಟಿಗೆ ಮೇಲಕ್ಕೆ ಬಂದಿದೆ. ಆಹಾರ ಮತ್ತು ನಾಗರಿಕ ಪೂರೈಕೆಯಲ್ಲಿ ಎಷ್ಟು ಜನರು ಸಶಕ್ತರಾದರು, ಮುಂತಾದ ಕಳೆದ ಬಾರಿಯ ವಿವರಗಳನ್ನು ಸಹ ಹೇಳಬೇಕು. There is no Action Taken Report (ATR) in the budget. ಹಾಗಾದರೆ ಇನ್ಯಾವ ವಿಚಾರದ ಮೇಲೆ ಮಾತನಾಡಬೇಕು? ಈ ಬಜೆಟ್‌ನಲ್ಲಿ ಈಗ ಏನು ಮಾಡುತ್ತೇವೆಂಬುದು ಇದೆ. ಆದರೆ ಕಳೆದ ಸಾರಿಯ Action Taken Report ಏನಾಯಿತು? ಇವತ್ತಿನ ದಿವಸ ಅತಿವೃಷ್ಟಿ, ಅನಾವೃಷ್ಟಿ, ಹೆಮ್ಮಾರಿಯಂತಹ ಕೋವಿಡ್-19 ಗಳ ನಡುವೆ ರಾಜ್ಯ ಸರ್ಕಾರ ನಡೆದುಕೊಂಡು ಬಂದಿದೆ. ಬಹಳಷ್ಟು ಜತನದಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅದನ್ನೆಲ್ಲಾ ಎದುರಿಸಿದೆ. ಆದರೆ ಇವತ್ತು ನಾವೇ ಒಪ್ಪಿಕೊಂಡಿದ್ದೇವೆ. ಹಣ ಏನಾಯಿತು, ಯಾವ ರೀತಿ ಖರ್ಚಾಯಿತು ಎಂಬುದರ ವಿವರಗಳನ್ನು ಸಹ ಕೊಡಬೇಕು. Action Taken Report ಇಲ್ಲದೇ ಪ್ರತಿ ವರ್ಷ ಹೀಗೆ ಮುಂದುವರೆದುಕೊಂಡು ಹೋದರೆ ಏನಾಯಿತು? ಹಾಗಾಗಿ ನಾನು ಪುನಃ ವಿನಂತಿ ಮಾಡುತ್ತಿದ್ದೇನೆ, the Finance Department must have an exclusive Finance Minister and the DPAR also must be attached to the Chief Minister just like the Central Government. ಕೇಂದ್ರ ಸರ್ಕಾರದಲ್ಲಿಯೂ ಸಹ ಇದು ಇದೆ. The Ministry of Personnel is attached to the Prime Minister. ಇವತ್ತು ಕೂಡ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ನರೇಂದ್ರ ಮೋದಿಯವರು, ಅವರು ಪ್ರಧಾನ ಮಂತ್ರಿಗಳಾದರೂ ಸಹ ಯಾವುದೇ ಇಲಾಖೆಗಳನ್ನು ಇಟ್ಟುಕೊಂಡಿಲ್ಲ. ಸುಮಾರು 12 ವರ್ಷಗಳ ಕಾಲ ಅವರು ಗುಜರಾತ್ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿಯೂ ಸಹ ನಮ್ಮ ರಾಜ್ಯದ ಸನ್ಮಾನ್ಯ ರಾಜ್ಯಪಾಲರಾದಂಥ ವಜುಬಾಯಿವಾಲರವರು ಅಲ್ಲಿನ ಹಣಕಾಸು ಸಚಿವರಾಗಿದ್ದರು. ಆಗಲೂ ಸಹ ಅವರು ಯಾವ ಖಾತೆಗಳನ್ನು ಸಹ ತಮ್ಮ ಬಳಿ ಇಟ್ಟುಕೊಂಡಿರಲಿಲ್ಲ. ಆದರೆ ಇಲ್ಲಿ ಏಕೆ ಎಲ್ಲವನ್ನು ಇಟ್ಟುಕೊಳ್ಳುತ್ತಾರೋ ನನಗೆ ಅರ್ಥವಾಗುವುದಿಲ್ಲ. The Chief Minister is the supremo. He can summon any file, any minister, or any officer. But I do not know why; ಏಕೆ ಇಷ್ಟೆಲ್ಲಾ ಇಲಾಖೆಗಳನ್ನಿಟ್ಟುಕೊಂಡು ಜನರಿಗೆ ನೀವು ಕಷ್ಟ ಕೊಡುತ್ತೀರಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಏಕೆ finance portfolio ನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಳ್ಳುತ್ತಾರೆಂಬುದು ತಮಗೆ ಅರ್ಥವಾಗಿದೆ, ಅರ್ಥವಾಗಿಲ್ಲವೆಂದು ಅಲ್ಲ. ಹೇಳುವುದಕ್ಕಾಗುವುದಿಲ್ಲ ಅಷ್ಟೇ. ಮಾನ್ಯ ಮುಖ್ಯಮಂತ್ರಿಗಳು ಏಕೆ ಹಣಕಾಸು ಇಲಾಖೆಯನ್ನಿಟ್ಟುಕೊಳ್ಳುತ್ತಾರೋ ನನಗೆ ಅರ್ಥವಾಗುವುದಿಲ್ಲವೆಂದು ಮಾನ್ಯ ವಿಶ್ವನಾಥ್‌ರವರು ಹೇಳಿದರು. ಅದು ಅವರಿಗೆ ನಿಶ್ಚಿತವಾಗಿಯೂ ಅರ್ಥವಾಗಿದೆ.

**ಶ್ರೀ ಅಡಗೂರ್ ಎಚ್.ವಿಶ್ವನಾಥ್:-** ನೀವು ಸಹ ಅರ್ಥ ಮಾಡಿಕೊಂಡು ಜನರಿಗೆ ಹೇಳಬೇಕು. ನೀವು ಅರ್ಥ ಮಾಡಿಕೊಂಡು ಹೊಟ್ಟೆಯೊಳಗೆ ಇಟ್ಟುಕೊಂಡರೆ ಏನಾಯಿತು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವಾಗ ಹೇಳುತ್ತೇನೆ. ಇದನ್ನು ಮಾನ್ಯ ಸದಸ್ಯರು ಹೇಳಿದ್ದರೆ ಚೆನ್ನಾಗಿತ್ತು.

**ಶ್ರೀ ಅಡಗೂರ್ ಎಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರೂ ಸಹ ಕೇವಲ adjustment politics ಮಾಡಿಬಿಟ್ಟರೆ ಹೇಗೆ? Then what for the opposition is there? ನಾನು ಬಹಳಷ್ಟು democratic ideology books ಓದಿದ್ದೇನೆ. I have toed many democratic countries in the Europe. I have written many books also. ಇಂಗ್ಲೆಂಡ್‌ನ ಪಾರ್ಲಿಮೆಂಟ್ ಬಗ್ಗೆಯೂ ಸಹ ಪುಸ್ತಕವನ್ನು ಬರೆದಿದ್ದೇನೆ. "The Talking Shop" ಎನ್ನುವುದು ಆ ಪುಸ್ತಕದ ಹೆಸರು. ಗ್ರೀಸ್ ಪಾರ್ಲಿಮೆಂಟ್ ಬಗ್ಗೆಯೂ ಸಹ ಪುಸ್ತಕವನ್ನು ಬರೆದಿದ್ದೇನೆ. ಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದೆಯೇ ಅಲ್ಲಿ ಚುನಾವಣೆ ನಡೆಯಿತು. ಅಲ್ಲಿ ಏನು ಹೇಳುತ್ತಾರೆ ಎಂಬುದನ್ನು ನಾವು ಗಮನಿಸಬೇಕು. ಏಕೆಂದರೆ, democratic ideology ಮೇಲೆ ಬರೆದಿರುವಂಥ ಪುಸ್ತಕಗಳನ್ನು ಏನು ಹೇಳಲಾಗಿದೆ ಎಂದರೆ, ಯಾವ ದೇಶದಲ್ಲಿ, ಯಾವ ನಾಡಿನಲ್ಲಿ, ಯಾವ ರಾಜ್ಯದಲ್ಲಿ ಜನತಂತ್ರ ವ್ಯವಸ್ಥೆ ಇರತಕ್ಕಂಥ ರಾಜ್ಯಗಳಲ್ಲಿ ವಿರೋಧ ಪಕ್ಷವು ಎಷ್ಟು ಗಟ್ಟಿಯಾಗಿ ಇರುತ್ತದೆಯೋ, ಅಷ್ಟು ಆಡಳಿತ ಪಕ್ಷ ಗಟ್ಟಿಯಾಗಿರುತ್ತದೆ, ಸರ್ಕಾರ ಆರೋಗ್ಯಕರವಾಗಿ ಇರುತ್ತದೆಂದು ಹೇಳುತ್ತಾರೆ. ಮಾನ್ಯ ವಿರೋಧ ಪಕ್ಷದವರಿಗೆ ಅರ್ಥವಾಯಿತೆಂದು ಭಾವಿಸುತ್ತೇನೆ. Yes, this is the thing. ಅದಕ್ಕೆ ಹೇಳಿದ್ದು ಈ adjustment politics ಬೇಡ, be direct. ಜನರಿಗೆ ಅನುಕೂಲವಾಗಲಿ, ಕೇವಲ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮಗಳ ಅನುಕೂಲಕ್ಕಾಗಿ ಅಲ್ಲ ನಾವುಗಳು ಇಲ್ಲಿ ಕುಳಿತಿರುವುದು. ಹಾಗಾಗಿ democratic ideology ನಲ್ಲಿ.....

ಈಗ post-covid budget ಆಗಬೇಕಾಗಿತ್ತು. ಜಗತ್ತಿನ ಎಲ್ಲಾ ದೇಶಗಳು ಕೋವಿಡ್-19 ಕೇವಲ ಭಾರತ ದೇಶ ಒಂದೇ ಅಲ್ಲ, ಅದು ಇಡೀ ಜಗತ್ತನ್ನೇ ಅಲ್ಲಾಡಿಸಿದೆ ಎಂದು ಹೇಳುತ್ತಿವೆ. ಅರ್ಥಶಾಸ್ತ್ರಜ್ಞರು ಏನು ಹೇಳುತ್ತಾರೆಂದರೆ, ಇವತ್ತಿನ ಬಜೆಟ್ ಐದು ವರ್ಷಗಳ ಕಾಲ ಮುಂದುವರೆಯಬೇಕು. ಪ್ರತಿ ರಾಜ್ಯ ಮತ್ತು ಪ್ರತಿ ದೇಶದಲ್ಲಿಯೂ ಸಹ ಆ ರೀತಿಯಾದಂತಹ ಒಂದು ಬಜೆಟ್ ತಯಾರಾಗಬೇಕು. ಆಯಾಯ ದೇಶ ಮತ್ತು ರಾಜ್ಯಗಳಲ್ಲಿ ಆರ್ಥಿಕತೆಯಿಂದಾಗಿ ನಲುಗಿ ಹೋಗಿದ್ದೇವೆ. ಈಗ ನಾವು ತೆಗೆದುಕೊಳ್ಳುವಂಥ ತೀರ್ಮಾನಗಳು, ಹೇರುವಂಥ ತೆರಿಗೆಗಳು, ಕೊಡುವಂಥ ಕಾರ್ಯಕ್ರಮಗಳು ಐದು ವರ್ಷಗಳ ಕಾಲ ಎಳೆಯಬೇಕು. ಇದು post-covid budget ಆಗಬೇಕಾಗಿತ್ತು. That must be the commonsense of the Finance Minister.

(ಮುಂದು)

**(360) 10.03.2021 12.20 ಎಸ್‌ವಿ(ಬಿಕೆಪಿ)-ಎಕೆ**

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ಮುಂದು):-**

ಹಿಂದೆ ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಸುಮಾರು 40,000 ಕೋಟಿ ರೂಪಾಯಿಗಳ ಬಜೆಟ್ ಇರುತ್ತಿತ್ತು. ಇಂದು ಬಜೆಟ್ 2,46,000 ಕೋಟಿ ರೂಪಾಯಿಗಳ ಬಂದಿದೆ. ಇದು ಯಾರಿಂದ? ದಿವಂಗತ ದೇವರಾಜ ಅರಸು ಅವರು ಒಂದು ಸಾಮಾಜಿಕ ಪ್ರಜ್ಞೆಯ ಮೇಲೆ ಆಯವ್ಯಯವನ್ನು ಕೊಡುತ್ತಿದ್ದರು. ದಿವಂಗತ ರಾಮಕೃಷ್ಣ ಹೆಗಡೆಯವರು ಗ್ರಾಮೀಣ ಭಾರತದ ಬಗ್ಗೆ ಕಾಳಜಿಯನ್ನು ಹೊಂದಿದ್ದಂತಹ ಮಾನ್ಯ ನಜೀರ್ ಸಾಬ್ ಅಂತಹವರನ್ನು ಇಟ್ಟುಕೊಂಡು ಆಯವ್ಯಯವನ್ನು ಕೊಡುತ್ತಿದ್ದರು. ಮಾನ್ಯ ಕೃಷ್ಣ ಅವರು ಐ.ಟಿ./ಬಿ.ಟಿ. ಮತ್ತು ಟೆಲಿಫೋನ್ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸಿದರು. 40,000-50,000 ಇದ್ದಂತಹ ಬಜೆಟ್ ಇವತ್ತು 2,46,000 ಕೋಟಿಗೆ ಬಂದು ನಿಂತಿದೆ. ಇದನ್ನು ಈ ಮಕ್ಕಳು ತುಂಬುತ್ತಾರೆ. ರಾಜ್ಯದಲ್ಲಿ 25 ಲಕ್ಷ ಜನ ಈ ರೀತಿ ಕೆಲಸ ಮಾಡುವ ಹುಡುಗರಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಇವೆ. ನಾವು ಅದರ ಬಗ್ಗೆ ಆಯವ್ಯಯ ಪುಸ್ತಕದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚಕಾರವನ್ನೆತ್ತುವುದಿಲ್ಲ. ಮಕ್ಕಳಿಗೆ ಕಂಪ್ಯೂಟರ್ ಪರದೆಯ ಮುಂದೆ ಕುಳಿತು ಕಣ್ಣು ಹಾಳಾಗುತ್ತಿದೆ. ಐ.ಟಿ./ಬಿ.ಟಿಯವರ ಬಗ್ಗೆ ನಾವು ಇದರಲ್ಲಿ ಏನಾದರೂ ಪ್ರಸ್ತಾಪ ಮಾಡಿದ್ದೇವೆಯೇ? ಐ.ಟಿ./ಬಿ.ಟಿ.ಕಂಪನಿಗಳು, ಬಹುರಾಷ್ಟ್ರೀಯ ಕಂಪನಿಗಳು ಶೇ.40 ರಷ್ಟು ಸಂಬಳವನ್ನು ಕಡಿತಗೊಳಿಸಿವೆ. ಉದ್ಯೋಗಗಳನ್ನು ಕಡಿತಗೊಳಿಸಿವೆ. ಬಾಡಿಗೆಯನ್ನು ತಪ್ಪಿಸುವುದಕ್ಕಾಗಿ Work From Home ಮಾಡಿದೆ. ನಮ್ಮ ರಾಜ್ಯದಲ್ಲಿ ಶಾಸಕರಿಗೆ ಶೇ.30 ಅನ್ನು ಕಡಿತಗೊಳಿಸಿದ್ದಾರೆ. ಅಧಿಕಾರಿಗಳಿಗೆ ಶೇ.100 ರಷ್ಟು ಕೊಡುತ್ತಿದ್ದಾರೆ. ಭಾರತದ ರಾಷ್ಟ್ರಾಧ್ಯಕ್ಷರು, ಪ್ರಧಾನ ಮಂತ್ರಿ ಮತ್ತು ಅವರ ಸಚಿವ ಸಂಪುಟ ಒಳಗೊಂಡಂತೆ ಕೇಂದ್ರ ಸರ್ಕಾರದವರು ಶೇ.30 ರಷ್ಟು ಕಡಿಗೊಳಿಸಿದ್ದಾರೆ. Why not in Karnataka Government? Why not? ನಮ್ಮ ಸಂಬಳ ಸಾರಿಗೆ ಭತ್ಯೆಗಳಲ್ಲಿ ಶೇ.30ರಷ್ಟು ಕಡಿತಗೊಳಿಸಲಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ವಿಶ್ವನಾಥ್ ಅವರೇ, ಆಗಲೇ ನಾನು ಇದನ್ನು ಪ್ರಸ್ತಾಪ ಮಾಡಿದ್ದೇನೆ. ನಮಗೆ ಶೇ.30 ರಷ್ಟು ಕಡಿತ ಎಂದು ಹೇಳಿದಿರಿ. ಚುನಾವಣೆಗಳಿಗೆ ನಾವು ಖರ್ಚು ಮಾಡಿ ಬರುತ್ತೇವೆ. ಚುನಾವಣೆ ಆದ ಮೇಲೆ ಪ್ರತಿನಿತ್ಯ ಖರ್ಚು ಮಾಡುವವರೂ ನಾವೇ. ಆಸ್ಪತ್ರೆಯಲ್ಲಿರುವ ರೋಗಿಗಳಿಗೆ ಹಣ ನೀಡಬೇಕು. ಮದುವೆಯಿದೆ ಎಂದು ಹೇಳಿಕೊಂಡು ಬರುವವರಿಗೆ ಹಣ ನೀಡಬೇಕು. ಶಾಲೆಗಳಿಗೆ ಹೋಗುವ ಮಕ್ಕಳಿಗೆ ಶುಲ್ಕವನ್ನು ನೀಡಬೇಕು. ಉಳಿದಂತೆ ಆರ್ಕೆಸ್ಟ್ರಾ, ದೇವಸ್ಥಾನ ಇತ್ಯಾದಿ. ಊರಿನಲ್ಲಿ ನಮ್ಮ ಮನೆಯಲ್ಲಿದ್ದರೆ ದಿನಕ್ಕೆ 10 ರಿಂದ 25 ಜನ ಬರುತ್ತಾರೆ. ಅವರು ರೂ.10,000 ಕೇಳಿದರೆ ನಾವು ರೂ.5,000 ವನ್ನಾದರೂ ನೀಡಬೇಕು. ಆದರೆ ಅವರು ಒಂದು ಬಾರಿ ಕೆಲಸಕ್ಕೆ ಸೇರಿಬಿಟ್ಟರೆ ಅಪ್ಪ-ಅಮ್ಮನನ್ನು ನೋಡುವುದಿಲ್ಲ, ಊರು ಕಡೆ ತಿರುಗಿಯೂ ನೋಡುವುದಿಲ್ಲ. There is no expenditure for them. ನಾವು ಪ್ರತಿನಿತ್ಯ ಖರ್ಚು ಮಾಡುತ್ತೇವೆ. ಚುನಾವಣೆಗೂ ಬಂಡವಾಳವನ್ನು ಹಾಕಬೇಕು. ದಿನನಿತ್ಯವೂ ಬಂಡವಾಳವನ್ನು ಹಾಕಬೇಕು. ಸಮಾಜಮುಖಿಯಾಗಿ ನಿಲ್ಲಬೇಕು. ನಮಗೇಕೆ ಶೇ.30 ರಷ್ಟು ಕಡಿತ? ನಾನು ತೆಗೆದುಕೊಂಡಿರುವ ಚುನಾವಣೆಯ ಸಾಲವನ್ನು ತೀರಿಸುವುದಕ್ಕೆ ವಿಧಾನ ಸೌಧ ಅಪೆಕ್ಸ್ ಬ್ಯಾಂಕ್‌ನವರು ಪ್ರತಿದಿನ ಫೋನ್ ಮಾಡುತ್ತಾರೆ. "ಸರ್, ನಿಮ್ಮದು ರೂ.4.5 ಲಕ್ಷ overdue ಆಗಿದೆ" ಎಂದು ಹೇಳುತ್ತಾರೆ. ನನ್ನ ಸಾಲಕ್ಕೆ ತಕ್ಕಂತೆ ನಾನು ತೆಗೆದುಕೊಂಡಿದ್ದೆನು. ಈಗ ಏನು ಮಾಡುವುದು? ಹೇಗೆ ಕಟ್ಟುವುದು? ಮಾರ್ಚ್ 31 ರ ನಂತರ ಏಪ್ರಿಲ್ 1 ರಿಂದ ಕೊಡದಿದ್ದರೆ ನಾನು ಧರಣಿಗೆ ನಿಲ್ಲುತ್ತೇನೆ. ನಾವು ಲಂಚ ತೆಗೆದುಕೊಳ್ಳುವುದಕ್ಕಾಗುತ್ತದೆಯೇ? No, it is not good.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಈಗ ಟೆಂಟ್ ಥಿಯೇಟರ್‌ನಲ್ಲಿ ಕರೆಂಟ್ ಹೋದಂತಾಯಿತು. ನಾನು ಏನೋ ಹೇಳುತ್ತಿದ್ದೆನು. ಟೆಂಟ್ ಥಿಯೇಟರ್‌ನಲ್ಲಿ ಕರೆಂಟ್ ಹೋಗಿಬಿಟ್ಟರೆ, ಯಾರು ಯಾರನ್ನು ತಬ್ಬಿಕೊಳ್ಳುತ್ತಾರೆಯೋ ತಿಳಿಯುವುದಿಲ್ಲ.

**(ಸದನವು ನಗೆಗಡಲಿನಲ್ಲಿ ತೇಲಿತು.)**

The Vidhana Soudha must also feel the impact of Covid. Why not? ನಾವಷ್ಟೇ ಜಿಜಜಟ ಮಾಡಬೇಕೆ? The bureaucrats must also feel the impact of Covid. ಅವರೇಕೆ feel ಮಾಡುವುದಿಲ್ಲ. ನಾವಷ್ಟೇ feel ಮಾಡಬೇಕೆ? ಕಡಿತಗೊಳಿಸುವುದಾದರೆ ಎಲ್ಲರಿಗೂ ಕಡಿತಗೊಳಿಸಿ. ಸರ್ಕಾರಿ ನೌಕರರು/ಅಧಿಕಾರಿಗಳಿಗೂ ಮಾಡಿ ಎಂದು ಮುಖ್ಯಮಂತ್ರಿಯವರನ್ನು ಕೇಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ವಿಶ್ವನಾಥ್ ಅವರೇ, ಆರ್ಥಿಕ ಇಲಾಖೆಯವರ ಸಲಹೆಯಿರುತ್ತದೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಆ ಆರ್ಥಿಕ ಇಲಾಖೆಯು ಅವರ ಬಳಿಯೇ ಇದೆ. ಅದಕ್ಕೆ ನಾನು ಹೇಳಿದ್ದು. Exclusive Finance Minister ಏಕೆ ಬೇಕೆಂದರೆ ಅವರು ಇದನ್ನೆಲ್ಲಾ ನೋಡುತ್ತಾರೆ. ಸಮಯವಿಲ್ಲದಿದ್ದರೆ ಈ ರೀತಿಯಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೂ ಮಾಡುವುದು ಬೇಡ. ಕಳೆದ ವರ್ಷ ಮೂರು ತುಟ್ಟಿಭತ್ಯೆಗಳನ್ನು ನೀಡಿರುವುದಿಲ್ಲ. ಕೋವಿಡ್ ಪ್ರಾರಂಭವಾದಾಗಿನಿಂದ ಕೇಂದ್ರ ಕೊಟ್ಟಿಲ್ಲವೆಂದು ನಮ್ಮಲ್ಲಿಯೂ ಕೊಟ್ಟಿಲ್ಲ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, 2021-22ರ ಆಯವ್ಯಯವನ್ನು ನೋಡಿ. ರೂ.2,43,734 ಕೋಟಿ ಇದೆ. ಇದರಲ್ಲಿ ರಾಜ್ಯದ ಸಂಪನ್ಮೂಲವೆಲ್ಲಾ ಸೇರಿ ನಮ್ಮ ಬಳಿಯಿರುವ ಹಣ ರೂ.1,19,758 ಕೋಟಿ. ಕೇಂದ್ರದಿಂದ ನಮಗೆ ವರ್ಗಾವಣೆಯಾಗುವಂತಹ ಹಣ ರೂ.60,162 ಕೋಟಿ. ಒಟ್ಟು ರೂ.1,79,920 ಕೋಟಿ. ಆದರೆ ನಮ್ಮ ಆಯವ್ಯಯ ಎಷ್ಟು? ನಮ್ಮ ಬಳಿಯಿರುವುದು ರೂ.1,79,000 ಚಿಲ್ಲರೆ. ಆಯವ್ಯಯ ರೂ.2,43,000 ಚಿಲ್ಲರೆ. ಇನ್ನುಳಿದವುಗಳನ್ನು ಹೇಗೆ ಟಜಜಣ ಮಾಡಲಾಗುತ್ತದೆ? ಪ್ರತಿವರ್ಷ ಸಾಲ ತರುತ್ತಲೇ ಇದ್ದೇವೆ. ಸಾಲ ರೂ.4 ಲಕ್ಷ ಕೋಟಿ ಹತ್ತಿರ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಲುಪುತ್ತಿದೆ. ಹಣಕಾಸು ಇಲಾಖೆ ರೂ.1,79,000 ಕೋಟಿಗಳಲ್ಲಿ ಇದನ್ನು ಹೇಗೆ ನಿರ್ವಹಣೆ ಮಾಡಬೇಕು? ಇದರಲ್ಲಿ committed expenditure ರೂ.1,79,000 ಕೋಟಿ. Committed expenditure ಯಾವುದೆಂದರೆ ನೌಕರ/ಅಧಿಕಾರಿಗಳ ಸಂಬಳ ಸಾರಿಗೆ, ಅವರ ಪಿಂಚಣಿ, ಸರ್ಕಾರ ಮಾಡಿರುವ ಸಾಲದ ಮೇಲಿನ ಬಡ್ಡಿ. ನೌಕರ/ಅಧಿಕಾರಿಗಳ ಸಂಬಳ ಸಾರಿಗೆ ರೂ.37,291 ಕೋಟಿ. ಪಿಂಚಣಿ ರೂ.22,211 ಕೋಟಿ. ನಾವು ತಂದಿರುವ ಸಾಲಕ್ಕೆ principal amount and interest ಎರಡೂ ಸೇರಿ ರೂ.22,216 ಕೋಟಿ. ಒಟ್ಟು ರೂ.81,718 ಕೋಟಿಯಾಗಿದ್ದು, ಅದನ್ನು ತೆಗೆದಿಡಬೇಕು. ನಂತರ Repayment of Loans; ಅದರಲ್ಲಿ principal amount ರೂ.11,605 ಕೋಟಿ, ಸಬ್ಸಿಡಿ ರೂ.24,000 ಕೋಟಿ. ಇದೆಲ್ಲಾ ಸೇರಿ ರೂ.1,79,920 ಆಗಿದ್ದು, this is the committed expenditure. ಇಲ್ಲಿ 10 ಪೈಸೆಯೂ ಆಚೀಚೆ ಆಗುವಂತಿಲ್ಲ. ಹಾಗಾದರೆ ಹೇಗೆ ನಡೆಸುವುದು? ದುಡ್ಡು ಎಲ್ಲಿಂದ ತರುವುದು? ಸರ್ಕಾರ ಅದನ್ನು ಬಹಳ ವಿವೇಚನಾಯುತವಾಗಿ ಮಾಡಬೇಕಾಗುತ್ತದೆ. ಈಗ ರೂ.63,000 ಚಿಲ್ಲರೆ ಕೋಟಿ ನಮಗೆ ಕೊರತೆಯಾಗುತ್ತಿದೆ. ಇದೆಲ್ಲವನ್ನೂ ಕ್ರೋಢೀಕರಿಸುವುದು ಹೇಗೆ? Exclusive Finance Minister ಏಕೆ ಬೇಕೆಂದರೆ ಚಾಟಿಯಿಟ್ಟುಕೊಂಡು ಕುಳಿತುಕೊಳ್ಳಬೇಕು. ಬೆಳಿಗ್ಗೆ Opening Balance ಏನು, ರಾತ್ರಿ Closing Balance ಏನು? ಯಾವ ಯಾವ ಚೆಕ್‌ಪೋಸ್ಟ್‌ಗಳಲ್ಲಿ ಏನಾಯಿತು? ಯಾರ್ಯಾರು tax evasion ಮಾಡುತ್ತಾರೆ?

ಮಾನ್ಯ ಸಭಾಪತಿಯವರೇ, tax evasion ಯಾವ ರೀತಿಯಾಗುತ್ತದೆ ಎಂದರೆ, ನಾವೇ ಹೋಗಿ ಹೇಳಿದರೂ ಅಧಿಕಾರಿಗಳು ಕೇಳುವುದಿಲ್ಲ. ಮೈಸೂರಿನ ಸ್ಟೀಲ್ ಇಂಡಸ್ಟ್ರಿಯಲ್ಲಿ ಯಾರೋ ಒಬ್ಬರು ಎಲ್ಲಿಂದಲೋ ಬಂದು ನಡೆಸುತ್ತಿದ್ದಾರೆ. ಸುಖಾಸುಮ್ಮನೆ ಲಾರಿಗಳು ಹೋಗುತ್ತಿರುತ್ತವೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(361) 10-03-2021/ 12-30 ಎಸ್‌ವಿ(ಬಿಕೆಪಿ)-ಆರ್‌ಎನ್**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್(ಮುಂದು):-**

ಯಾರೋ ಅಲ್ಲಿನ ಸಣ್ಣ-ಸಣ್ಣ ಅಧಿಕಾರಿಗಳು ನನ್ನ ಹತ್ತಿರ ಬಂದು ಹೇಳಿದರು. ನಾನು ಇದನ್ನು ನೀಟ್ ಆಗಿ ಎಲ್ಲಾ ರೆಡಿ ಮಾಡಿಕೊಂಡು, I am being a senior legislator in the legislature of the State, I personally approach the Commissioner of Commercial Taxes. ಅವರು ಹೀಗೆ ಆಗುತ್ತಿದೆ ನೋಡಿ ಎಂದರು. ಇದು ನಡೆಯುತ್ತಲೇ ಇದೆ. ಇದೊಂದು ಉದಾಹರಣೆ ಅಷ್ಟೆ.

**ಶ್ರೀ ಗೋವಿಂದರಾಜು(ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಕಡೆಯೂ ಸಹ ಇದೇ ಆಗುತ್ತಿದೆ, ಇವತ್ತಿಗೂ GST ಎನ್ನುವುದು ಏನಿದೆ ಇದೆಲ್ಲಾ ಕೇವಲ adjustment ನಲ್ಲಿಯೇ ನಡೆಯುತ್ತಿದೆ ಎಂದು ಹೇಳಿದ್ದೇನೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ನಾನು ಸಹ ಆ ವಿಷಯವನ್ನೇ ಹೇಳುತ್ತಿರುವುದು, it is only an example. ಹೇಗೆ ಈ ಹಣ ಮಾಡುವುದು, ಮತ್ತೆ ಸಾಲ ಮಾಡಿ ತೆಗೆದುಕೊಳ್ಳಬಹುದಾ? ಸಾಲ ಮಾಡುತ್ತಲೇ ಹೋಗುವುದಾ? ಎಲ್ಲೆಲ್ಲಿ evasion taxes ಅಗುತ್ತಿದೆ, ಮೊದಲು that must be controlled. ಮಾನ್ಯ ಸಭಾಪತಿಯವರೆ, ನಿಮಗೆ ಒಂದು ಅಂದಾಜಿನ ಪ್ರಕಾರ ಆರ್ಥಿಕ ಇಲಾಖೆಯಲ್ಲಿ ಅಂದರೆ ಯಾವ ಇಲಾಖೆಯಲ್ಲಿ ಈ ರಾಜ್ಯದ ಜನರ ಕಲ್ಯಾಣಕ್ಕೆ ಹಣ ಸಂಗ್ರಹ ಮಾಡಬೇಕೋ ಆ ಇಲಾಖೆಯಲ್ಲಿಯೇ 35% ಅಧಿಕಾರಿಗಳಿಲ್ಲ. ನಿಮಗೆ ಅದನ್ನು ಹೇಳಿಬಿಟ್ಟರೆ ಅಷ್ಟೆ. ಎಲ್ಲೆಲ್ಲಿ ಆರ್ಥಿಕ ಇಲಾಖೆಯಲ್ಲಿಯೇ ನಿಮಗೆ ಅಧಿಕಾರಿಗಳಿಲ್ಲವೆಂದರೆ, ಮತ್ತೆ ಹಣ ಸಂಗ್ರಹ ಯಾವ ರೀತಿಯಾಗುತ್ತದೆ? ಹೇಳಿ. ಹಾಗಾಗಿ ಇವತ್ತಿನ ದಿವಸ ಬಹಳಷ್ಟು ರೀತಿಯಲ್ಲಿ ಸರ್ಕಾರ ಕಠಿಣವಾದಂತಹ ಕ್ರಮಗಳನ್ನು ತೆಗೆದುಕೊಂಡು ಹೋಗಬೇಕು. ಸಾಲ ಕಡಿಮೆ ಮಾಡಬೇಕು. ಇದರಲ್ಲಿ ಆರ್ಥಿಕ ಕಡಿತ ಬಹಳವಿದೆ, ಕಠಿಣವಾಗಿ ಕಡಿತ ಮಾಡುತ್ತಾ ಕಡಿಮೆ ಮಾಡುತ್ತಾ ಹೋಗಬೇಕು. ಇವತ್ತು ಆಡಳಿತಾತ್ಮಕ ವೆಚ್ಚವನ್ನು ಕಡಿಮೆ ಮಾಡುವುದು ಹೇಗೆ? ಮೊದಲನೆಯಾಗಿ administrative expenses, ಅಂದರೆ ಆಡಳಿತಾತ್ಮಕ ವೆಚ್ಚ. ಸುಖಾಸುಮ್ಮನೆ ಖರ್ಚುಗಳಾಗುತ್ತವೆ ನೋಡಿ, ಅದರಲ್ಲಿ ಕೆಲವು ಇಲಾಖೆಗಳು ಯಾವ ರೀತಿ ಇವೆ ಎಂದರೆ, ಒಬ್ಬರು ಮಾಡುವ ಕೆಲಸಕ್ಕೆ 10 ಜನರಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಉಪ ಮುಖ್ಯ ಮಂತ್ರಿಗಳಾದ ಗೋವಿಂದ ಎಂ.ಕಾರಜೋಳರವರು ಗಮನಹರಿಸಬೇಕು. ಸುಖಾಸುಮ್ಮನೆ ಜನರು ಅದರಲ್ಲಿ ತುಂಬಿ ಹೋಗಿದ್ದಾರೆ. ಆಡಳಿತಾತ್ಮಕ ವೆಚ್ಚ ಯಾವರೀತಿ ಆಗುತ್ತಿದೆ ಎನ್ನುವುದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಉದಾಹರಣೆಗೆ ಸಮಾಜ ಕಲ್ಯಾಣ ಇಲಾಖೆಯನ್ನು ತೆಗೆದುಕೊಳ್ಳಿ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇವತ್ತು ನಾಲ್ಕು ವಿಭಾಗಗಳಾಗಿದೆ. ದಿವಂಗತ ದೇವರಾಜ ಅರಸುರವರ ಕಾಲದಲ್ಲಿ ಸಮಾಜ ಕಲ್ಯಾಣ ಇಲಾಖೆ ಒಂದೇ ಇತ್ತು. ಈಗ ನಾಲ್ಕು ವಿಭಾಗಗಳಾಗಿವೆ. ಎಸ್.ಸಿ., ಎಸ್.ಟಿ., ಒ.ಬಿ.ಸಿ., ಹಾಗೂ ಮೈನಾರಿಟಿ ಹೀಗೆ ನಾಲ್ಕು ವಿಭಾಗಗಳಾಗಿವೆ. ಈ ನಾಲ್ಕು ವಿಭಾಗಗಳಿಗೂ ಪ್ರಧಾನ ಕಾರ್ಯದರ್ಶಿಗಳು ಇದ್ದಾರೆ, ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು, ಅಪರ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು, ಇವರಲ್ಲದೆ ಒಬ್ಬರು ಆಯುಕ್ತರು, ಆಮೇಲೆ ಇವರ ಕೈಕೆಳಗೆ ಒಬ್ಬರು ನಿರ್ದೇಶಕರು. ಅವರ ಕೆಳಗಿನ ಅಧಿಕಾರಿಗಳು ಬೇರೆ. ಇವರ ಕೆಲಸವೇನು? ಈ ನಾಲ್ಕು ಇಲಾಖೆಗಳ ಅಧಿಕಾರಿಗಳ ಕೆಲಸವೇನು? ಹಾಸ್ಟೆಲ್‌ಗಳನ್ನು ನಡೆಸುವುದಷ್ಟೇ ಇವರುಗಳ ಕೆಲಸ. ಹಾಸ್ಟೆಲ್‌ಗಳನ್ನು ನಡೆಸುವುದಕ್ಕೆ ಇಷ್ಟೊಂದು ಜನರು ಬೇಕೆ? ಹಾಸ್ಟೆಲ್‌ಗಳಲ್ಲಿ scholarship ಗಳನ್ನು ಕೊಡುತ್ತಾರೆ. ಅದನ್ನಾದರೂ ಸರಿಯಾಗಿ ಕೊಡುತ್ತಿದ್ದಾರೆಯೇ?? ಬಡ ವಿದ್ಯಾರ್ಥಿಗಳ ದುಡ್ಡನ್ನು ತಿನ್ನುತ್ತಾ ಕುಳಿತಿದ್ದಾರೆ. ಬಡವರ ಮಕ್ಕಳ ಅನ್ನವನ್ನೇ ಇವರುಗಳು ತಿಂದಿದ್ದಾರೆ. ಇದನ್ನು ನಡೆಸುವುದಕ್ಕೆ ನಾಲ್ಕು ಇಲಾಖೆಗಳು ಬೇಕೆ? ನಾಲ್ಕು ಜನ senior IAS officers, ಅಂದರೆ ನಾಲ್ಕು ಜನ ಪ್ರಧಾನ ಕಾರ್ಯದರ್ಶಿಗಳು. ಇದಕ್ಕೆ ಏನು ಮಾಡುವುದು? ಎಷ್ಟು ಹಣ ಖರ್ಚಾಗುತ್ತಿದೆ? ಇವರುಗಳಿಗೆ ಸಂಬಳ ಎಷ್ಟು?

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ಸಭಾಪತಿಯವರೇ, ತಾವು ದೇವರಾಜ ಅರಸುರವರ ಕಾಲದಲ್ಲಿ ಶಾಸಕರಾಗಿದ್ದಾಗ ಮುಖ್ಯ ಇಂಜಿನಿಯರ್‌ಗಳು ಈ ರಾಜ್ಯದಲ್ಲಿ ಎಷ್ಟು ಜನರಿದ್ದರು ಹಾಗೂ ಈಗ ಎಷ್ಟು ಮುಖ್ಯ ಇಂಜಿನಿಯರ್‌ಗಳಿದ್ದಾರೆ ಎಂಬುದನ್ನೂ ಸಹ ಸ್ವಲ್ಪ ಹೇಳಿ. ದಯಮಾಡಿ ಹೇಳಿ. ನೂರು ಪಟ್ಟು ಜಾಸ್ತಿ ಆಗಿ ಹೋಗಿದೆ. ಒಬ್ಬರು ಇದ್ದರು, ಈಗ 100 ಸಂಖ್ಯೆಯ ಮೇಲೆ ಹೋಗಿದೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ನೀವು ಎದ್ದರೆ ನಮಗೆಲ್ಲಾ ಒಂದು ರೀತಿಯ ಭಯ ಉಂಟಾಗುತ್ತದೆ. ಇರಲಿ. ಎಷ್ಟು ಜನರು ಸೀನಿಯರ್ ಆಫೀಸರ್‌ಗಳು ಇದ್ದೀರಿ, ಏನು ಕೆಲಸವನ್ನು ಮಾಡುವುದಕ್ಕೆ ಇದ್ದೀರಪ್ಪ ನೀವು? ಮತ್ತೆ ಇದನ್ನು ಯಾರು ನೋಡುವುದು? What the DPAR is doing? DPAR is under the control of the Chief Minister. ಯಾರು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡುವವರು? ಮತ್ತೆ ಈಗ ಬಜೆಟ್‌ನಲ್ಲಿ ಓದಿದ್ದೇನೆ. RDPR ಇಲಾಖೆಗೆ ಸಂಬಂಧಿಸಿದಂತೆ ಮೂರು ವಿಭಾಗ ಇದ್ದದ್ದನ್ನು ಈಗ ಒಂದು ಮಾಡಿದ್ದಾರೆ. ಕುಡಿಯುವ ನೀರು, ಆಮೇಲೆ ರಸ್ತೆ ಹಾಗೂ ಗ್ರಾಮೀಣ ರಸ್ತೆ ಎಂದು ಮಾಡಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತಾಲ್ಲೂಕಿಗೆ ಒಬ್ಬರು Assistant Executive Engineer ಇರುತ್ತಿದ್ದರು, ಅದು Public Health Engineering Department ಎಂದು ಆಗಿತ್ತು, ಅದಕ್ಕೆ ಒಬ್ಬರೇ ಇರುತ್ತಿದ್ದರು, ಇವತ್ತು ಕುಡಿಯುವ ನೀರಿಗೆ ಅಂದರೆ RWSಗೆ ಒಬ್ಬರು ಇದ್ದಾರೆ, PMGSY ಗೆ ಒಬ್ಬರು ಇದ್ದಾರೆ. PRED ಗೆ ಒಬ್ಬರು ಇದ್ದಾರೆ. ಈ ರೀತಿ ಒಂದು ಹೋಗಿ ಮೂರು ಆಗಿವೆ. ಮಾನ್ಯ ಮರಿತಿಬ್ಬೇಗೌಡರು ಕೇಳಿದರು. ಮುಖ್ಯ ಇಂಜಿನಿಯರ್ ಎಷ್ಟು ಜನರು ಇದ್ದರು ಎಂದು ಕೇಳಿದರು. ಲೋಕೋಪಯೋಗಿ ಇಲಾಖೆಗೆ ಒಬ್ಬರೇ ಇದ್ದರು. ಆಗ ಲೋಕೋಪಯೋಗಿ, ವಿದ್ಯುಚ್ಛಕ್ತಿ ಮತ್ತು ನೀರಾವರಿ ಇಲಾಖೆ ಒಂದೇ ಇತ್ತು.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಈಗ ನೀವು ಹೇಳಿದ ಹಾಗೆ ಆ ಮೂರನ್ನೂ ಸೇರಿ ಒಂದೇ ಮಾಡಿ. ಇವೆಲ್ಲಾ ಬಿಟ್ಟು RDPR ಗೆ ಏಕೆ ಹೋದರು? ಇದು ಏನು ಶಿವಮೊಗ್ಗದ ಗಲಾಟೆನಾ? ಇದೆಲ್ಲಾ ಬಿಟ್ಟು ಅದಕ್ಕೆ ಏಕೆ ಹೋದರು? ಇರಲಿ, it is good and welcome it. So, ಈ ರೀತಿಯ ಬೇರೆ-ಬೇರೆ ಇಲಾಖೆಗಳನ್ನು ತಾವು ಕ್ರೋಢೀಕರಿಸಬೇಕಾಗುತ್ತದೆ. ದುಂದುವೆಚ್ಚವನ್ನು ಕಡಿಮೆ ಮಾಡಬೇಕಾಗುತ್ತದೆ. ಅನಾವಶ್ಯಕ ವೆಚ್ಚಗಳನ್ನು ತಾವು ಕಡಿಮೆ ಮಾಡುತ್ತಾ ಹೋಗಬೇಕಾಗುತ್ತದೆ. ನಮ್ಮಲ್ಲಿ GVK Rao report ಇದೆ. GVK Rao ಏನು ಹೇಳಿದ್ದಾರೆ ಎಂದರೆ, ಈ ಬೋರ್ಡ್ಸ್ ಮತ್ತು ಕಾರ್ಪೊರೇಷನ್‌ಗಳು ಬೇಕೇ ಬೇಡವೇ? ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳನ್ನು ತೆಗೆದುಕೊಂಡು ಏನು ಮಾಡುತ್ತೀರಿ? ಅದು ಏನೋ dispose ಮಾಡಿ, ಅದರಿಂದ ಬಂದಿದ್ದನ್ನು ಬೇರೆಯುದ್ದಕ್ಕೆ investment ಮಾಡಿ, re-investment it. 80 ಅಥವಾ 100 ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳಿವೆ. ಎಲ್ಲಾ ಕ್ಯಾಬಿನೆಟ್ ರ್‍ಯಾಂಕಿಂಗ್‌ನವು. ಏನು ಸ್ವಾಮಿ! ಆ ಕ್ಯಾಬಿನೆಟ್‌ಗೆ ಏನಾದರೂ ಒಂದು ಗೌರವ ಬೇಡವೇ? ಎಲ್ಲರೂ Cabinet Minister, Deputy Chief Minister ಆದರೆ ಹೇಗೆ? ಅವರು ಕ್ಯಾಬಿನೆಟ್ ರ್‍ಯಾಂಕ್ ಅಂದರೆ ಹೇಗೆ? ನೀವು ವೆಚ್ಚ ಹೇಗೆ ಕಡಿಮೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದು? ನೂರಾರು ಜನರಿಗೆ ನೀವು ಕ್ಯಾಬಿನೆಟ್ ರ್‍ಯಾಂಕಿಂಗ್ ಕೊಟ್ಟರೆ, Private Secretary, Gun Man, ಅವರು-ಇವರು, ಹೀಗೆ ಮಂತ್ರಿ ರೀತಿಯಲ್ಲಿಯೇ ಕೊಟ್ಟುಬಿಟ್ಟರೆ ಏನು ಕೆಲಸ ಇದೆ ಅವರಿಗೆ? ಅವರಿಂದ ಏನು productivity ಇದೆ? ಸಾಲ ಮಾಡುತ್ತಾ ಹೋಗುವುದಾ? administrative reforms, ಮಾನ್ಯ ಎ.ಟಿ.ರಾಮಸ್ವಾಮಿಯವರ ಸಮಿತಿಯ ವರದಿಯಿದೆ. How to reduce the expenditure? ಸರ್ಕಾರ ಏಕೆ ಅದನ್ನೆಲ್ಲಾ ತೆಗೆದು ನೋಡುತ್ತಿಲ್ಲ? ನಾನು ನಮ್ಮ ಸರ್ಕಾರವನ್ನಷ್ಟೇ ಹೇಳುತ್ತಿಲ್ಲ. ಹಿಂದಿನ ಸರ್ಕಾರಗಳು ಏಕೆ ಅದನ್ನು ತೆಗೆದು ನೋಡಲಿಲ್ಲ? ಮಾನ್ಯ ಸಿದ್ದರಾಮಯ್ಯನವರು ದೊಡ್ಡ ಆರ್ಥಿಕ ತಜ್ಞರು ಎಂದು ಹೇಳುತ್ತಾರೆ. "ಏಕಪ್ಪ ಅವರು ಅದನ್ನು ತೆಗೆದು ನೋಡಲಿಲ್ಲ? ನಿಮ್ಮ ಕಾಲದಲ್ಲಿಯೂ ಇದೇ ತಾನೇ? ನೀವು ಮಾನ್ಯ ಸಿದ್ದರಾಮಯ್ಯನವರು, ಮಾನ್ಯ ಯಡಿಯೂರಪ್ಪನವರು, ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಎಲ್ಲರೂ ಏನೆಲ್ಲಾ ಬಜೆಟ್ ಓದುತ್ತಲೇ ಇರುತ್ತೀರಿ, ನಾವು ಓದುತ್ತಲೇ ಇರುತ್ತೇವೆ. ತಾಲ್ಲೂಕು ಕಚೇರಿಯಲ್ಲಿ ಲಂಚ ತೆಗೆದುಕೊಳ್ಳುವುದು ನಿಂತಿದೆಯೇ? ದುಡ್ಡು ಕೊಡದೇ ಮುನಿಸಿಪಾಲಿಟಿಯಲ್ಲಿ ಖಾತೆಗಳನ್ನು ಮಾಡಿಕೊಡುವುದು ನಿಂತಿದೆಯೇ? ಇಷ್ಟೆಲ್ಲಾ ದೊಡ್ಡ ದೊಡ್ಡ ಆರ್ಥಿಕ ತಜ್ಞರು ನೀವೆಲ್ಲರೂ ಇದ್ದೀರಿ. ಏನೆಲ್ಲಾ ಇದೆ. ನಾವೆಲ್ಲರೂ ಸೇರಿಕೊಂಡು ಸಾಮಾನ್ಯ ಜನರ ಕಷ್ಟ ತಪ್ಪಿಸಿದ್ದೇವೆಯೇ? ಇಲ್ಲವಲ್ಲಾ.

**ಶ್ರೀ ಮರಿತಿಬ್ಬೇಗೌಡರು:-** ಮಾನ್ಯ ವಿಶ್ವನಾಥ್ ಸಾಹೇಬರೆ, ಒಂದು ತಪ್ಪಾಗಿದೆ. ನಿಮ್ಮನ್ನು ಮಂತ್ರಿಯನ್ನಾಗಿ ಮಾಡದೇ ಇರುವುದು ತಪ್ಪಾಗಿದೆ. ಇಷ್ಟೆಲ್ಲಾ ಆರ್ಥಿಕ ತಜ್ಞರಾದಂತಹ ನಿಮ್ಮನ್ನು ಈ ಸರ್ಕಾರ ಮಂತ್ರಿ ಮಾಡದೇ ಇರುವುದು.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಗೌಡರೆ, ನಾನು ಮಂತ್ರಿಗಿರಿ ಮಾಡಿದ್ದೇನೆ. ಮಂತ್ರಿಗಿರಿಯನ್ನು ಕೆಂಗಲ್ ಹನುಮಂತಯ್ಯನವರು ಕಟ್ಟಿದ ವಿಧಾನಸಭೆಯಲ್ಲಿ ನನ್ನ ಹೆಜ್ಜೆಯ ಗುರುತುಗಳನ್ನು ಇವತ್ತಿಗೂ ಬಿಟ್ಟಿದ್ದೇನೆ. ನಾನು ಈ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ದೊಡ್ಡ ಕ್ರಾಂತಿ ಮಾಡಿದ್ದೇನೆ. ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ we are the pioneers in the whole Nation. ಯಾವುದೇ ರಾಜ್ಯದಲ್ಲಿಯೂ ಇಲ್ಲ ಸ್ವಾಮಿ. UNICEF grant ತೆಗೆದುಕೊಂಡು ಬಂದು ಎರಡು ವರ್ಷಗಳಲ್ಲಿ 42 ಸಾವಿರ ಸರ್ಕಾರಿ ಶಾಲೆಗಳನ್ನು ಅಳತೆ ಮಾಡಿಸಿ, ಬೌಂಡರಿ ಫಿಕ್ಸ್ ಮಾಡಿಸಿ, ಪ್ರತಿ ಊರಿನಲ್ಲಿಯೂ ಕಾಂಪೌಂಡ್ ಹಾಕಿಸಿದ್ದೇವೆ. ಕುಡಿಯುವ ನೀರು, ಶೌಚಾಲಯ, ಮಕ್ಕಳಿಗೆ ಬಿಸಿಯೂಟ ಕೊಟ್ಟಿದ್ದೇವೆ. We have innovative programmes and it was

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

implemented effectively in the State. ರಾಜ್ಯದಲ್ಲಿ ಮಾಡಿದ್ದೇವೆ. ಬಹಳಷ್ಟು ಕೆಲಸಗಳನ್ನು ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ total employees ಎಷ್ಟು ಇದ್ದಾರೆ? Total employees 7 ಲಕ್ಷ ಸಂಖ್ಯೆ ಅಂದಾಜು ಇರುವುದೆಷ್ಟು? 5 ಲಕ್ಷ ಜನರು ಇದ್ದಾರೆ, 2 ಲಕ್ಷ ಸಂಖ್ಯೆ ಖಾಲಿಯಿದೆ ಎಂದು ರಿಪೋರ್ಟ್ ಹೇಳುತ್ತದೆ. 5 ಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ. ಇನ್ನು ಉಳಿದ 2 ಲಕ್ಷ ಸಂಖ್ಯೆ ಖಾಲಿಯಿವೆ ಎಂದು ರಿಪೋರ್ಟ್ ಹೇಳುತ್ತದೆ.

**(ಮುಂದು)**

(362) 10.03.2021, 12.40. KG.RN

**ಶ್ರೀ ಅಡಗೂರು ಹೆಚ್.ವಿಶ್ವನಾಥ್(ಮುಂದು):-**

ನಮ್ಮ ರಾಜ್ಯದಲ್ಲಿ ಬಹಳಷ್ಟು ಕೆಲಸಗಳನ್ನು ಮಾಡಿದ್ದೇವೆ. ಈಗ ನಮ್ಮ ರಾಜ್ಯದಲ್ಲಿ ಸುಮಾರು ಏಳು ಲಕ್ಷ ಜನ employees ಇರಬಹುದು. ಅದರಲ್ಲಿ ಐದು ಲಕ್ಷ ಜನ employees ಕೆಲಸ ಮಾಡುತ್ತಿದ್ದಾರೆ. ಎರಡು ಲಕ್ಷ ಹುದ್ದೆಗಳು ಖಾಲಿ ಇವೆ ಎಂದು ವರದಿ ಹೇಳುತ್ತದೆ. ಇದರಲ್ಲಿ IAS officers ರವರಿಂದ ಹಿಡಿದು clerks ರವರೆಗೆ ಮೂರು ಲಕ್ಷ ಜನ ಪಿಂಚಣಿದಾರರು ಇದ್ದಾರೆ. ಸುಮಾರು ಒಂದೂವರೆ ಲಕ್ಷ ಜನ ನೌಕರರನ್ನು outsource ನಿಂದ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರವರು, Education Department ರವರು, ಶ್ರೀ ಎಸ್.ವಿ.ಸಂಕನೂರರವರು, ಶ್ರೀ ಸುಶೀಲ್ ಜಿ.ನಮೋಶಿರವರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಹೊರಗುತ್ತಿಗೆ contractors ಅಂದರೆ ಯಾರು? ನಿಮ್ಮ retired ಹಾಲಿ IAS ಅಧಿಕಾರಿಗಳ ಬಾಮೈದರು, ಅಳಿಯಂದಿರು, ಸಂಬಂಧಿಕರು contractor ದಾರರಾಗಿದ್ದಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಅಧಿಕಾರಿಗಳ ಪತ್ನಿಯರು ಮತ್ತು ಉಪ ಪತ್ನಿಯರು ಇದ್ದಾರೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಅದರಲ್ಲಿ ಮಾಜಿ ಸಚಿವರು ಇದ್ದಾರೆ. ಹಾಲಿ ಸಚಿವರು ಇದ್ದಾರೆ. ಶಾಸಕರ ಬಾಮೈದರು ಇದ್ದಾರೆ. ಸರ್ಕಾರ ಒಬ್ಬ ಹೊರಗುತ್ತಿಗೆ ನೌಕರನಿಗೆ ತಿಂಗಳಿಗೆ ರೂ.15,000/- ಗಳು ವೇತನ ಕೊಡಬೇಕೆಂದು ಇದೆ. ಆದರೆ, ಅವರಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗುತ್ತಿಗೆದಾರರು ಸುಮಾರು ರೂ.7,000/– ರಿಂದ ರೂ.8,000/– ಗಳ ವೇತನ ಕೊಡುತ್ತಿದ್ದಾರೆ. ಇದರಿಂದ ಎಷ್ಟು ಹಣ ಅವರಿಗೆ ಹೋಗುತ್ತಿದೆ ಹೇಳಿ? ಸಾಮಾಜಿಕ ನ್ಯಾಯವೆಂದರೆ, ನೀನು ತಿನ್ನು, ನಾನು ತಿನ್ನುತ್ತೇನೆಂದು ಆಯಿತು. ಅಲ್ಲವೇ ಮಾನ್ಯ ಗೋವಿಂದ ಕಾರಜೋಳರವರೇ, ಇದರಲ್ಲಿ ಯಾವುದೇ reservation ಇಲ್ಲ. ಸುಮಾರು ಒಂದೂವರೆ ಲಕ್ಷ ಜನ ಹೊರಗುತ್ತಿಗೆ ನೌಕರರಲ್ಲಿ ಯಾವ reservation ಇಲ್ಲ. ಮೀಸಲಾತಿಯನ್ನು ಹೊಡೆದುಕೊಳ್ಳುತ್ತಿದ್ದೇವೆ. ಯಾರೋ ತಿಂದು ಹೋಗುತ್ತಿದ್ದಾರೆ. ಇಲಾಖೆಯಲ್ಲಿ ಎಷ್ಟು ನೌಕರರನ್ನು ಇಟ್ಟುಕೊಳ್ಳಬಹುದು? ಅಷ್ಟು ಜನ ನೌಕರರು ಇಲ್ಲ ಏಕೆ? ಮೂರು ಲಕ್ಷ ಜನ pension holders ಇದ್ದಾರೆ. ಒಬ್ಬ retired IAS officer ರವರ pension ಎಷ್ಟು ಗೊತ್ತಾ? ಸುಮಾರು ರೂ.1,10,000/–ಗಳ ಪಿಂಚಣಿ ಇದೆ. Fifty of the salary ಅನ್ನು pension ಕೊಡುತ್ತಿದ್ದೇವೆ. ನಾವು ಅವರ man power ಏಕೆ ಉಪಯೋಗಿಸಿಕೊಳ್ಳುತ್ತಿಲ್ಲ? ಸರ್ಕಾರ DPAR ಕಡೆಗೆ ಏಕೆ ಗಮನ ಹರಿಸಿಲ್ಲ? ಸರ್ಕಾರ ಇವರ ಅನುಭವವನ್ನು ಏಕೆ ಉಪಯೋಗಿಸಿಕೊಳ್ಳಬಾರದು? ಸರ್ಕಾರ ಅವರಿಗೆ ಸುಮ್ಮನೆ pension ಕೊಟ್ಟುಬಿಟ್ಟು ಕುಳಿತುಬಿಡುವುದೇ? Finance Department Manual ಏನು ಹೇಳುತ್ತದೆ? Pension ವಿಚಾರದಲ್ಲಿ Pension is subject to the availability of the funds in the Treasury ಎಂದು ಹೇಳುತ್ತದೆ. Pension ಕೊಡುವುದಕ್ಕೆ ಹಣ ಇದೆಯೇ? Financial Manual says this. ನಮ್ಮಲ್ಲಿ ಬಹಳ ಜನರು Manual ಅನ್ನು ಓದುವುದಕ್ಕೂ ಹೋಗುವುದಿಲ್ಲ. ಅದನ್ನು ತಿಳಿದುಕೊಳ್ಳುವುದಕ್ಕೂ ಹೋಗುವುದಿಲ್ಲ. ಮೂರು ಲಕ್ಷ ಜನ pension holders ಇದ್ದಾರೆ. ನಾವು ಏಕೆ ಅವರನ್ನು ಉಪಯೋಗಿಸಿಕೊಳ್ಳಬಾರದು?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಬೇಕಾಗಿದೆ. ಇದನ್ನು ಎಲ್ಲಾ ಸರ್ಕಾರಗಳು ಮಾಡಿಕೊಂಡು ಬಂದಿವೆ. ಆದರೆ, ಈ ಸರ್ಕಾರದಲ್ಲಿ ಜಾಸ್ತಿಯಾಗುತ್ತಿದೆ. ಈ ಸರ್ಕಾರ ಜಾತಿಗೊಂದು ನಿಗಮವನ್ನು ಮಾಡುತ್ತಿದೆ. ಅದಕ್ಕೆಲ್ಲಾ ಅಧಿಕಾರಿಗಳು, ಸವಲತ್ತುಗಳು, ಕಾರುಗಳು, ಪೆಟ್ರೋಲ್, ನೌಕರರನ್ನು ಕೊಡಬೇಕು ಅಲ್ಲವೇ; ಈ ಸರ್ಕಾರದಲ್ಲಿ ಉಳಿದ ಎಲ್ಲಾ ಜಾತಿಗಳಿಗೂ ಸಹ ನಿಗಮಗಳನ್ನು ಮಾಡಲು ಪ್ರಾರಂಭ ಮಾಡಿದೆ. ಅದರ ಬಗ್ಗೆಯೂ ಮಾನ್ಯ ಸದಸ್ಯರು ಮಾತನಾಡಬೇಕು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ, ಮಾನ್ಯ ಸದಸ್ಯರಿಗೆ ಏನೇನು ಸಾಹಸ ಗೊತ್ತಿದೆ, ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಅವರು ಯಾರ್‍ನಾದರೂ ಕೆಡವಿಕೊಳ್ಳಲಿ. ನನ್ನ ಅಭ್ಯಂತರ ಇಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶಿಕ್ಷಣ ಇಲಾಖೆಯಲ್ಲಿ ಒಂದು ದೊಡ್ಡ ಅವಿಷ್ಕಾರ ಮಾಡಿದವರು. ಅವರು ಬಹಳ ಹಿರಿಯರು ಮತ್ತು ಬಹಳ ವಿಚಾರವಂತರು. ಅದಕ್ಕೆ ಅವರೇ ಈ ಸರ್ಕಾರಕ್ಕೆ ಬೆಳಕು ಚೆಲ್ಲುವಂತಹ ಕೆಲಸ ಮಾಡಿ ಮಾರ್ಗದರ್ಶನವನ್ನು ನೀಡಬೇಕೆಂದು ಕೇಳುತ್ತೇನೆ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ನಾನು ಅಧಿಕಾರವನ್ನು ಮಾಡಲಿಲ್ಲ. ನಾನು ನನ್ನ ಜವಾಬ್ದಾರಿಯನ್ನು ನಿರ್ವಹಿಸಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ದೊಡ್ಡವರಲ್ಲವೇ.,

**ಶ್ರೀ ಅಡಗೂರು ಹೆಚ್.ವಿಶ್ವನಾಥ್:–** ಮಾನ್ಯ ಸಭಾಪತಿಯವರೇ, ಅವರು, ನಾವು, ನಮ್ಮ ಮೇಲಿರುವವರು ಯಾರಾದರೂ ಅಧಿಕಾರ ಮಾಡುತ್ತಿದ್ದೇವೆಂದರೆ, ನಮ್ಮಂತಹ ಮೂರ್ಖರಿಲ್ಲ. ನಮಗೆ ಜನ ಕೊಟ್ಟಂತಹ ಜವಾಬ್ದಾರಿಯನ್ನು ಜತನದಿಂದ ನಿರ್ವಹಿಸುತ್ತಿದ್ದೇವೆ ಅಷ್ಟೇ, ಅಧಿಕಾರ ಅಲ್ಲ. democracy ಏಕೆ ಈ ರೀತಿ ಆಗಿದೆ? ಒಂದು ಸಣ್ಣ ವ್ಯತ್ಯಾಸ. ಅಧಿಕಾರ ಮತ್ತು ಜವಾಬ್ದಾರಿ ನಡುವಿನ ಒಂದು ಸಣ್ಣ ವ್ಯತ್ಯಾಸದಿಂದ ಎಷ್ಟೋ ಅನಾಹುತವಾಗುತ್ತಿದೆ. ಖಾಯಂ ನೌಕರರು ಸಂಬಳ ತೆಗೆದುಕೊಳ್ಳುತ್ತಾರಂತೆ, ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಾರಂತೆ ಎಂದು ವಿಧಾನಸೌಧದಲ್ಲಿ ಗಾದೆ ಮಾತಿದೆ. ಖಾಯಂ ನೌಕರರು ಸಂಬಳ ತೆಗೆದುಕೊಂಡು ಹೊರಗುತ್ತಿಗೆ ನೌಕರರ ಕೈಯಲ್ಲಿ ದುಡಿಸುತ್ತಾರೆ.

ಮಾನ್ಯ ಸಭಾಪತಿಯವರೇ, ನಾನು “ಹಳ್ಳಿ ಹಕ್ಕಿ” ಹಾಡಿನ ಪುಸ್ತಕದಲ್ಲಿ ವಿಧಾನಸೌಧದ ಬಗ್ಗೆ ಬರೆದಿದ್ದೇನೆ. ವಿಧಾನಸೌಧ ಸದಾ ಸುಂದರಿ. ಈ ಸುಂದರಿಗೆ ಮಾರು ಹೋಗದವರೆ ಇಲ್ಲ. ಬಹಳಷ್ಟು ಜನರು ಶಾಸಕ, ಮಂತ್ರಿಯಾಗಬೇಕೆಂದು ಊರಿನಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಿಕೊಂಡು ಇಲ್ಲಿಗೆ ಬರುತ್ತಾರೆ. ಕೊನೆಗೆ ಇಲ್ಲಿ ಏನೂ ಆಗದೆಯೇ, ಇಲ್ಲಿ ಪಿಶಾಚಿಗಳ ತರಹ ಇಲ್ಲಿಯೇ ಸುತ್ತುತ್ತಿರುತ್ತಾರೆ. ನಮ್ಮ ಕಡೆ ಅಷ್ಟಿಲ್ಲ. ಮಾನ್ಯ ಮರಿತಿಬ್ಬೇಗೌಡರವರೇ, ಉತ್ತರ ಕರ್ನಾಟಕದ ಕಡೆಯಿಂದ ಮನೆ, ಮಠ, ಹೊಲವನ್ನು ಮಾರಾಟ ಮಾಡಿಕೊಂಡು ಬರುತ್ತಾರೆ. ಇಲ್ಲಿ ಅವರಿಗೆ ಯಾರೋ ಎಂ.ಎಲ್.ಎ ಮಾಡುತ್ತೇನೆ, ಮಂತ್ರಿ ಮಾಡುತ್ತೇನೆಂದು ಟೋಪಿ ಹಾಕುತ್ತಾರೆ. ಹಾಗಾಗಿ, ಪಾಪ ಅವರ ಪ್ರೇತಾತ್ಮಗಳು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಇಲ್ಲಿಯೇ ಸುತ್ತಾಡುತ್ತಾ ಇರುತ್ತವೆ. ಈ ವಿಧಾನಸೌಧ ಅಂತಹ ಸುಂದರಿ. ಮಾನ್ಯ ಕೆಂಗಲ್ ಹನುಮಂತಯ್ಯನವರು ವಿಧಾನಸೌಧವನ್ನು ಕಟ್ಟಿದ್ದಾರೆ.

**ಶ್ರೀಮತಿ ಭಾರತಿಶೆಟ್ಟಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸುಂದರ ಅಥವಾ ಸುಂದರಿ ಯಾವುದು ಎಂಬುದನ್ನು ಸ್ಪಷ್ಟಪಡಿಸಬೇಕು.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಅವರಿಗಿಂತ ಯಾರು ಸುಂದರಿಯರು ಇದ್ದಾರೆ? it is a good comment. ನಮ್ಮ ಹೆಣ್ಣು ಮಗಳು.

**(ಸದನದಲ್ಲಿ ನಗೆಯ ಅಲೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮೊದಲಿಗೆ ಮಾರು ಹೋದವರು ಮಾನ್ಯ ವಿಶ್ವನಾಥ್‌ರವರೇ?

**ಶ್ರೀಮತಿ ಭಾರತಿಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಮಗಿಂತಲೂ ಮೊದಲೇ ಅವರೇ ಮಾರು ಹೋಗಿದ್ದಾರೆಯೇ?

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಮಾರಿ ಹೋಗಿದ್ದನ್ನು ನಾನು ಹಿಡಿದು ನನ್ನ ಪುಸ್ತಕದಲ್ಲಿ ಬರೆದಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಸುತ್ತುತ್ತಿರುವ ಪಿಶಾಚಿಗಳಿಗೆ ಪಿಂಡ ಪ್ರದಾನ ಮಾಡದಿದ್ದರೆ ಅವು ಒಳಗೆ ಹೋಗುವುದಿಲ್ಲ.

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಹತ್ತಿರ ಯಾರು ಸಿಗುವುದಿಲ್ಲ. ನಮ್ಮ ಹತ್ತಿರ ಆಚೆಕಡೆ ಸಿಗುತ್ತಾರೆ. ಅವರು ನಮಗೆ ಮೊದಲು ಸರ್ ಎನ್ನುತ್ತಾರೆ. ನಾವು ಏನಪ್ಪ ಅಂದಾಗ, ನಾನು ಗಜಯೋಗದಲ್ಲಿ ಹುಟ್ಟಿದ್ದೇನೆ. ಹಾಗಾಗಿ, ಒಂದಲ್ಲ ಒಂದು ದಿವಸ ವಿಧಾನಸೌಧದ 3ನೇ ಮಹಡಿಯಲ್ಲಿ ಕುಳಿತುಕೊಳ್ಳುತ್ತೇನೆ. ಈಗ ತಕ್ಷಣಕ್ಕೆ 500 ರೂಪಾಯಿ ಇದ್ದರೆ ಕೊಡಿ ಎಂದು ಕೇಳುತ್ತಾರೆ. ಈ ವಿಧಾನಸೌಧದಲ್ಲಿ ಅಂತಹವರೆಲ್ಲರೂ ಸಿಗುತ್ತಾರೆ. ನಾನು ಮತ್ತು ಕೃಷ್ಣ ಸಾಹೇಬರು ಯಾವುದೋ ಒಂದು ಕಾರ್ಯಕ್ರಮಕ್ಕೆ ಹೋಗಿ ಮತ್ತೆ ವಾಪಸ್ ಬಂದು ಕಾರಿಗೆ ಹತ್ತುವಾಗ ಒಬ್ಬ ಬಂದು, ನನ್ನನ್ನು ಏನಯ್ಯ ವಿಶ್ವನಾಥ ಏಕೆ ಇವರ ಜೊತೆಯಲ್ಲಿ ಸೇರಿಕೊಂಡಿದ್ದೀಯಾ ಎಂದು ಕೇಳಿದ, ಅದಕ್ಕೆ ನಾನು ಯಾಕಪ್ಪ ಎಂದು ಕೇಳಿದ್ದಕ್ಕೆ, ಓಹೋ ಹೀಗೆ ಅವರ ಜೊತೆಯಲ್ಲಿ ಹೋಗುತ್ತೀರಿ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದಲ್ಲ ಒಂದು ದಿವಸ ವಿಧಾನಸೌಧವನ್ನು ಮಾರಿಕೊಂಡು ಬಿಡುತ್ತೀರಿ ಅಂದುಬಿಟ್ಟ, ನಾನು ಕಾರಿನಲ್ಲಿ ಕುಳಿತುಕೊಂಡೆ. ಆಗ ಕೃಷ್ಣ ಸಾಹೇಬರು who is this? ಎಂದರು. ನಾನು ಅದಕ್ಕೆ ಅವನು ತೀರ್ಥಹಳ್ಳಿ ಕಡೆಯವನು, ಹೀಗೆ ಏನೇನೂ ಹೇಳುತ್ತಿರುತ್ತಾನೆಂದು ಹೇಳಿದೆ. ಅವನ ಹೆಸರು ಹರಿಶ್ಚಂದ್ರ. ಅದಕ್ಕೆ ಕೃಷ್ಣ ಸಾಹೇಬರು ಅವನು ಏನೇನೂ ಹೇಳುತ್ತಿದ್ದಾನೆಂದು ಕೇಳಿದರು. ಅದಕ್ಕೆ ನಾನು ಹೌದು ಸರ್, ಅವನು ಅಗಾಗ ಸತ್ಯವನ್ನು ಹೇಳಿಕೊಂಡು ತಿರುಗುತ್ತಿರುತ್ತಾನೆಂದು ಹೇಳಿದೆ. ಹಾಗಾಗಿ, ಈ ವಿಧಾನಸೌಧ ಸಾದಾ ಸುಂದರಿ. ಮಾನ್ಯ ಕೆಂಗಲ್ ಹನುಮಂತಯ್ಯನವರ ಆಡಳಿತದ ನಾಡುಗುಡಿ ಇವತ್ತು mall ಆಗಿದೆ. ಈ ಪುಸ್ತಕವನ್ನು 2005ನೇ ಸಾಲಿನಲ್ಲಿ ಬರೆದಿದ್ದೇನೆ. It is a mall. ಇಲ್ಲಿ ಏನು ಬೇಕಾದರೂ ಕ್ರಯ ಮಾಡಬಹುದು, ಏನೂ ಬೇಕಾದರೂ ಮಾರಾಟ ಮಾಡಬಹುದು, ಕೊನೆಗೆ ನಮ್ಮ ಕನ್ನಡವನ್ನು ಇಲ್ಲಿ ಮಾರಾಟ ಮಾಡಬಹುದು. ಇಲ್ಲಿ ಏನು ಬೇಕಾದರೂ ಮಾಡಬಹುದು. It is a mall. ನಾವೆಲ್ಲರೂ ಸೇರಿ ಇಂತಹ ಒಂದು ಪರಿಸ್ಥಿತಿಗೆ ತಂದುಬಿಟ್ಟಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, mall ನಲ್ಲಿ ಎಲ್ಲವೂ ಸಿಗುತ್ತದೆ ಅಂತ ಆಯಿತು ಅಲ್ಲವೇ;

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ನಾವು ಎಂ.ಎಲ್.ಎ.,ಗಳು, ಎಂ.ಎಲ್.ಸಿ.,ಗಳು, ಎಂ.ಪಿ.,ಗಳು ಇದ್ದೇವೆ. ಜಿಲ್ಲಾ ಪಂಚಾಯಿತಿಗಳು ಇವೆಲ್ಲವೂ ಇವೆ. ನಾವೇನು ಮಾಡುತ್ತಿದ್ದೇವೆ?

**(ಮುಂದು)**

**(363)10-03-2021 ಎಂವಿ-ವಿಕೆ 12-50**

**ಶ್ರೀ ಅಡಗೂರು ಹೆಚ್. ವಿಶ್ವನಾಥ್(ಮುಂದು):-**

ಸುಮಾರು ಆರೂವರೆ ಕೋಟಿ ಜನರು, ಈ ಏಳು ಲಕ್ಷ ಜನ ನೌಕರರ ಮತ್ತು ಅಧಿಕಾರಶಾಹಿಗಳ ಜೀತ ಮಾಡುತ್ತಿದ್ದೇವೆ. ಇಲ್ಲಿಗೆ ಬರುವಂತಹವರು ಯಾರು? ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಸದನದಲ್ಲಿ ಭಾಷಣ ಮಾಡುವಾಗ ನಾನು ಅವರಿಗೆ ಹೇಳಿದೆ, ಮಾನ್ಯ ಕುಮಾರಸ್ವಾಮಿಯವರೆ, ಮಧ್ಯಾಹ್ನ 12.00 ಗಂಟೆಯ ನಂತರ ಎರಡೂ ಸೌಧಗಳ ಮತ್ತು ಎಂ.ಎಸ್.ಬಿಲ್ಡಿಂಗ್‌ನ ಬಾಗಿಲುಗಳನ್ನು ಹಾಕಿಸಿ. ಇಲ್ಲಿಗೆ ಏಕೆ ಬಂದಿದ್ದೀರಿ ಎಂದು ಒಬ್ಬೊಬ್ಬರನ್ನಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಗಡೆಗೆ ಬಿಡಿ. ಅಲ್ಲಿ ಕೇವಲ ದಳ್ಳಾಳಿಗಳೇ ಇರುತ್ತಾರೆ. ಏಕೆಂದರೆ, ವರ್ಗಾವಣೆ ಇಲ್ಲವೇ ಮತ್ತೇನೋ ಇರುತ್ತದೆ. ಅವರು ನಮ್ಮ ಹತ್ತಿರಕ್ಕೆ ಬಂದು, 'ಸರ್, ನಾನು ನೂರು ಬೋರ್‌ವೆಲ್‌ಗಳ ಕಂಟ್ರಾಕ್ಟ್ ತೆಗೆದುಕೊಂಡಿದ್ದೇನೆ ಅದಕ್ಕೆ ನೂರು ಬೋರ್‌ವೆಲ್‌ಗಳನ್ನು ಕೊರೆಯಿಸಿಕೊಡಿ' ಎಂದು ಕೇಳುತ್ತಾರೆ. ಅಲ್ಲಿ ಯಾರಾದರೂ ನಮ್ಮ ಊರಿಗೆ ಒಂದು ಬೋರ್‌ವೆಲ್ ಹಾಕಿಸಿ ಮತ್ತು ರಸ್ತೆ ಮಾಡಿಸಿ ಎಂದು ಕೇಳುವುದಿಲ್ಲ. ಅವರು ಕೇವಲ ವರ್ಗಾವಣೆ, dismissal, suspension, ಕೆಲಸ ಕೊಡಿಸುವುದು, ಮತ್ತೊಂದು ಕೊಡಿಸುವುದು; ನಾನು ಮಂತ್ರಿಯಾಗಿದ್ದಾಗ ನನ್ನ ಕಚೇರಿಯಲ್ಲಿ ಜನವೋ ಜನ! ಅದು ಏನೆಂದು ನೋಡಿದರೆ, ಅವರು ಶಿಕ್ಷಕರ ವರ್ಗಾವಣೆಯ ಬಗ್ಗೆ ಬಂದಿರುತ್ತಾರೆ ಮತ್ತೆ ಅವರು ಅಷ್ಟು ಸಲೀಸಾಗಿ ಕೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಹೊಸದಾಗಿ ವಿಧಾನಸಭಾ ಶಾಸಕರ ಹತ್ತಿರ ಮಾತ್ರ ಬಂದಿರುವ ಮತ್ತೊಂದು ವ್ಯವಸ್ಥೆ ಎಂದರೆ, ಮಾನ್ಯ ಸದಸ್ಯರು ಹೇಳಿದಂತಹ ಕೆಲವು ಗುತ್ತಿಗೆದಾರರು ನಮ್ಮ ಬಳಿಯಲ್ಲಿ ಹೇಳುತ್ತಾರೆ, 'ತಾವು ಒಂದು ಪತ್ರಕ್ಕೆ ಸಹಿ ಹಾಕಿ ನಮಗೆ ಪತ್ರ ನೀಡಿದರೆ, ನಾವು ಎಫ್.ಡಿ.ಯಿಂದ ನೂರು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿಸಿಕೊಂಡು, ತಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತೇವೆ' ಎಂದು ಹೇಳುತ್ತಾರೆ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರು ಆಮೇಲೆ ಅವರಿಗೆ ಏನು ಬೇಕೋ ಅದನ್ನು ಮಾತನಾಡಿಕೊಳ್ಳಲಿ. ನಾನು ಆಗಲೇ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಎದ್ದು ನಿಂತಾಗ ದಯವಿಟ್ಟು ಮೇಲೆ ಎದ್ದೇಳುವುದು ಬೇಡವೆಂದು ಹೇಳಿದ್ದೇನೆ.

**ಉಪ ಸಭಾಪತಿಯವರು:-** ಮಾನ್ಯ ಮರಿತಿಬ್ಬೇಗೌಡರೆ, ಮಾನ್ಯ ಹೆಚ್.ವಿಶ್ವನಾಥ್‌ರವರು ಅಷ್ಟೊಂದು humorous ಆಗಿ ಮಾತನಾಡುತ್ತಿದ್ದಾರೆ. ಅವರು ತಮ್ಮ ಮಾತನ್ನು ಮುಂದುವರೆಸುವುದಕ್ಕೆ continuity ನೀಡಿ. ಇಲ್ಲವಾದರೆ ಅವರ ಮಾತು brake ಆಗುತ್ತದೆ.

**ಶ್ರೀ ಅಡಗೂರು ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತೇನೆ. ನಾವು ಈಗ ಯಾರ ಜೀತ ಮಾಡುತ್ತಿದ್ದೇವೆ? ಹಾಗಾಗಿ ಇವತ್ತು ನಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಇವತ್ತು ಒಟ್ಟಾರೆಯಾಗಿ ಹಣಕಾಸಿಗೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಭದ್ರತೆ ಎಲ್ಲಿ? ಆದುದರಿಂದ ಸರ್ಕಾರ ಹಲವಾರು ಕಠಿಣವಾದ ಕ್ರಮಗಳನ್ನು ಕೈಗೊಳ್ಳಬೇಕು. Converge

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

the programmes, merge the departments. ಒಂದೊಂದು ಇಲಾಖೆ duplicate ಮಾಡುತ್ತಿವೆ. ಇಲಾಖೆಯವರು ಮಾಡಿದ್ದೇ ಕೆಲಸ. ಅದೇ ಕಾಮಗಾರಿಯನ್ನು ಆ ಇಲಾಖೆಯವರು ಮಾಡುತ್ತಾರೆ, ಮತ್ತೊಂದು ಇಲಾಖೆಯವರು ಮಾಡುತ್ತಾರೆ. ಅದಕ್ಕೆ ಈಗ ರಾಜ್ಯದಲ್ಲಿ 21 ಜನ ಮುಖ್ಯ ಅಭಿಯಂತರರು ಇದ್ದಾರೆ. Minor Irrigation, Major Irrigation, Zilla Panchayat and Taluk Panchayat ಅವರು ಒಂದೇ ರೀತಿಯ ಕೆಲಸವನ್ನು ಮಾಡುತ್ತಾರೆ. ಈಗ ಎಲ್ಲರೂ ಒಂದೇ ರಸ್ತೆಗೆ ಮಣ್ಣು ಹಾಕಿ ಎಲ್ಲಾ ಬಿಲ್ಲುಗಳನ್ನು ತೆಗೆದುಕೊಳ್ಳುತ್ತಾರೆ. ಇದನ್ನೆಲ್ಲಾ ನಿಲ್ಲಿಸಬೇಕು. ಹೀಗಾದರೆ ಸಾಲ ಮಾಡುತ್ತಲೇ ಹೋಗುವುದೇ? ಸಾಲ ಮಾಡುತ್ತಲೇ ಹೋದರೆ ಏನಾಗುತ್ತದೆ? ಸಾಲ ಕೊಟ್ಟಂತಹವರು ಏನು ಹೇಳುತ್ತಾರೆ? ನಮ್ಮ ಹಳ್ಳಿಯಲ್ಲಿ ಸಾಲ ನೀಡಿದಂತಹವರು 'ಹೇ ಮಗನೆ ಬಾರೋ' ಎನ್ನುತ್ತಾರೆ. ಅವರು 'ನೀನು ಬಾ, ಇಲ್ಲವೇ ನಿಮ್ಮ ಮನೆಯವರನ್ನು ಕಳುಹಿಸು' ಎಂದು ಹೇಳುತ್ತಾರೆ. ಈ ರಾಜ್ಯವನ್ನು ಆ ಸ್ಥಿತಿಗೆ ತಂದು ಇಡುತ್ತೀರಾ? ಹಣಕಾಸು ಇಲಾಖೆಯವರಿಗೆ ಇದರ ಅರಿವು ಇಲ್ಲವೇ? ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹಣಕಾಸಿಗೆ ಸಂಬಂಧಪಟ್ಟಂತೆ ತಾವು ಒಂದೆರಡು ದಿವಸ ಅಧಿವೇಶನ ಮಾಡಿ. ಏಕೆಂದರೆ, ವಿತ್ತೀಯ ಕಾರ್ಯಕ್ರಮಗಳು ಬಹಳ ದೊಡ್ಡ ವಿಚಾರಗಳು.

ನಾನು ಕೊನೆಯದಾಗಿ ಹೇಳುವುದೇನೆಂದರೆ, ಮಾನ್ಯ ಉಪ ಮುಖ್ಯಮಂತ್ರಿಗಳಾದ ಗೋವಿಂದ ಎಂ. ಕಾರಜೋಳರವರು ಮೀಸಲಾತಿಯ ಬಗ್ಗೆ ಹೇಳಿದರು. ಇಡೀ ರಾಜ್ಯ ಮೀಸಲಾತಿಯ ಮೇನೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ಮೀಸಲಾತಿಗೆ ಸಂಬಂಧಪಟ್ಟಂತೆ ನಾನು ಸಹ ಹೋಗಿದ್ದೇನೆ. ಕುರುಬ ಜನಾಂಗದವರು ಎಸ್.ಟಿ.ಯಲ್ಲಿ ಮೀಸಲಾತಿ ಬೇಕು ಎನ್ನುತ್ತಿದ್ದಾರೆ. ವಾಲ್ಮೀಕಿ ಜನಾಂಗದವರು ಎಸ್.ಟಿ.ಯಲ್ಲಿ ಶೇಕಡಾ 7½ ಹೆಚ್ಚಿಸಿ ಎನ್ನುತ್ತಿದ್ದಾರೆ. ಪಂಚಮಸಾಲಿಗಳು 2ಎ ಎನ್ನುತ್ತಿದ್ದಾರೆ. ಆಧಿಜಾಂಭವರು ಒಳ ಮೀಸಲಾತಿಯನ್ನು ಜಾರಿ ಮಾಡಿಸಿಕೊಡಿ ಎನ್ನುತ್ತಿದ್ದಾರೆ. ಇದು ಅನಾಥ ಪ್ರಜ್ಞೆಯಿಂದ ಕಾಡುತ್ತಿರುವಂಥದ್ದು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ದೇವರಾಜ ಅರಸುರವರು ಇಂತಹ ಸಮುದಾಯಗಳಿಗೆಲ್ಲಾ ಸಹಾಯ ಮಾಡಿದರು. ಅವರು ಇವರಿಗೆಲ್ಲಾ ಕೇವಲ ಆರ್ಥಿಕ ಕಾರ್ಯಕ್ರಮಗಳನ್ನು ಕೊಡಲಿಲ್ಲ. ಅಂದರೆ, ಮನೆ ಮತ್ತು ನಿವೇಶನವನ್ನು ಕೊಡಲಿಲ್ಲ. ಅವರು ಡಾ॥ಬಿ.ಆರ್.ಅಂಬೇಡ್ಕರ್‌ರವರು ಹೇಳಿರುವುದನ್ನು ಅಕ್ಷರಶಃ ಪಾಲನೆ ಮಾಡಿದಂತಹವರು. ಇವರುಗಳಿಗೆಲ್ಲಾ ರಾಜಕೀಯ ಅಧಿಕಾರ ಕೊಟ್ಟರು. ಡಾ॥ಬಿ.ಆರ್.ಅಂಬೇಡ್ಕರ್‌ರವರು ಒಂದು ಕಡೆ ಏನು ಹೇಳುತ್ತಾರೆಂದರೆ, "political power is the key for the progress of any

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

community in the Democratic India” ಎನ್ನುವಂತಹ ಮಾತನ್ನು ಹೇಳುತ್ತಾರೆ. ಭಾರತದಲ್ಲಿ ಬದುಕುವಂತಹ ವಿವಿಧ ಜಾತಿ, ಜನಾಂಗ, ಧರ್ಮ, ಭಾಷಿಕರ ಭವಿಷ್ಯದ ಬೀಗದ ಹೆಸರು ‘ರಾಜಕೀಯದ ಅಧಿಕಾರ’ ಎನ್ನುವಂತಹ ಮಾತನ್ನು ಹೇಳುತ್ತಾರೆ. ಅಂತಹ ಅಧಿಕಾರವನ್ನು ಈ ಅನಾಥ ಪ್ರಜ್ಞೆಯ ಜನರಿಗೆ ಕೊಟ್ಟಂತಹ ಭೂಪ ಎಂದರೆ ಅದು ದಿವಂಗತ ದೇವರಾಜ ಅರಸು. ಹಾಗಾಗಿ, ವಿಶ್ವಕರ್ಮ, ಮಡಿವಾಳ, ಸವಿತ ಸಮಾಜ, ಕುಂಬಾರ, ಉಪ್ಪಾರ, ವೈಷ್ಣವ, ಈಡಿಗ, ಗಾಣಿಗ, ನೇಕಾರ ಮುಂತಾದವರಿಗೆ ಅನಾಥ ಪ್ರಜ್ಞೆ ಕಾಡುತ್ತಿದೆ. ಅವರು ಕೂಗುವುದಕ್ಕೆ, ಜನರು ಇಲ್ಲ. ಅವರು ಕೂಗಿದರೆ ಅದನ್ನು ಕೇಳಿಸಿಕೊಳ್ಳುವವರು ಯಾರೂ ಇಲ್ಲ. ಇವತ್ತು ಈ ರಾಜ್ಯದಲ್ಲಿ ಪರಿಸ್ಥಿತಿ ಇದೆ. ನಮ್ಮಲ್ಲಿ ಹಿಂದುಳಿದ ವರ್ಗಗಳ ಇಲಾಖೆ, ಎಸ್.ಸಿ. ಮತ್ತು ಎಸ್.ಟಿ.ಗೆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಇಲಾಖೆ ಇದೆ. ಅದರ ಜೊತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೆ. ಯಾವುದಾದರೂ ಇಲಾಖೆಗಳು ಚಳುವಳಿಗಳು ಮತ್ತು ಪಾದಯಾತ್ರೆಗಳ ಬಗ್ಗೆ ತಲೆ ಕೆಡಿಸಿಕೊಂಡಿವೆಯೇ? ಮೀಸಲಾತಿಯಲ್ಲಿ ಏನು ಹೇಳುತ್ತದೆಂದರೆ, to protect the interest of the ethnic communities, which are all the ethnic communities ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಏನಾದರೂ ಅಧ್ಯಯನ ಮಾಡಿದ್ದಾರೆಯೇ? ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೆಲಸ ಕೇವಲ ರಾಜ್ಯೋತ್ಸವ ಮಾಡಿ ಪ್ರಶಸ್ತಿ ಕೊಡುವುದು ಅಷ್ಟೇನಾ? ಎಸ್.ಸಿ. ಮತ್ತು ಎಸ್.ಟಿ. ಇಲಾಖೆಯ ಕೆಲಸ ಕೇವಲ ಸರ್ಟಿಫಿಕೇಟ್ ಮತ್ತು ವಿದ್ಯಾರ್ಥಿ ವೇತನ ಕೊಡುವುದು ಅಷ್ಟೇನಾ? ಈ ರೀತಿ ಯಾವುದಾದರೂ ಮೆರವಣಿಗೆ ಬಂದಾಗ ಸಂಬಂಧಪಟ್ಟಂತಹ ಇಲಾಖೆಯವರು ತಕ್ಷಣ ಸ್ಪಂದಿಸಬೇಕಾಗಿತ್ತು. What the Ministers are doing of that respective departments? What is the responsibility? ಸರ್ಕಾರ ಅವರ ಜೊತೆಯಲ್ಲಿ ಮಾತನಾಡಬೇಕು. ನಮ್ಮ ಬಳಿ ಇಷ್ಟೊಂದು ಇಲಾಖೆಗಳು ಇವೆ. ನಮ್ಮ ಬಳಿ ಸುಮಾರು ವಿಶ್ವವಿದ್ಯಾಲಯಗಳಿವೆ, ನಾವು ಯಾರು ಸಹ ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ನಾವು ಯಾರು ಕೂಡ ಇರುವುದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಹಾಗಾಗಿ ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಕೊಡುವ ಸಲಹೆ ಎಷ್ಟು ಜನರಿಗೆ ಇಷ್ಟವಾಗುತ್ತದೋ ಬಿಡುತ್ತದೋ ಅದು ಬೇರೆ ವಿಚಾರ. ನಾನು ಕೂಡ ಕುರುಬ ಜನಾಂಗದವರಿಗೆ ಎಸ್.ಟಿ.ಯಲ್ಲಿ ಮೀಸಲಾತಿ ಬೇಕೆಂದು ಹೋಗಿದ್ದೆ. ಕುರುಬ ಜನಾಂಗದವರಿಗೂ ಮೀಸಲಾತಿ ನೀಡಲಿ, ವಾಲ್ಮೀಕಿ ಜನಾಂಗದವರಿಗೂ ಮೀಸಲಾತಿ ನೀಡಲಿ, ಮತ್ತೊಬ್ಬರಿಗೂ ಮೀಸಲಾತಿ ನೀಡಲಿ. ಆದರೆ, ಅವರೆಲ್ಲರಿಗೂ ಕೂಡ ಏನು

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂದರೆ, creamy layer ಅನ್ನು impose ಮಾಡಿ. ಎಲ್ಲರಿಗೂ ಮೀಸಲಾತಿಯನ್ನು ಕೊಡಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರ ಮಾತಿಗೆ ವಿರೋಧ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಮೇಜು ಮುರಿದು ಹೋಗುವಂತೆ ತಟ್ಟಬೇಕು. ಇದಕ್ಕೆ creamy layer ಅನ್ನು impose ಮಾಡಿ. ಶ್ರೀ ಅಡಗೂರು ಹೆಚ್. ವಿಶ್ವನಾಥ್‌ರವರಿಗೂ 2-ಎ ವರ್ಗದ ಮೀಸಲಾತಿ ಕೊಡುತ್ತಿದ್ದೀರಿ. ಅವರ ಮಗನಿಗೂ ಕೂಡ 2-ಎ ವರ್ಗದ ಅಡಿಯಲ್ಲಿ ಮೀಸಲಾತಿ ಕೊಡುತ್ತಿದ್ದೀರಿ. ಹಾಗಾದರೆ, ನಮ್ಮ ಊರಿನಲ್ಲಿ ಕುರಿ ಕಾಯುವ ವ್ಯಕ್ತಿಗೆ ಏನು ಕೊಡುತ್ತೀರಿ? ನಮ್ಮ ಸಮುದಾಯದ ಸ್ವಾಮೀಜಿಗಳು ಭಾಷಣ ಮಾಡುತ್ತಿದ್ದಾರೆ. ಶ್ರೀ ಶ್ರೀ ಶ್ರೀ ಪಂಚಮಸಾಲಿ ಸ್ವಾಮೀಜಿ ಇದ್ದರೆ ಸ್ವಾಮೀಜಿಗಳೆಲ್ಲಾ ಸಾಕಷ್ಟು ಭಾಷಣವನ್ನು ಮಾಡಿದರು. ಅವರು ಏನು ಭಾಷಣ ಮಾಡಿದರು ಎಂದರೆ, ಈ ಮೀಸಲಾತಿ ನಮಗೆ ಅಲ್ಲ, ನಮ್ಮ ಸಮಾಜದ ಕಟ್ಟಕಡೆಯ ವ್ಯಕ್ತಿಗೋಸ್ಕರ ಮೀಸಲಾತಿ ನೀಡಿ ಎನ್ನುತ್ತಾರೆ. ಕಾಡು-ಮೇಡುಗಳಲ್ಲಿ ಕುರಿ ಸಮೇತ ಓಡಾಡತಕ್ಕಂಥ ಕುರುಬರಿಗೆ ನೀಡಿ ಎನ್ನುತ್ತಾರೆ. ನಾವೆಲ್ಲರೂ ನಮ್ಮ ಸಮುದಾಯದ ಕಟ್ಟಕಡೆಯ ವ್ಯಕ್ತಿಗೆ ಮೀಸಲಾತಿ ನೀಡಿ ಎಂದು ಕೇಳುತ್ತಿದ್ದೇವೆ. ಎಲ್ಲಾ ಮಠಾಧಿಪತಿಗಳು ಹಾಗೂ ಎಲ್ಲಾ ಜನಾಂಗದ ನಾಯಕರುಗಳು ನೀವು creamy layer ತಂದು ಮೀಸಲಾತಿಯನ್ನು ನೀಡಿ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೂ ಮೀಸಲಾತಿ ಕೊಡುತ್ತಿದ್ದೀರಿ. ಮತ್ತೆ ಅವರ ಮಗನಿಗೂ ಮೀಸಲಾತಿ ಕೊಡುತ್ತಿದ್ದೀರಿ. ಮಾನ್ಯ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳರವರಿಗೂ ಮೀಸಲಾತಿ ಕೊಟ್ಟು, ಅವರ ಮಗನಿಗೂ ಮೀಸಲಾತಿಯನ್ನು ಕೊಡುತ್ತಿದ್ದೀರಿ. ನೀವು creamy layer ಅನ್ನು impose ಮಾಡಿ, ಎಲ್ಲರಿಗೂ ಮೀಸಲಾತಿ ನೀಡಿ. ಹಾಗಾಗಿ, ಇವತ್ತಿನ ದಿವಸ ಸರ್ಕಾರ ಕೂಡ ಈ ಮೀಸಲಾತಿ ವಿಚಾರದಲ್ಲಿ ಬಹಳ ಜತನದಿಂದ, ಗಾಂಭೀರ್ಯದಿಂದ, ಜಾಗೃತಿಯಿಂದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರ ಸಂಬಂಧಪಟ್ಟ ಸಮುದಾಯದ ಪ್ರಮುಖರನ್ನು ಕರೆದು ಮಾತನಾಡಬೇಕಾಗುತ್ತದೆ. ಸಂಬಂಧಪಟ್ಟಂತಹ ಇಲಾಖೆಯ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಮಂಡನೆ ಮಾಡುತ್ತೇನೆ. ತಾವು ನನಗೆ ಮಾತನಾಡುವುದಕ್ಕೆ ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ. ಅದಕ್ಕೆ ಬಹಳ ಸಂತೋಷವಾಗಿದೆ. ಅದಕ್ಕೆ ತಮಗೆ ಅಭಿನಂದನೆಗಳು. ನನ್ನೆಲ್ಲಾ ಸ್ನೇಹಿತರು ಮತ್ತು ಸದಸ್ಯರುಗಳು ನಾನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದನ್ನು ಬಹಳ ಆಸಕ್ತಿಯಿಂದ ಕೇಳಿದ್ದಾರೆ. ಹಾಗಾಗಿ, ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಯಡಿಯೂರಪ್ಪನವರು ಸದನದಲ್ಲಿ ಮಂಡಿಸಿರತಕ್ಕಂಥ ಈ ಆಯವ್ಯಯವನ್ನು ನಾನು ಅತ್ಯಂತ ಸಂತೋಷದಿಂದ ಸ್ವಾಗತ ಮಾಡುತ್ತಾ, ತಮಗೂ ಕೂಡ ನಮಸ್ಕಾರ ಮಾಡಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

**ಉಪ ಸಭಾಪತಿಯವರು:-** ಈಗ ಸದನವನ್ನು ಭೋಜನಕ್ಕಾಗಿ ಮಧ್ಯಾಹ್ನ 2.00 ಗಂಟೆಯವರೆಗೆ ಮುಂದೂಡಲಾಗಿದೆ.

**(364) 10.03.2021 2.10 ವೈಎಲ್-ಬಿಎನ್ಎಸ್**

**(ಮಧ್ಯಾಹ್ನ 1.00 ಗಂಟೆಗೆ ಭೋಜನ ವಿರಾಮಕ್ಕೆ ಮುಂದೂಡಿದ ಸದನವು ಪುನಃ ಮಧ್ಯಾಹ್ನ 2 ಗಂಟೆ 14 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು)**

**ಸಭಾಪತಿಯವರು:-** ಸಭಾನಾಯಕರೆ ಆದಷ್ಟು ಬೇಗ ಸಚಿವರೆಲ್ಲರೂ ಸದನಕ್ಕೆ ಬರುವಂತೆ ಮುಖ್ಯ ಸಚೇತಕರ ಮೂಲಕ ತಿಳಿಸಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸಭಾನಾಯಕರು ಮಾತ್ರ ಸದನದಲ್ಲಿದ್ದಾರೆ.

**ಸಭಾಪತಿಯವರು:-** ನಾನು ಏನು ಮಾಡಲಿ. ಈಗಾಗಲೇ ಸಂಬಂಧಪಟ್ಟ ಸಚಿವರು ಸದನದಲ್ಲಿ ಇರುವಂತೆ ತಿಳಿಸಿರುತ್ತೇನೆ. ಸಚಿವರೆಲ್ಲರೂ ಬರುವವರೆಗೂ ಸದನ ನಡೆಸುವುದು ಬೇಡ, ಸುಮ್ಮನೆ ಇರೋಣ. ಸಂಬಂಧಪಟ್ಟ ಸಚಿವರೆಲ್ಲರೂ ಸದನದಲ್ಲಿ ಇರಬೇಕೆಂದು ಎಷ್ಟು ಸಲ ಹೇಳಬೇಕು? ಸಚಿವರೆಲ್ಲರೂ ಬಂದ ಮೇಲೆ ಮಾತನಾಡೋಣ. ಕೆಳಮನೆಯಲ್ಲಿ ಸದನವು ಮುಂದೂಡಲ್ಪಟ್ಟಿದೆ. ಹಾಗಾದರೆ, ಇಲ್ಲಿಯು ನಾನು ಸದನವನ್ನು ಮುಂದೂಡಲೇ?

**(ಈ ಹಂತದಲ್ಲಿ ಮಾನ್ಯ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ಶ್ರೀಕಂಠೇಗೌಡರು ಸದನವನ್ನು ಮುಂದೂಡುವಂತೆ ತಿಳಿಸಿದರು)**

**ಸಭಾಪತಿಯವರು:-** ಹಾಗಾದರೆ, ಈ ಮಾತನ್ನು ಇಂದಿನ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತಿಳಿಸಬೇಕಾಗಿತ್ತು ಅಲ್ಲವೇ? ಆ ರೀತಿ ತಾವು ಈಗ ಹೇಳಿದರೆ ಸದನವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮುಂದೂಡಲಾಗುವುದಿಲ್ಲ. ಪ್ರಶ್ನೋತ್ತರ ಅವಧಿ, ಬಜೆಟ್ ಮೇಲಿನ ಚರ್ಚೆ ನಡೆಯಬೇಕೆಂದು ಹೇಳುತ್ತೀರಿ. ಹೀಗಿರುವಾಗ ಸದನವನ್ನು ಹೇಗೆ ಮುಂದೂಡುವುದು?

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇಂದು ಬೆಳಗ್ಗೆ 10 ಗಂಟೆ 30 ನಿಮಿಷಕ್ಕೆ ಸದನ ಪ್ರಾರಂಭವಾದ ಪ್ರಯುಕ್ತ ಎಲ್ಲರೂ ಇವತ್ತು ಅರ್ಧ ದಿನ ಮಾತ್ರ ಸದನ ನಡೆಯುತ್ತದೆ ಎಂದು ಭಾವಿಸಿಕೊಂಡಿದ್ದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 10. ಪ್ರಕಟಣೆ

**ಸಭಾಪತಿಯವರು:–** ದಿನಾಂಕ: 10.03.2021 ರಂದು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ ವಿಧಾನ ಪರಿಷತ್ತಿನ 143ನೇ ಅಧಿವೇಶನದ ಉಪವೇಶನದಲ್ಲಿ ದಿನಾಂಕ: 15.03.2021 ರಿಂದ 31.03.2021 ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪವನ್ನು ನಡೆಸಲು ತೀರ್ಮಾನಿಸಲಾಯಿತು.

| ದಿನಾಂಕ: 11.03.2021 ರಂದು ಮಹಾಶಿವರಾತ್ರಿ ಹಬ್ಬ ಇರುವ ಪ್ರಯುಕ್ತ ದಿನಾಂಕ: 12.03.2021 ರಂದು ಕಾರ್ಯಕಲಾಪಗಳಿರುವುದಿಲ್ಲ. | | |
|---|---|---|
| **ದಿನಾಂಕ** | **ಸಮಯ** | **ವಿವರ** |
| 15.03.2021 ರಿಂದ 26.03.2021 | ಬೆಳಗ್ಗೆ 10.30 ರಿಂದ ಸಂಜೆ 5.00 ರವರೆಗೆ | ಪ್ರಶ್ನೋತ್ತರ, ಶೂನ್ಯ ವೇಳೆ ಪ್ರಸ್ತಾವಗಳು ಹಾಗೂ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ |
| | ಸಂಜೆ 5.00 ರಿಂದ ಸಂಜೆ 7.00 ರವರೆಗೆ | ಗಮನ ಸೆಳೆಯುವ ಸೂಚನೆಗಳು, ನಿಯಮ 330, ನಿಯಮ 68 ರಡಿ ಚರ್ಚೆ ಹಾಗೂ ಇತರೆ ಕಾರ್ಯಕಲಾಪಗಳು |
| 29.03.2021 | ಬೆಳಗ್ಗೆ 10.30 ರಿಂದ ಸಂಜೆ 7.00 ರವರೆಗೆ | ಪ್ರಶ್ನೋತ್ತರ, ಶೂನ್ಯ ವೇಳೆ ಪ್ರಸ್ತಾವಗಳು, ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಸರ್ಕಾರದಿಂದ ಉತ್ತರ, ಗಮನ ಸೆಳೆಯುವ ಸೂಚನೆಗಳು, ನಿಯಮ 330, ನಿಯಮ 68 ರಡಿ ಚರ್ಚೆ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಇತರೆ ಕಾರ್ಯಕಲಾಪಗಳು |
| 30.03.2021 ಮತ್ತು 31.03.2021 | ಬೆಳಗ್ಗೆ 10.30 ರಿಂದ ಸಂಜೆ 7.00 ರವರೆಗೆ | ಪ್ರಶ್ನೋತ್ತರ, ಶೂನ್ಯ ವೇಳೆ ಪ್ರಸ್ತಾವಗಳು, ಗಮನ ಸೆಳೆಯುವ ಸೂಚನೆಗಳು, ನಿಯಮ 330, ನಿಯಮ 68 ರಡಿ ಚರ್ಚೆ, ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಹಾಗೂ ಇತರೆ ಕಾರ್ಯಕಲಾಪಗಳು |

ಈ ವರದಿಗೆ ಸದನದ ಅಂಗೀಕಾರವಿದೆ ಎಂದು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗ ವಿತ್ತೀಯ ಕಾರ್ಯಕಲಾಪಗಳ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ. ಮಾನ್ಯ ಹರಿಪ್ರಸಾದ್‌ರವರು ಮಾತನಾಡಲಿ.

## 11.ಸದನದಲ್ಲಿ ಸಂಬಂಧಪಟ್ಟ ಸಚಿವರುಗಳು ಹಾಜರಿಲ್ಲದಿರುವ ಬಗ್ಗೆ

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಅಧಿವೇಶನವು ಬಜೆಟ್ ಅಧಿವೇಶನವಾಗಿದ್ದು, ಬಜೆಟ್ ಮೇಲೆ ಚರ್ಚೆ ಮಾಡಲು ಕರೆಯಲಾಗಿದೆ. ಹಾಗಾಗಿ ಬಜೆಟ್ ಮೇಲಿನ ಚರ್ಚೆ ಮಾಡಲು ಸಂಬಂಧಪಟ್ಟವರು ಯಾರು ಇಲ್ಲದೇ ಈ ಸದನವು ಅನಾಥವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಎರಡು ಕಡೆ ಸದಸ್ಯರ ಕೊರತೆ ಇದೆ. ಹಾಗಾಗಿ ತಾವೇ ನಿರ್ಧಾರ ತೆಗೆದುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಲು 10, 20 ಜನವಾದರೂ ಸದನದಲ್ಲಿ ಇರುವುದು ಬೇಡವೇ? Budget ಮೇಲಿನ ಭಾಷಣದ sanctity ಏನಾಗುತ್ತದೆ? ಒಬ್ಬ senior most leader ಮಾತನಾಡುವಾಗ ಒಂದಷ್ಟು ಜನ ಕೇಳಿಸಿಕೊಳ್ಳುವವರು ಬೇಡವೇ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಂತ್ರಿಯಾಗುವುದಕ್ಕೆ ಯಾವುದೇ ಒಂದು ಪಕ್ಷದ ಟಿಕೆಟ್ ಮೇಲೆ ಆಯ್ಕೆಯಾಗಿ ಅದಕ್ಕೆ ರಾಜೀನಾಮೆ ಕೊಟ್ಟು . . .

**ಸಭಾಪತಿಯವರು:-** ಒಂದು ನಿಮಿಷ. ಮಾನ್ಯ ಸಿ.ಸಿ.ಪಾಟೀಲ್, ಮಾನ್ಯ ಮುರುಗೇಶ ಆರ್.ನಿರಾಣಿ, ಮಾನ್ಯ ನಾಗರಾಜು (ಎಂ.ಟಿ.ಬಿ.), ಮಾನ್ಯ ಗೋಪಾಲಯ್ಯ, ಮಾನ್ಯ ಸಿ.ಪಿ.ಯೋಗೇಶ್ವರ್ ಸದನಕ್ಕೆ ಹಾಜರಾಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಶ್ರೀ ಆರ್.ಶಂಕರ್‌ರವರ ಮನೆಯಲ್ಲಿ ಇವತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಅವರ ಮನೆಗೆ ಹೋಗಿ ಸದನಕ್ಕೆ ಬರುವುದು ಸ್ವಲ್ಪ ತಡವಾಗಬಹುದು. ಸದನವನ್ನು ಪ್ರಾರಂಭ ಮಾಡಿ, ಯಾವುದೇ ಅಡ್ಡಿ ಇಲ್ಲ. ಜೊತೆಗೆ ಎರಡು ಕಡೆಯಲ್ಲಿ ಸ್ವಲ್ಪ ಸದಸ್ಯರ ಕೊರತೆ ಇದೆ.

**ಸಭಾಪತಿಯವರು:-** ಈ ಮಾತನ್ನು ಇಂದಿನ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನ ಮಾಡಬೇಕು. ಸದನ ನಡೆಸುವುದು ಬೇಡವೆಂದು ಹೇಳಿದರೆ ನಾವು ಸುಮ್ಮನಾಗುತ್ತಿದ್ದೆವು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರಿಗೆ ಗಂಭೀರತೆ ಇಲ್ಲವೆಂದು ಕಾಣುತ್ತದೆ. It shows the seriousness of the Government.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಆ ರೀತಿ ಹೇಳುವುದು ಬೇಡ. ನಮಗೂ ಗಂಭೀರತೆ ಇದೆ. ಸದನವನ್ನು ಮುಂದೂಡುವುದಾದರೆ ಮುಂದೂಡಿ, ಸೋಮವಾರ ಈ ವಿಷಯವನ್ನು ತೆಗೆದುಕೊಳ್ಳಿ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸೋಮವಾರ ಬೆಳಗ್ಗೆ 10.30ಕ್ಕೆ ಸದನವನ್ನು ಪ್ರಾರಂಭ ಮಾಡೋಣ.

**ಸಭಾಪತಿಯವರು:-** ಇಲ್ಲದಿದ್ದರೆ 10 ನಿಮಿಷ ಸದನವನ್ನು ಮುಂದೂಡುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, 10 ನಿಮಿಷ ಮಾತ್ರ ಸದನವನ್ನು ಮುಂದೂಡುವುದು ಬೇಡ. ಸದನದಲ್ಲಿ ಜಾಸ್ತಿ ಸದಸ್ಯರು ಇಲ್ಲ. ಅಲ್ಲದೇ ಬಹಳಷ್ಟು ಜನ ಊರಿಗೆ ಹೊರಟಿದ್ದಾರೆ. ದಯವಿಟ್ಟು ಸೋಮವಾರದವರೆಗೂ ಸದನವನ್ನು ಮುಂದೂಡಿ.

**ಸಭಾಪತಿಯವರು:-** ಆ ರೀತಿ ಹೇಳಿದರೆ ಹೇಗಾಗುತ್ತದೆ. 10 ನಿಮಿಷ ಸದನವನ್ನು ಮುಂದೂಡುತ್ತೇನೆ. ಸದನ ನಡೆಯಬೇಕಲ್ಲವೇ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಶಿವರಾತ್ರಿ ಹಬ್ಬದ ಪ್ರಯುಕ್ತ ಬಹಳಷ್ಟು ಸದಸ್ಯರು ಊರಿಗೆ ಹೋಗಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾನಾಯಕರೇ, ಅಧಿವೇಶನ ನಡೆಯುವ ಸಂದರ್ಭದಲ್ಲಿ ಮಾನ್ಯ ಸಚಿವರು ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಆ ರೀತಿ ಏನಿಲ್ಲ. ಮಾನ್ಯ ಸಚಿವರು ಅವರ ಮನೆಯಲ್ಲಿ ಊಟದ ವ್ಯವಸ್ಥೆಯನ್ನು ಹಮ್ಮಿಕೊಂಡಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಅತ್ಯಂತ ಹಿರಿಯ ಸದಸ್ಯರು ಹಾಗೂ ರಾಜ್ಯಸಭೆಯಲ್ಲಿದ್ದಂತಹವರು ಮಾತನಾಡುವಾಗ ಸಾಕಷ್ಟು ಸದಸ್ಯರು ಇರಬೇಕಲ್ಲವೇ? ಸೋಮವಾರಕ್ಕೆ ಸದನವನ್ನು ಮುಂದೂಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಶ್ರೀಕಂಠೇಗೌಡರೆ ತಾವು ಭಾಷಣ ಮಾಡುವುದು ಬೇಡ. ಸುಮ್ಮನೆ ಕುಳಿತುಕೊಳ್ಳಿ, ಮಾನ್ಯ ಸಭಾನಾಯಕರೆ ಸದನವನ್ನು ನಡೆಸುವುದೇ, ಬೇಡವೇ ಹೇಳಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಸೋಮವಾರ ಬೆಳಗ್ಗೆ 10.30ಕ್ಕೆ ಸದನವನ್ನು ಪ್ರಾರಂಭ ಮಾಡೋಣ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಾರಣ ತಿಳಿಸಿ ಸದನವನ್ನು ಮುಂದೂಡಿ.

**ಸಭಾಪತಿಯವರು:–** ಕಾರಣ ನೀಡಬೇಕೆಂದರೆ ಏನು ಹೇಳಲಿ? ತಾವು ಈ ರೀತಿ ಹೇಳುವುದಾದರೆ ನನ್ನ ಅಭ್ಯಂತರವೇನು ಇಲ್ಲ, ಸದನವನ್ನು ಮುಂದುವರೆಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ್‍ಯಾರು ಸದನದಲ್ಲಿ ಇಲ್ಲವೆಂದರೆ, ನಾವು ಏತಕ್ಕೆ ಮಾತನಾಡಬೇಕು? ಮಾನ್ಯ ಸಚಿವರುಗಳು ಸದನದಲ್ಲಿ ಇಲ್ಲದಿರುವಾಗ ನಾವು ಮಾತನಾಡುವುದಕ್ಕಾಗುವುದಿಲ್ಲ. ನಮ್ಮ ಕಂಠ ಶೋಷಣೆ ಮಾಡಿಕೊಳ್ಳುವುದಕ್ಕೆ ಮಾತನಾಡಬೇಕೇ?

**ಸಭಾಪತಿಯವರು:–** ಮಾನ್ಯ ಸಭಾನಾಯಕರೆ, ಸಚಿವರನ್ನು ಕರೆಸುತ್ತೀರಿ ಎಂದರೆ, 10 ನಿಮಿಷ ಸದನವನ್ನು ಮುಂದೂಡುತ್ತೇನೆ. ಇಲ್ಲವೆಂದರೆ, ನೀವು ಹೇಳಿದಂತೆ ಸಭೆಯನ್ನು ಸೋಮವಾರಕ್ಕೆ ಮುಂದೂಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು, leader of the House, 10 ನಿಮಿಷ ಮುಂದೂಡಲು ಅವರು ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಶಂಕರ್‌ರವರ ಮನೆಯಲ್ಲಿ ಊಟದ ವ್ಯವಸ್ಥೆ ಇರುವುದರಿಂದ ಅಲ್ಲಿಗೆ ಹೋಗಿದ್ದು, ಮಾನ್ಯ ಸಚಿವರೆಲ್ಲರೂ ಬರುವುದು ತಡವಾಗಬಹುದು. ಏಕೆಂದರೆ ಎರಡೂ ಕಡೆ ಸದಸ್ಯರ ಕೊರತೆ ಇದೆ. ಸೋಮವಾರಕ್ಕೆ ಸದನವನ್ನು ಮುಂದೂಡಲು ನನ್ನ ಸಹಮತವಿದೆ.

**ಸಭಾಪತಿಯವರು:–** ನಾನು ಈಗ ಅನುಮತಿ ನೀಡಿದರೆ ಸಾಕು, ಆಡಳಿತ ಪಕ್ಷದಲ್ಲಿರುವ 3 ಜನ ಸದಸ್ಯರು ಮಾನ್ಯ ಸಚಿವರ ಮನೆಗೆ ಊಟಕ್ಕೆ ತೆರಳುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:-** ಅವರನ್ನು ಕಳುಹಿಸಿಬಿಡಿ ನೋಡೋಣ.

**(ಮುಂದು)**

**365)10.03.2021/2.20/ಎಸ್‌ಕೆ-ಬಿಎನ್‌ಎಸ್**

**ಶ್ರೀ ಎಸ್.ಆರ್. ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಇಂತಹ ಬಂಡ ಸರ್ಕಾರವನ್ನು, ಇಷ್ಟೊಂದು ಬೇಜವಾಬ್ದಾರಿ, ನಿರ್ಲಕ್ಷತನದ ಸರ್ಕಾರವನ್ನು ನಾನು ಎಲ್ಲಿಯೂ ನೋಡಿಲ್ಲ. ಈ ಸದನದಲ್ಲಿ ಮಂತ್ರಿಗಳೊಬ್ಬರು ಸಹ ಇಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):-** ಬೆಲ್ ಆಗಿದೆ. ಆದರೆ ಬೆಲ್ ಆದ ಕೂಡಲೇ

**ಶ್ರೀ ಎಸ್.ಆರ್. ಪಾಟೀಲ್:-** ಬೆಲ್ ಆಗಿ ...

**ಸಭಾಪತಿಯವರು:-** ಇವತ್ತು ನಾನು ಬೆಲ್‌ನ್ನು ಹದಿನೈದು ನಿಮಿಷಗಳ ಕಾಲ ಹಾಕಿಸಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ತಾವೊಬ್ಬರು ಪ್ರತಾಪ್ ಸಿಂಹ ನಾಯಕ್ ಅವರನ್ನು ಉದ್ದೇಶಿಸಿ, ಮೊದಲು ಸದನಕ್ಕೆ ಬಂದಿದ್ದೀರಾ. ನಾನು ತಮ್ಮನ್ನು ಮೊದಲು ಅಭಿನಂದಿಸಬೇಕು. ಸದನದಲ್ಲಿ ಯಾರೂ ಇರಲಿಲ್ಲ. ತಾವೇ ಮೊದಲು ಬಂದಿದ್ದೀರಾ.

**ಸಭಾಪತಿಯವರು:-** ಮಾನ್ಯ ರವಿಕುಮಾರ್ ಏನಾದರೂ ಹೇಳಿ. ತಾವು ಒಬ್ಬ ಲೀಡರ್.

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನಾಳೆ ಶಿವರಾತ್ರಿ ಹಬ್ಬವಿರುವುದರಿಂದ, ಕೆಳಮನೆಯಲ್ಲಿ ಸದನವನ್ನು ಬೇಗ ಮುಂದೂಡಿದ್ದಾರೆ. ಮಾನ್ಯ ಶ್ರೀಕಂಠರವರು ಮನೆಗೆ ಊಟಕ್ಕೆ ಕರೆದಿರುವುದರಿಂದ, ಸದಸ್ಯರೆಲ್ಲರೂ ಅಲ್ಲಿಗೆ ಹೋಗಿದ್ದಾರೆ. ಬಹಳಷ್ಟು ಜನ ಸದಸ್ಯರು ಸದನಕ್ಕೆ ಬರುತ್ತಾರೆ ಎಂದು ನನಗೆ ಅನಿಸುವುದಿಲ್ಲ. ಹಾಗಾಗಿ, ನಾನು ವಿನಂತಿ ಮಾಡುವುದೇನೆಂದರೆ, ಸೋಮವಾರದವರೆಗೆ ಸದನವನ್ನು ಮುಂದೂಡಬೇಕೆಂದು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಹಾಗಾದರೆ ಒಂದು ಕೆಲಸವನ್ನು ಮಾಡೋಣ. ಸೋಮವಾರ ಬೆಳಗ್ಗೆ 10 ಗಂಟೆಗೆ ಸದನವನ್ನು ಪ್ರಾರಂಭ ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಸದನಕ್ಕೆ ಸದಸ್ಯರು ಬರುತ್ತಾರೆಂದು ಅನಿಸುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**ಸಭಾಪತಿಯವರು:–** ಒಂದು ನಿಮಿಷ. ಸದನದಲ್ಲಿ ಸಚಿವರ ಸಂಖ್ಯೆ ಸಾಕಷ್ಟು ಇಲ್ಲದೇ ಇರುವುದರಿಂದ ಸದನವನ್ನು ಸೋಮವಾರ ಬೆಳಗ್ಗೆ 10 ಗಂಟೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ಸೋಮವಾರ 15ನೇ ಮಾರ್ಚ್ ಮಾಹೇ 2021 ರಂದು ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

<><><>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"